# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಏಪ್ರಿಲ್ 14 ಶುಕ್ರವಾರ 2023

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

43

ಸಂಪುಟ: 43 | ಸಂಚಿಕೆ: 354 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

₹4






# ಡಾ.ಬಿ.ಆರ್.ಅಂಬೇಡ್ಕರ್ ಜನ್ಮ ದಿನಾಚರಣೆ ಇಂದು

ಮೈಸೂರು, ಏ.13– ಮೈಸೂರಿನ ಅಶೋಕಪುರಂ, ಆದಿ ಕರ್ನಾಟಕ ಮಹಾಸಂಸ್ಥೆ ಹಾಗೂ ಮೈಸೂರು ಯುವ ಸಂಘಟನೆಗಳ ಒಕ್ಕೂಟದ ಸಂಯುಕ್ತಾಶ್ರಯದಲ್ಲಿ ಸಂವಿಧಾನಶಿಲ್ಪಿ, ವಿಶ್ವಜ್ಞಾನಿ, ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ 132ನೇ ಜನ್ಮದಿನವನ್ನು ಏ.14ರಂದು ಆಚರಿಸಲಾಗುವುದು.

ಶುಕ್ರವಾರ ಬೆಳಗ್ಗೆ 10 ಗಂಟೆಗೆ ಡಾ.ಬಿ.ಆರ್.ಅಂಬೇಡ್ಕರ್ ಅವರ ಉದ್ಯಾನವನದಲ್ಲಿ ಬಾಬಾ ಸಾಹೇಬ್ ಅವರಿಗೆ ಮಾಲಾರ್ಪಣೆಯೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು. ಮೆರವಣಿಗೆಯನ್ನು ಸಿದ್ದಯ್ಯ ಮತ್ತು ಖಲೀಫ್ ಪೈಪುಟ್ಟಸ್ವಾಮಿ ಉದ್ಘಾಟಿಸಲಿದ್ದಾರೆ. ಅಧ್ಯಕ್ಷತೆಯನ್ನು ಆದಿ ಕರ್ನಾಟಕ ಮಹಾಸಂಸ್ಥೆಯ ಅಧ್ಯಕ್ಷ ಪಿ.ಸಿದ್ದರಾಜು (ಸುನಿಲ್) ವಹಿಸಲಿದ್ದಾರೆ. ಮೆರವಣಿಗೆಯು ಅಂಬೇಡ್ಕರ್ ಉದ್ಯಾನವನದಿಂದ ಅಶೋಕ ವೃತ್ತ ಆರ್‌ಟಿಓ, ರಾಮಸ್ವಾಮಿ ವೃತ್ತ ಸಂಸ್ಕೃತ ಪಾಠಶಾಲೆ, ಕೆ.ಆರ್.ವೃತ್ತದ ಮೂಲಕ ಸಾಗಿ ಟೌನ್‌ಹಾಲ್ ಮುಂಭಾಗವಿರುವ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

# ಏ.19, 20, 'ವೈಸ್ ಎಕ್ಸ್–2023' ವಸ್ತುಪ್ರದರ್ಶನ: ಮಾರಾಟ ಮೇಳ



ವೈಸ್ ಎಕ್ಸ್–2023ರ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳದ ಪೋಸ್ಟರ್ ಬಿಡುಗಡೆ ಸಂದರ್ಭ.

ಮೈಸೂರು,ಏ.13(ಪಿಎಂ)– ಮೈಸೂರು ಛೇಂಬರ್ಸ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿನ ಮಹಿಳಾ ಘಟಕವಾದ ವೈಸ್ (ವುಮೆನ್ ಇನ್ ಸ್ಮಾಲ್ ಎಂಟರ್‌ಪ್ರೈಸಸ್) ವತಿಯಿಂದ ಮಹಿಳಾ ಉದ್ಯಮಿಗಳನ್ನು ಉತ್ತೇಜಿಸಲು ಏ.19 ಮತ್ತು 20ರಂದು 'ವೈಸ್ ಎಕ್ಸ್–2023' ಶೀರ್ಷಿಕೆಯಡಿ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳ ಆಯೋಜಿಸಲಾಗಿದೆ ಎಂದು ವೈಸ್ ಅಧ್ಯಕ್ಷೆ ಟಿ.ಎ.ವಸಂತಕುಮಾರಿ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕುವೆಂಪುನಗರದ ಉದಯರವಿ ರಸ್ತೆಯ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ಮೇಳ ನಡೆಯಲಿದೆ. ಬೆಳಗ್ಗೆ 10.30ರಿಂದ ರಾತ್ರಿ 8.30ರ ವರೆಗೆ ಸಾರ್ವಜನಿಕರು ಭೇಟಿ ನೀಡಬಹುದು. ಪ್ರವೇಶ ಉಚಿತವಿದೆ ಎಂದರು.

ಏ.19ರಂದು ಬೆಳಗ್ಗೆ 10.30ಕ್ಕೆ ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಪತ್ನಿ ತ್ರಿಷಿಕಾ ಕುಮಾರಿ ವಸ್ತುಪ್ರದರ್ಶನಕ್ಕೆ ಚಾಲನೆ ನೀಡಲಿದ್ದಾರೆ. ಇದೇ ವೇಳೆ ಮೂವರು ಮಹಿಳಾ ಸಾಧಕರನ್ನು ಸನ್ಮಾನಿಸಲಾಗುವುದು. ಮಹಿಳಾ ಉದ್ಯಮಿಗಳು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ವೇದಿಕೆ ಕಲ್ಪಿಸುವ ನಿಟ್ಟಿನಲ್ಲಿ ಈ ಮೇಳ ಆಯೋಜಿಸಲಾಗಿದೆ. ಸುಮಾರು 50 ಮಳಿಗೆಗಳನ್ನು (10X10 ಅಡಿ) ವ್ಯವಸ್ಥೆಗೊಳಿಸಲು ಉದ್ದೇಶಿಸಿದ್ದು, ಈಗಾಗಲೇ ಹಲವು ಮಹಿಳಾ ಉದ್ಯಮಿಗಳು ಮಳಿಗೆಗಳನ್ನು ಮುಂಗಡವಾಗಿ ಕಾಯ್ದಿರಿಸಿದ್ದಾರೆ ಎಂದರು.

ಪ್ರತಿ ಮಳಿಗೆಗೆ 4,500 ರೂ. ಬಾಡಿಗೆ ನಿಗದಿ ಮಾಡಲಾಗಿದೆ. ಗ್ರಾಮೀಣ ಪ್ರದೇಶ ಹಾಗೂ ಗುಡಿಕೈಗಾರಿಕೆಯಂತಹ ಸಣ್ಣ ವಹಿವಾಟು ನಡೆಸುವ ಮಹಿಳಾ ಉದ್ಯಮಿಗಳಿಗೆ ವಿನಾಯಿತಿ ನೀಡಿ, 1 ಸಾವಿರ ರೂ. ಬಾಡಿಗೆ ದರದಲ್ಲಿ ಮಳಿಗೆ ನೀಡಲು 10 ಮಳಿಗೆಗಳನ್ನು ಮೀಸಲಿಡಲಾಗುತ್ತಿದೆ. ಮೊದಲು ಬಂದವರಿಗೆ ಮೊದಲ ಆದ್ಯತೆ ಇರಲಿದ್ದು, ಹೆಚ್ಚಿನ ವಿವರಗಳಿಗಾಗಿ 98804 98129 ಅಥವಾ 98451 29701 ಅನ್ನು ಸಂಪರ್ಕಿಸಬಹುದು ಎಂದು ತಿಳಿಸಿದರು. ವೈಸ್ ಉಪಾಧ್ಯಕ್ಷೆ ಪದ್ಮಿನಿ ಶಿವಣ್ಣ, ಜಂಟಿ ಕಾರ್ಯದರ್ಶಿ ಶಶಿಕಲಾ, ಖಜಾಂಚಿ ಕಲ್ಪನಾ ಸುದ್ದಿಗೋಷ್ಠಿಯಲ್ಲಿದ್ದರು.

# ವಿಶ್ವಕರ್ಮ ಸಮುದಾಯದವರು ಕಾಂಗ್ರೆಸ್ ಪಕ್ಷ ಬೆಂಬಲಿಸಿ

## ವಿಶ್ವಕರ್ಮ ಬಡಗಿ ಕೆಲಸಗಾರರ ಸಂಘ ಮನವಿ



ಮೈಸೂರು,ಏ.13(ಪಿಎಂ)–ವಿಶ್ವಕರ್ಮ ಸಮುದಾಯದ ಮುಖಂಡ ಜಿ.ರಘು ಆಚಾರ್ ಅವರಿಗೆ ಕಾಂಗ್ರೆಸ್ ಟಿಕೆಟ್ ಕೈತಪ್ಪಿದ ವಿಚಾರದಲ್ಲಿ ಸಮುದಾಯ ಯಾವುದೇ ಗೊಂದಲಕ್ಕೀಡಾಗದೇ ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಬೆಂಬಲಿಸಬೇಕೆಂದು ಮೈಸೂರು ಜಿಲ್ಲಾ ವಿಶ್ವಕರ್ಮ ಬಡಗಿ ಕೆಲಸಗಾರರ ಸಂಘದ ಅಧ್ಯಕ್ಷ ಎಂ.ಮೊಗಣ್ಣಚಾರ್ ಮನವಿ ಮಾಡಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಘು ಆಚಾರ್ ಅವರಿಗೆ ಚಿತ್ರದುರ್ಗ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಕೈತಪ್ಪಲು ಸ್ವತಃ ಅವರ ವರ್ತನೆಯೇ ಕಾರಣ. ಇನ್ನು ಜೆಡಿಎಸ್‌ನಲ್ಲಿರುವ ವಿಶ್ವಕರ್ಮ ಸಮುದಾಯದ ಕೆಲ ಮುಖಂಡರು ಸಿದ್ದರಾಮಯ್ಯರ ವಿರುದ್ಧ ಸುಳ್ಳು ಆರೋಪ ಮಾಡಿದ್ದಾರೆ. ಮಾ.20ರಂದು ಸಿದ್ದರಾಮಯ್ಯನವರ ಮೈಸೂರು ನಿವಾಸಕ್ಕೆ ನಮ್ಮ ಸಮಾಜದ ಶ್ರೀ ಶಿವಸುಜ್ಞಾನ ತೀರ್ಥ ಸ್ವಾಮೀಜಿ ಭೇಟಿ ನೀಡಿದ್ದ ವೇಳೆ ಶ್ರೀಗಳನ್ನು ಸಾಮಾನ್ಯರು ಕೂರುವಲ್ಲಿ ಕೂರಿಸಿ, ಬಳಿಕ ನಿಲ್ಲಿಸಿಕೊಂಡೇ ಮಾತನಾಡಿಸುವ ಮೂಲಕ ನಮ್ಮ ಸಮುದಾಯಕ್ಕೆ ಸಿದ್ದರಾಮಯ್ಯ ಅಪಮಾನಿಸಿದ್ದಾರೆಂದು ಅವರು ಸುಳ್ಳು ಆರೋಪ ಮಾಡಿದ್ದಾರೆ ಎಂದು ಪ್ರತ್ಯಾರೋಪ ಮಾಡಿದರು.

ತಮ್ಮನ್ನು ಭೇಟಿ ಮಾಡಿದ್ದ ಶ್ರೀಗಳನ್ನು ಸಿದ್ದರಾಮಯ್ಯನವರು ಅತ್ಯಂತ ಗೌರವಪೂರಕವಾಗಿ ಉಪಚರಿಸಿದ್ದಾರೆ ಎಂದು ಸ್ಪಷ್ಟಪಡಿಸಿದರು. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ವಿಶ್ವಕರ್ಮ ಜಯಂತಿ ಆಚರಣೆ ಜಾರಿ ಮಾಡಿತು. ಜೊತೆಗೆ ನಿಗಮ ಸ್ಥಾಪಿಸಿ, ಹಲವೆಡೆ ಸಮುದಾಯ ಭವನ ನಿರ್ಮಾಣಕ್ಕೆ ಅನುದಾನ ನೀಡಿತು. ಹೀಗಾಗಿ ಈ ಬಾರಿ ಚುನಾವಣೆಯಲ್ಲಿ ಸಮುದಾಯವು ಕಾಂಗ್ರೆಸ್ ಬೆಂಬಲಿಸಬೇಕೆಂದು ಕೋರಿದರು. ವಿಶ್ವಕರ್ಮ ಮುಖಂಡರಾದ ಕೆಂಪರಾಜ್, ಸಿದ್ದಪ್ಪಾಜಿ ಹೆಬ್ಬಾಳು, ಕಿರಣ್‌ಕುಮಾರ್ ಆಲನಹಳ್ಳಿ ಗೋಷ್ಠಿಯಲ್ಲಿದ್ದರು.

# ನಾಳೆ ವಿಜಯ ಮಹಾಗಣಪತಿ ದೇವಸ್ಥಾನದಲ್ಲಿ ಬ್ರಹ್ಮ ರಥೋತ್ಸವ



ಮೈಸೂರು,ಏ.13(ಪಿಎಂ)– ಮೈಸೂರಿನ ವಿಜಯನಗರದ 3ನೇ ಹಂತದಲ್ಲಿರುವ ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್‌ನ ಶ್ರೀ ವಿಜಯ ಮಹಾಗಣಪತಿ ದೇವಸ್ಥಾನದಲ್ಲಿ ಏ.15ರಂದು ಬ್ರಹ್ಮ ರಥೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್ ಹಾಗೂ ವಿಜಯನಗರ ವಿಪ್ರವೃಂದದ ಅಧ್ಯಕ್ಷ ಸಿ.ಕೆ.ಮಂಜುನಾಥ್ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 7ರಿಂದಲೇ ದೇವಸ್ಥಾನದಲ್ಲಿ ವಿವಿಧ ಪೂಜಾ ಕೈಂಕರ್ಯಗಳು ನಡೆಯಲಿದ್ದು, ಬೆಳಗ್ಗೆ 10.45ಕ್ಕೆ ಬ್ರಹ್ಮ ರಥೋತ್ಸವ ನಡೆಯಲಿದೆ. ಇದೇ ವೇಳೆ ವೇದ, ಶಾಸ್ತ್ರ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಶ್ರಮಿಸುತ್ತಿರುವ ಘನಪಾಠಿ ಬಿ.ಕೆ.ಲಕ್ಷ್ಮೀನಾರಾಯಣ ಭಟ್ ಅವರಿಗೆ 'ಶ್ರೀ ವಿಜಯ ಮಹಾಗಣಪತಿ ಋಗ್ವೇದ ರತ್ನ ಪ್ರಶಸ್ತಿ' ಪ್ರದಾನ ಮಾಡಲಾಗುವುದು. ಮಧ್ಯಾಹ್ನ 1ಕ್ಕೆ ಅನ್ನಸಂತರ್ಪಣೆ ನಡೆಯಲಿದೆ ಎಂದರು. ವಿಜಯನಗರ ವಿಪ್ರವೃಂದದ ಉಪಾಧ್ಯಕ್ಷ ಶ್ರೀನಾಥ್, ಕಾರ್ಯದರ್ಶಿ ಶ್ರೀನಿವಾಸಮೂರ್ತಿ, ಕಾರ್ಯಕಾರಿ ಸಮಿತಿ ಸದಸ್ಯ ಗಣೇಶ್ ಸುದ್ದಿಗೋಷ್ಠಿಯಲ್ಲಿದ್ದರು.

## ಇಂದು, ನಾಳೆ 'ಸಕ್ಕರೆ ತಿಂದ ಶಾಣ್ಯ' ನಾಟಕ ಪ್ರದರ್ಶನ

ಮೈಸೂರು,ಏ.13– ನಗರದಲ್ಲಿ ಏ.14 ಮತ್ತು 15 ರಂದು ಸಂಜೆ 6:30 ಗಂಟೆಗೆ ರಂಗಾಯಣದ ಭೂಮಿಗೀತ ರಂಗಮಂದಿರದಲ್ಲಿ ಸೋಲಾಪುರದ ವಿದ್ಯಾಸಾಗರ ಅಧ್ಯಾಪಕರು ಬರೆದಿರುವ "ಸಕ್ಕರೆ ತಿಂದ ಶಾಣ್ಯ" ಎಂಬ ನಾಟಕ ಪ್ರದರ್ಶನವನ್ನು ದಾವಣಗೆರೆಯ ವೃತ್ತಿ ರಂಗಭೂಮಿ ರಂಗಾಯಣ ಕಲಾವಿದರಿಂದ ಹಮ್ಮಿಕೊಳ್ಳಲಾಗಿದೆ ಎಂದು ರಂಗಾಯಣದ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವರುಣಾ, ಚಾ.ನಗರ ಕ್ಷೇತ್ರದ ಘೋಷಿತ ಬಿಜೆಪಿ ಅಭ್ಯರ್ಥಿ ಸೋಮಣ್ಣರಿಗೆ ಮೈಸೂರಲ್ಲಿ ಅದ್ಧೂರಿ ಸ್ವಾಗತ

## ಚಾಮುಂಡೇಶ್ವರಿ, ನಂಜುಂಡೇಶ್ವರನ ದರ್ಶನ, ಸುತ್ತೂರು ಶ್ರೀಗಳಿಂದ ಆಶೀರ್ವಾದ ಪಡೆದ ನಂತರ ಪ್ರಮುಖ ಮುಖಂಡರ ಭೇಟಿ



ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಶಾಖಾ ಮಠಕ್ಕೆ ಗುರುವಾರ ಭೇಟಿ ನೀಡಿದ ಸಚಿವ ವಿ.ಸೋಮಣ್ಣ, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದರು. ನಂತರ ಕೆಲಕಾಲ ಚುನಾವಣೆ ಸಂಬಂಧ ಚರ್ಚಿಸಿದರು. ಈ ಸಂದರ್ಭದಲ್ಲಿ ಮೈಸೂರು–ಕೊಡಗು ಸಂಸದ ಪ್ರತಾಪ ಸಿಂಹ ಇನ್ನಿತರರಿದ್ದರು.

ಮೈಸೂರು, ಏ.13 (ಎಂಟಿವೈ)– ವರುಣಾ ವಿಧಾನಸಭಾ ಕ್ಷೇತ್ರದ ಘೋಷಿತ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಗುರುವಾರ ಮೈಸೂರಿಗೆ ಆಗಮಿಸಿದರು. ದಿನವಿಡೀ ಟೆಂಪಲ್ ರನ್ ನಡೆಸಿ ವಿವಿಧ ಮುಖಂಡರನ್ನು ಭೇಟಿಯಾಗಿ ಬೆಂಬಲ ಕೋರಿದರು.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಸ್ಪರ್ಧಿಸಲು ಸಜ್ಜಾಗಿರುವ ಸಚಿವ ವಿ.ಸೋಮಣ್ಣ ಅವರು ಮೈಸೂರಿಗೆ ಬರುತ್ತಿದ್ದಂತೆಯೇ ಮೈಸೂರು–ಬೆಂಗಳೂರು ರಸ್ತೆಯ ಜಂಕ್ಷನ್ ಬಳಿ ಬೆಂಬಲಿಗರು ಅದ್ಧೂರಿಯಾಗಿ ಸ್ವಾಗತಿಸಿದರು.

**ಟೆಂಪಲ್ ರನ್:** ಮೊದಲಿಗೆ ಚಾಮುಂಡಿ ಬೆಟ್ಟದ ತಪ್ಪಲಿನ ಸುತ್ತೂರು ಮಠಕ್ಕೆ ತೆರಳಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರನ್ನು ಭೇಟಿ ಮಾಡಿ, ಚರ್ಚಿಸಿದರು. ನಂತರ ಚಾಮುಂಡಿಬೆಟ್ಟಕ್ಕೆ ತೆರಳಿ ಚಾಮುಂಡೇಶ್ವರಿ ದರ್ಶನ ಪಡೆದರು. ಬಳಿಕ ನಂಜನಗೂಡಿಗೆ ತೆರಳಿ ಶ್ರೀಕಂಠೇಶ್ವರನ ದರ್ಶನ ಪಡೆದರು. ಮೈಸೂರಿಗೆ ಮರಳುವ ಮಾರ್ಗ ಮಧ್ಯೆ ಮಲ್ಲನಮೂಲೆ ಮಠಕ್ಕೂ ಭೇಟಿ ನೀಡಿದರು.

**ಮುಖಂಡರ ಭೇಟಿ:** ಟೆಂಪಲ್ ರನ್ ಬಳಿಕ ಪಕ್ಷದ ಹಿರಿಯ ಮುಖಂಡರ ಭೇಟಿ ಮಾಡಿದ ಸಚಿವ ವಿ.ಸೋಮಣ್ಣ, ವರುಣಾ ಕ್ಷೇತ್ರದಲ್ಲಿ ತಮ್ಮ ಗೆಲುವಿಗೆ ಶ್ರಮಿಸುವಂತೆ ಮನವಿ ಮಾಡಿದರು. ವರುಣಾ ಕ್ಷೇತ್ರದಲ್ಲಿ ಪಕ್ಷದ ಟಿಕೆಟ್ ಆಕಾಂಕ್ಷಿಗಳಾಗಿದ್ದವರನ್ನು ಭೇಟಿ ಮಾಡಿ, ಬೆಂಬಲ ಯಾಚಿಸಿದರು.

ಮೈಸೂರಿನ ಜೆ.ಪಿ.ನಗರದಲ್ಲಿರುವ ವಿಧಾನ ಪರಿಷತ್ ಮಾಜಿ ಸದಸ್ಯ ಪ್ರೊ.ಕೆ.ಆರ್.ಮಲ್ಲಿಕಾರ್ಜುನಪ್ಪ ಅವರನ್ನು ಭೇಟಿ ಮಾಡಿ ಚರ್ಚಿಸಿದರಲ್ಲದೆ, ವರುಣಾ ಹಾಗೂ ಚಾಮರಾಜನಗರ ಕ್ಷೇತ್ರದಲ್ಲಿ ಪ್ರತಿಸ್ಪರ್ಧಿಗಳ ಮಣಿಸಲು ತಂತ್ರಗಾರಿಕೆ ಕುರಿತಂತೆ ಚರ್ಚಿಸಿದರು.

ಬಳಿಕ ಜಯಲಕ್ಷ್ಮೀಪುರಂನಲ್ಲಿರುವ ಚಾಮರಾಜನಗರದ ಸಂಸದ ವಿ.ಶ್ರೀನಿವಾಸ್‌ಪ್ರಸಾದ್ ನಿವಾಸಕ್ಕೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಮೈಸೂರು–ಕೊಡಗು ಸಂಸದ ಪ್ರತಾಪ ಸಿಂಹ, ನಗರ ಬಿಜೆಪಿ ಅಧ್ಯಕ್ಷ ಶ್ರೀವತ್ಸ ಹಾಗೂ ಇನ್ನಿತರರು ಸಾಥ್ ನೀಡಿದರು. ಈ ವೇಳೆ ಏ.17ರಂದು ನಾಮಪತ್ರ ಸಲ್ಲಿಸುತ್ತೇನೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಗಮಿಸುತ್ತಾರೆ. ನಿಮ್ಮ ಬೆಂಬಲ ಬೇಕು ಎಂದು ಪ್ರಸಾದ್ ಅವರಲ್ಲಿ ಮನವಿ ಮಾಡಿದರು. ಇದಕ್ಕೆ ವಿ.ಶ್ರೀನಿವಾಸ್ ಪ್ರಸಾದ್, ನಮ್ಮ ಬೆಂಬಲ ಇದ್ದೇ ಇರುತ್ತದೆ, ಶುಭವಾಗಲಿ ಎಂದು ಹಾರೈಸಿದರು.

ನಂತರ ಬಿಜೆಪಿ ಕಚೇರಿಯಲ್ಲಿ ವರುಣಾ ಕ್ಷೇತ್ರದ ಪ್ರಮುಖ ಮುಖಂಡರೊಂದಿಗೆ ಚರ್ಚಿಸಿದರಲ್ಲದೆ, ಅವರ ಅಭಿಪ್ರಾಯ ಆಲಿಸಿದರು. ಬಳಿಕ ಡಾ.ರಾಜಕುಮಾರ್ ರಸ್ತೆಯಲ್ಲಿರುವ ಜಿ.ಪಂ. ಮಾಜಿ ಅಧ್ಯಕ್ಷ ಪುಟ್ಟಬುದ್ಧಿ ನಿವಾಸಕ್ಕೆ ತೆರಳಿ ಬೆಂಬಲ ಯಾಚಿಸಿದರು. ಪುಟ್ಟಬುದ್ಧಿ ಅವರ ಮಗ ಶರತ್ ವರುಣಾ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದರು.

# ಚುನಾವಣೆ ನಂತರ ಹಾಲಿನ ದರ ಹೆಚ್ಚಳಕ್ಕೆ ಆಗ್ರಹಿಸಿ ಹೋರಾಟ

## ಮೈಮುಲ್ ನಿರ್ದೇಶಕ ಆರ್.ಚಲುವರಾಜು



ಮೈಸೂರು,ಏ.13(ಪಿಎಂ)– ಹೈನುಗಾರಿಕೆ ನಂಬಿರುವ ರೈತರು ಹಾಗೂ ನಂದಿನಿ ಬ್ರ್ಯಾಂಡ್ ಉಳಿಸಬೇಕಾದರೆ ರಾಜ್ಯ ಸರ್ಕಾರ ಸಕಾಲದಲ್ಲಿ ರೈತರಿಗೆ ಪ್ರೋತ್ಸಾಹ ಧನ ನೀಡಬೇಕು. ಮುಖ್ಯವಾಗಿ ಹಾಲಿನ ದರ ಹೆಚ್ಚಳ ಮಾಡಬೇಕು. ಚುನಾವಣೆ ಮುಗಿದ ನಂತರ ಈ ನಿಟ್ಟಿನಲ್ಲಿ ಹೋರಾಟ ನಡೆಸಲಾಗುವುದು ಎಂದು ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ (ಮೈಮುಲ್) ನಿರ್ದೇಶಕ ಆರ್.ಚಲುವರಾಜು ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರದ ನಿರ್ಲಕ್ಷ್ಯದಿಂದ ಕಳೆದ ಮೂರು ವರ್ಷಗಳಲ್ಲಿ ಕೇವಲ ಎರಡು ಲಕ್ಷ ಲೀಟರ್ ಹಾಲಿನ ಉತ್ಪಾದನೆ ಹೆಚ್ಚಳವಾಗಿದೆ. 2019–20ನೇ ಸಾಲಿನಲ್ಲಿ ಪ್ರತಿದಿನ 78 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿತ್ತು. 2022–23ನೇ ಸಾಲಿನಲ್ಲಿ 80 ಲಕ್ಷ ಲೀಟರ್‌ಗೆ ಏರಿಕೆಯಾಗಿದೆ. ಆದರೆ ಗುಜರಾತ್‌ನಲ್ಲಿ 2019–20ನೇ ಸಾಲಿನಲ್ಲಿ ಪ್ರತಿದಿನ ಎರಡು ಕೋಟಿ 15 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿತ್ತು. ಅದೇ ರೀತಿ 2022–23ರ ಸಾಲಿನಲ್ಲಿ ಪ್ರತಿದಿನ ಮೂರು ಕೋಟಿ ಲೀಟರ್‌ಗೆ ಹೆಚ್ಚಳಗೊಂಡಿದೆ.

ರೈತರಿಗೆ ವೈಜ್ಞಾನಿಕ ಬೆಲೆ ನೀಡದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಹಾಲು ಉತ್ಪಾದನೆ ಹೆಚ್ಚಳವಾಗುತ್ತಿಲ್ಲ. ಹೈನುಗಾರಿಕೆ ಉಳಿದರೆ ಮಾತ್ರವೇ ನಂದಿನಿ ಉಳಿಯಲು ಸಾಧ್ಯ. ಗುಜರಾತಿನಲ್ಲಿ ಲೀಟರ್ ಹಾಲಿಗೆ 48ರಿಂದ 55 ರೂ.ವರೆಗೆ ರೈತರಿಗೆ ದೊರೆಯುತ್ತಿದೆ. ಆದರೆ ರಾಜ್ಯದಲ್ಲಿ ಕೇವಲ 32 ರೂ. ಸಿಗುತ್ತಿದೆ. ಇಷ್ಟು ಕಡಿಮೆ ಆದಾಯದಲ್ಲಿ ಹಾಲು ಉತ್ಪಾದನೆಗೆ ಅಗತ್ಯವಿರುವ ಪಶು ಆಹಾರ ಮೊದಲಾದ ಸಾಮಗ್ರಿ ಕೊಳ್ಳಲು ಸಾಧ್ಯವಾಗದೇ ಹಾಲು ಉತ್ಪಾದನೆ ಕುಂಠಿತವಾಗಿದೆ ಎಂದು ಪ್ರತಿಪಾದಿಸಿದರು.

ರಾಜ್ಯ ಬಿಜೆಪಿ ಸರ್ಕಾರ ತನ್ನ ಆಡಳಿತಾವಧಿಯಲ್ಲಿ ಹೈನು ಉದ್ಯಮ ಕಡೆಗಣಿಸಿದ್ದು, ಆ ಮೂಲಕ ನಂದಿನಿ ಮುಳುಗಿಸಿ ಸದ್ಯ ಪ್ರಸ್ತಾಪಿತ ಹಂತದಲ್ಲಿರುವ ವಿಲೀನ ಪ್ರಕ್ರಿಯೆಗೆ ದಾರಿ ಸುಲಭ ಮಾಡಿಕೊಡುವ ಹುನ್ನಾರ ನಡೆಸಿರುವ ಅನುಮಾನ ಕಾಡುತ್ತಿದೆ. ಹಾಲಿನ ದರ ಹೆಚ್ಚಳಕ್ಕೆ ಒಕ್ಕೂಟದಿಂದ ಪ್ರಸ್ತಾವನೆ ಸಲ್ಲಿಸಿದರೂ ಸರ್ಕಾರ ಅನುಮೋದಿಸಲಿಲ್ಲ ಎಂದು ಕಿಡಿಕಾರಿದರು. ಮೈಮುಲ್ ಮಾಜಿ ನಿರ್ದೇಶಕ ಕೆ.ಬಿ.ಪ್ರಭಾಕರ್, ಮುಖಂಡರಾದ ನಾಗರಾಜ್, ಸಾಹುಕಾರಹುಂಡಿ ಮಹದೇವು, ಸಲಾಂ ಗೋಷ್ಠಿಯಲ್ಲಿದ್ದರು.

## ಸಿಕೆಎನ್ ರಾಜಾರಿಗೆ ಶ್ರದ್ಧಾಂಜಲಿ...




ಬುಧವಾರ ನಿಧನರಾದ ಎಸ್‌ಬಿಆರ್‌ಆರ್ ಮಹಾಜನ ಕಾನೂನು ಕಾಲೇಜಿನ ಪ್ರಥಮ ಪ್ರಾಂಶುಪಾಲರು ಹಾಗೂ ಪ್ರಸ್ತುತ ಕಾನೂನು ಅಧ್ಯಯನಗಳ ನಿರ್ದೇಶಕರಾಗಿದ್ದ ಡಾ.ಸಿ.ಕೆ.ಎನ್.ರಾಜಾ ಅವರಿಗೆ ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ.ಮುರಳೀಧರ ಭಾಗವತ್, ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ, ಪ್ರಿನ್ಸಿಪಾಲ್ ತಿಮ್ಮೇಗೌಡ, ಕಾನೂನು ಕಾಲೇಜು ಪ್ರಿನ್ಸಿಪಾಲ್ ಪ್ರಭುಸ್ವಾಮಿ, ಬೋಧಕರು–ಬೋಧಕೇತರರು, ವಿದ್ಯಾರ್ಥಿಗಳು ಸಂತಾಪ ಸಲ್ಲಿಸಿ, ಅವರ ಆತ್ಮಕ್ಕೆ ಶಾಂತಿ ಕೋರಿದರು.

## ಏ.17, ವಿಭಾಗ ಮಟ್ಟದ ಪಿಂಚಣಿ ಅದಾಲತ್

ಮೈಸೂರು, ಏ.13– ಮೈಸೂರು ವಿಭಾಗ ಮಟ್ಟದ ಪಿಂಚಣಿ ಅದಾಲತ್ ಏ.17ರಂದು ಮೈಸೂರು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆಯಲಿದೆ. ಅಂದು ಮಧ್ಯಾಹ್ನ 2 ಗಂಟೆಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯಲಿದೆ.

ಪಿಂಚಣಿ ಅದಾಲತ್‌ನಲ್ಲಿ ಚಾಮರಾಜನಗರ, ಹಾಸನ, ಮಂಡ್ಯ ಮತ್ತು ಚಿಕ್ಕಮಗಳೂರು ಜಿಲ್ಲೆಯ ಪಿಂಚಣಿದಾರರು ತಮ್ಮ ಜಿಲ್ಲೆಯ ಡಿಸಿ ಕಚೇರಿಯ ಕಾನ್ಫರೆನ್ಸ್ ಹಾಲ್‌ನಲ್ಲಿ ಭಾಗವಹಿಸಬಹುದು. ಕಾರ್ಯಕ್ರಮದಲ್ಲಿ ಖಜಾನೆಗಳ ಆಯುಕ್ತಾಲಯದ ಪರವಾಗಿ ರಾಜ್ಯ ಪಿಂಚಣಿ ಮತ್ತು ನಿರ್ವಹಣಾ ಖಜಾನೆಯ ಅಪರ ನಿರ್ದೇಶಕಿ ಡಾ.ವಿ.ಭಾಗ್ಯಲಕ್ಷ್ಮಿ, ಡೆಪ್ಯುಟಿ ಅಕೌಂಟೆಂಟ್ ಜನರಲ್‌ನ ವ್ಯವಸ್ಥಾಪಕರಾದ ಪ್ರಿನ್ಸನ್ ವರ್ಗೀಸ್, ಸಿಪಿಪಿಸಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೆನರಾ ಬ್ಯಾಂಕ್, ಬ್ಯಾಂಕ್ ಆಫ್ ಬರೋಡ ಮತ್ತು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಐದು ಜಿಲ್ಲೆಯ ಖಜಾನಾಧಿಕಾರಿಗಳು ಭಾಗವಹಿಸಲಿದ್ದು, ಅರ್ಹ ಪಿಂಚಣಿದಾರರು ಕಾರ್ಯಕ್ರಮದ ಸದುಪಯೋಗಪಡೆದುಕೊಳ್ಳಬೇಕೆಂದು ರಾಜ್ಯ ಪಿಂಚಣಿ ಪಾವತಿ ಮತ್ತು ನಿರ್ವಹಣಾ ಖಜಾನೆಯ ಅಪರ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೈಸೂರು ಹಾಗೂ ಸುತ್ತಮುತ್ತ ಇಂದು...



## ಇಂದಿನ ಪಂಚಾಂಗ

**14.4.2023 ಶುಕ್ರವಾರ, ಮಳೆ ನಕ್ಷತ್ರ: ಅಶ್ವಿನಿ, 14.04.2023 ರಿಂದ 24.04.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ನವಮಿ, ನಕ್ಷತ್ರ: ಉಷಾ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ**

■ **ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು :** ಅಂಬೇಡ್ಕರ್ ಜಯಂತಿ, ಮುಖ್ಯ ಅತಿಥಿಗಳು : ಸಾಹಿತಿ ಬನ್ನೂರು ಕೆ. ರಾಜು, ಅಧ್ಯಕ್ಷತೆ : ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಪ್ರಾಂಶುಪಾಲ ಡಾ. ಡಿ. ರವಿ, ಸ್ಥಳ: ಕಾಲೇಜಿನ ಕಲಾ ಮಂಟಪ, ಬೆಳಗ್ಗೆ 10ಕ್ಕೆ.

■ **ಮೈಸೂರು ನಗರ ಅಶೋಕಪುರಂ ಆದಿಕರ್ನಾಟಕ ಮಹಾಸಂಸ್ಥೆ, ಯುವ ಸಂಘಟನೆಗಳ ಒಕ್ಕೂಟ, ಅಶೋಕಪುರಂ :** ಡಾ. ಬಿ.ಆರ್. ಅಂಬೇಡ್ಕರ್ ಜನ್ಮ ದಿನಾಚರಣೆ, ಸ್ಥಳ: ಡಾ. ಬಿ.ಆರ್. ಅಂಬೇಡ್ಕರ್ ಉದ್ಯಾನವನ, ಅಶೋಕಪುರಂ, ಬೆಳಗ್ಗೆ 10ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ :** ಡಾ. ಬಿ.ಆರ್.ಅಂಬೇಡ್ಕರ್ ಜನ್ಮ ದಿನಾಚರಣೆ, ಅಧ್ಯಕ್ಷತೆ : ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಉಪಸ್ಥಿತರು : ಕುಲಸಚಿವ ಪ್ರೊ. ಕೆ.ಎಲ್.ಎನ್. ಮೂರ್ತಿ, ಸ್ಥಳ: ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಳಗ್ಗೆ 10ಕ್ಕೆ.

■ **ಡಾ. ಬಿ.ಆರ್. ಅಂಬೇಡ್ಕರ್ ಗಾಂಧಿನಗರ ನಾಗರಿಕರ ಹಿತರಕ್ಷಣಾ ಸಮಿತಿ:** ಡಾ.ಬಿ.ಆರ್. ಅಂಬೇಡ್ಕರ್‌ರವರ 132ನೇ ಜನ್ಮ ದಿನಾಚರಣೆ, ಸಾನ್ನಿಧ್ಯ: ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಉದ್ಘಾಟನೆ: ಕೆಎಸ್‌ಐಐಡಿಸಿ ವ್ಯವಸ್ಥಾಪಕ ನಿರ್ದೇಶಕ ಡಾ.ಎಂ.ಆರ್.ರವಿ, ಮುಖ್ಯ ಅತಿಥಿಗಳು: ಪೊಲೀಸ್ ಆಯುಕ್ತ ಬಿ.ರಮೇಶ್, ಕರಾಮುವಿವಿ ಕುಲಸಚಿವ ಪ್ರೊ. ಕೆ.ಬಿ.ಪ್ರವೀಣ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ವಕೀಲ ಎಸ್.ಉಮೇಶ್, ಸಹಾಯಕ ಆಯುಕ್ತ ನಂಜುಂಡಯ್ಯ, ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಕೆ.ಅರುಣ್‌ಕುಮಾರ್, ಸ್ಥಳ: ಗಾಂಧಿನಗರ ಬಸ್ ನಿಲ್ದಾಣ, ಬೆಳಗ್ಗೆ 10ಕ್ಕೆ.

■ **ಕರ್ನಾಟಕ ಸರ್ಕಾರದ ಮುದ್ರಾಂಕ ಮತ್ತು ನೋಂದಣಿ ಇಲಾಖೆ, ಕ್ರೆಡೈ, ಬಿಎಐ, ಕ್ರೆಡೈ ಯೂತ್ ವಿಂಗ್:** ಕಾವೇರಿ 2.0 ತಂತ್ರಾಂಶ ಜಾಗೃತಿ ಶಿಬಿರ, ಉದ್ಘಾಟನೆ: ಕರ್ನಾಟಕ ಸರ್ಕಾರದ ಮುದ್ರಾಂಕ ಮತ್ತು ನೋಂದಣಿ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್ ಶ್ರೀಮತಿ ಬಿ.ಆರ್. ಮಮತಾ, ಮುಖ್ಯ ಅತಿಥಿಗಳು : ಅಸಿಸ್ಟೆಂಟ್ ಇನ್ಸ್‌ಪೆಕ್ಟರ್ ಆಫ್ ಜನರಲ್ ರಿಜಿಸ್ಟ್ರಾರ್ ಹೆಚ್.ಎಲ್. ಪ್ರಭಾಕರ್, ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ಬಿ.ಎಂ. ಮೋಹನ್ ಕುಮಾರ್ ಪಂಡಿತ್, ಸ್ಥಳ: ಎಂಬಿಸಿಟಿ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಡಾ. ಅಗರವಾಲ್ಸ್ ಕಣ್ಣಿನ ಆಸ್ಪತ್ರೆ :** ಹಿರಿಯ ನಾಗರಿಕರಿಗೆ ಉಚಿತ ಕಣ್ಣಿನ ತಪಾಸಣೆ, ಸ್ಥಳ: ಆಸ್ಪತ್ರೆ ಆವರಣ, ಕುವೆಂಪುನಗರ, ಬೆಳಗ್ಗೆ 10 ರಿಂದ.

■ **ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕ:** ಡಾ.ಬಿ.ಆರ್.ಅಂಬೇಡ್ಕರ್ ಅವರ 132ನೇ ವರ್ಷದ ಜಯಂತಿ ಅಂಗವಾಗಿ ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಸಾಂಸ್ಕೃತಿಕ ಜವಾಬ್ದಾರಿ ಕುರಿತು ಉಪನ್ಯಾಸ, ಉದ್ಘಾಟನೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ವಿಶೇಷ ಉಪನ್ಯಾಸ: ಶಿವಮೊಗ್ಗ ಕುವೆಂಪು ವಿವಿ ಪ್ರಾಧ್ಯಾಪಕ ಡಾ.ಜಿ.ಪ್ರಶಾಂತ್‌ನಾಯಕ, ಮುಖ್ಯ ಅತಿಥಿಗಳು: ಮೈಸೂರು ವಿವಿ ಕುಲಸಚಿವ ಪ್ರೊ. ಕೆ.ಎಂ. ಮಹದೇವನ್, ಅಧ್ಯಕ್ಷತೆ : ಮೈಸೂರು ವಿವಿ ಡಾ.ಬಿ.ಆರ್.ಅಂಬೇಡ್ಕರ್ ಪೀಠದ ಪ್ರೊ.ಆರ್. ಇಂದಿರಾ, ಸ್ಥಳ: ವಿಶ್ವಜ್ಞಾನಿ ಸಭಾಂಗಣ, ಡಾ.ಬಿ.ಆರ್.ಅಂಬೇಡ್ಕರ್ ಕೇಂದ್ರ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಸಿ. ಕೃಷ್ಣಯ್ಯ ಚೆಟ್ಟಿ ಗ್ರೂಪ್ ಆಫ್ ಜ್ಯುವೆಲ್ಲರಿ :** ಅಕ್ಷಯ ತೃತೀಯ ಕೊಡುಗೆ, ಉದ್ಘಾಟನೆ : ಚಲನಚಿತ್ರ ನಟಿ ಶ್ರುತಿ ನಂದೀಶ್, ಸ್ಥಳ: ಹೋಟೆಲ್ ಸಂದೇಶ್ ದಿ ಪ್ರಿನ್ಸ್, ಬೆಳಗ್ಗೆ 10.30ಕ್ಕೆ.

■ **ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ:** ಡಾ.ಬಿ.ಆರ್.ಅಂಬೇಡ್ಕರ್ ಅವರ 132ನೇ ವರ್ಷದ ಜಯಂತಿ, ಉದ್ಘಾಟನೆ: ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಅಧ್ಯಕ್ಷತೆ: ನಗರಾಧ್ಯಕ್ಷ ಆರ್.ಮೂರ್ತಿ, ಉಪಸ್ಥಿತರು: ಶಾಸಕರಾದ ಯತೀಂದ್ರ, ಎಚ್.ಪಿ.ಮಂಜುನಾಥ್, ಅನಿಲ್ ಚಿಕ್ಕಮಾದು, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಡಾ.ಬಿ.ಜೆ.ವಿಜಯಕುಮಾರ್, ಸ್ಥಳ: ಕಾಂಗ್ರೆಸ್ ಕಚೇರಿ, ಬೆಳಗ್ಗೆ 11.30ಕ್ಕೆ.

■ **ಕನ್ನಡ ಸಾಹಿತ್ಯ ಪರಿಷತ್, ಮೈಸೂರು ನಗರ:** ಡಾ. ಬಿ.ಆರ್. ಅಂಬೇಡ್ಕರ್ ಜನ್ಮ ದಿನಾಚರಣೆ ಹಾಗೂ ಡಾ. ಅಮ್ಮಸಂದ್ರ ಸುರೇಶ್ ಅವರ ಸಂವಿಧಾನ ನಾಡಿಮಿಡಿತ–ಜನಮಿಡಿತ ಕೃತಿ ಲೋಕಾರ್ಪಣೆ ಸಮಾರಂಭ, ಉದ್ಘಾಟನೆ : ವಿಧಾನಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕನ್ನಡ ಸಾಹಿತ್ಯ ಪರಿಷತ್ ನಗರಾಧ್ಯಕ್ಷ ಕೆ.ಎಸ್. ಶಿವರಾಮು, ಕೃತಿ ಕುರಿತು : ಲೇಖಕ ನಾ. ದಿವಾಕರ, ಉಪಸ್ಥಿತರು : ಕೃತಿ ಲೇಖಕ ಡಾ. ಅಮ್ಮಸಂದ್ರ ಸುರೇಶ್, ಮಹಿಮಾ ಪ್ರಕಾಶನದ ಕೆ.ವಿ. ಶ್ರೀನಿವಾಸ್, ಎಂ. ಚಂದ್ರಶೇಖರ್, ಎನ್.ಆರ್. ನಾಗೇಶ್, ಎಚ್.ಎಸ್.ಪ್ರಕಾಶ್, ರವಿನಂದನ್, ಸ್ಥಳ: ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 11.30ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ಭೀಮಸೇನಾಚಾರ್ಯ ಪಾಂಡುರಂಗಿ ಅವರಿಂದ ಭಗವದ್ಗೀತೆ ಪ್ರವಚನ – ಅಧ್ಯಾಯ 7 ಕುರಿತು ಪ್ರವಚನ, ಸ್ಥಳ: ಶ್ರೀರಾಯರ ಮಠ, ಜಯಲಕ್ಷ್ಮಿಪುರಂ, ಸಂಜೆ 5 ಗಂಟೆಗೆ

■ **ಶ್ರೀ ಉತ್ತರಾದಿ ಮಠ ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ :** ಶ್ರೀ ಭಗವದ್ಗೀತಾ ಅಭಿಯಾನದ ಅಂಗವಾಗಿ ಪಂಡಿತ್ ಭೀಮಸೇನಾಚಾರ್ಯ ಪಾಂಡುರಂಗಿ ಅವರಿಂದ ಭಗವದ್ಗೀತೆ ಪ್ರವಚನ – ಅಧ್ಯಾಯ 7 ಕುರಿತು ಪ್ರವಚನ, ಸ್ಥಳ: ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಉತ್ತರಾದಿ ಮಠ, ಅಗ್ರಹಾರ, ಸಂಜೆ 6.30ರಿಂದ.

■ **ಶ್ರೀರಾಮ ಮಂದಿರ :** ಶ್ರೀ ರಾಮನವಮಿ, ಬೆಳಗ್ಗೆ ಲಲಿತಾ ಹೋಮ, ಸಂಜೆ 6.30ಕ್ಕೆ ಶ್ರೀ ಸುದರ್ಶನ ಹೋಮ, ಸ್ಥಳ: ಶ್ರೀರಾಮ ಮಂದಿರ, ಜಯನಗರ.

■ **ಗಾನಭಾರತೀ :** ವಿದುಷಿ ಮಂಜುಳ ಸುರೇಂದ್ರ ಅವರಿಂದ ವೀಣಾವಾದನ, ವಿದ್ವಾನ್ ಎಚ್.ಎಲ್. ಶಿವಶಂಕರಸ್ವಾಮಿ–ಮೃದಂಗ, ವಿದ್ವಾನ್ ಎಸ್. ಮಂಜುನಾಥ್ –ಘಟಂ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

■ **ಕರ್ನಾಟಕ ಬುದ್ಧ ಧಮ್ಮ ಸಮಿತಿ :** ಬೋಧಿಸತ್ವ ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಜನ್ಮ ದಿನಾಚರಣೆ ಹಾಗೂ ಸನ್ಮಾನ, ಸಮ್ಮುಖ : ಜೇತವನದ ಬಿಕ್ಕು ಮನೋರಕ್ಖಿತ ಭಂತೇಜಿ, ಅಧ್ಯಕ್ಷತೆ : ಕರ್ನಾಟಕ ಬುದ್ಧ ಧಮ್ಮ ಸಮಿತಿ ಪ್ರಧಾನ ಕಾರ್ಯದರ್ಶಿ ಆರ್. ಮಹಾದೇವಪ್ಪ, ಸನ್ಮಾನಿತರು : ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಮೂಡ್ನಾಕೂಡು ಚಿನ್ನಸ್ವಾಮಿ, ಮುಖ್ಯ ಅತಿಥಿಗಳು : ಪ್ರದೇಶ ಅಭಿವೃದ್ಧಿ ಮಂಡಳಿ ಯೋಜನಾ ಇಲಾಖೆ ನಿರ್ದೇಶಕ ಡಿ. ಚಂದ್ರಶೇಖರಯ್ಯ, ಸ್ಥಳ: ಧ್ಯಾನ ಮಂದಿರ, ಡಿ. ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆ ಆವರಣ, ವಿಜಯನಗರ 1ನೇ ಹಂತ, ಸಂಜೆ 6ಕ್ಕೆ.

■ **ರಂಗಾಯಣ :** ವೃತ್ತರಂಗಭೂಮಿ ರಂಗಾಯಣ ದಾವಣಗೆರೆ ತಂಡದ ಕಲಾವಿದರಿಂದ ಸಕ್ಕರೆ ತಿಂದ ಶಾಣ್ಯ ನಾಟಕ ಪ್ರದರ್ಶನ, ನಿರ್ದೇಶನ : ಕೃಷ್ಣಮೂರ್ತಿ ಗಾಂವ್ಕರ್, ಅನುವಾದ : ಡಾ. ಯಶವಂತ ಸರದೇಶಪಾಂಡೆ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

■ **ನಟನ ರಂಗಶಾಲೆ:** ವಾರಾಂತ್ಯ ರಂಗಶಾಲೆ ಮಕ್ಕಳಿಂದ ಡಾ.ಸಿದ್ದಲಿಂಗಯ್ಯ ಅವರ ಏಕಲವ್ಯ ನಾಟಕ ಪ್ರದರ್ಶನ, ನಿರ್ದೇಶನ: ಚೇತನ್ ಸಿಂಗಾನಲ್ಲೂರು, ಸ್ಥಳ: ನಟನ ರಂಗಶಾಲೆ, ಸಂಜೆ 6.30ಕ್ಕೆ.

## ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಇಂಜಿನಿಯರಿಂಗ್ ವಿದ್ಯಾವಿಕಾಸ, ಪ್ರಾಯೋಜಕರು– ವಿದ್ಯಾವಿಕಾಸ ಇಂಜಿನಿಯರಿಂಗ್ ಕಾಲೇಜ್, ಮೈಸೂರು, 6.40 ಅರಿವಿನ ಶಿಖರ, ಗಾಯನ– ಪಿ.ಸುರಭಿ, ಎನ್.ಹೇಮಾ, ವ್ಯಾಖ್ಯಾನ– ಡಾ.ಲತಾ ಮೈಸೂರು, 7.15 ಭಾವಗೀತೆ–ಮಡಿಕೇರಿ ನಾಗೇಂದ್ರ, ಉಮಾದೇವಿ ಆರ್., ಪಂಚಮ್ ಹಳಿಬಂಡಿ, 9.00 ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 9.30 ಗಾಂಧೀ ಸ್ಮೃತಿ, 10.00 ಹೆಚ್.ಕೆ.ನರಸಿಂಹಮೂರ್ತಿ ಮತ್ತು ಹೆಚ್.ಎನ್.ಭಾಸ್ಕರ್– ವಯೋಲಿನ್ ವಾದನ, 11.30 ಮಿಶ್ರ ಮಾಧುರ್ಯ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್.ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ: ಉಮೇಶ್, 1.00 ರಂಗಗೀತೆಗಳು–ಜಗಜ್ಯೋತಿ ಬಸವೇಶ್ವರ ನಾಟಕದ ಹಾಡುಗಳು, 1.20 ಭಾವಗೀತೆ–ರೋಹಿಣಿ ಸುಧಾಮ್, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ–ಜಿ.ಕೆ.ರವೀಂದ್ರಕುಮಾರ್, 3.00 ಮೌನದಾಚೆಯ ಬೆಳಕು–ಸದಾಶಿವ ಬ್ರಹ್ಮೇಂದ್ರರ ಜೀವನ ಹಾಗೂ ರಚನೆಗಳನ್ನಾಧರಿಸಿದ ವಿಶೇಷ ಕಾರ್ಯಕ್ರಮ ಸರಣಿ, 4.00 ಮಹಿಳಾರಂಗ– ಸಖೀಸಂವಾದ ವಿಷಯ–ನಿಮಗೆ ಖುಷಿ ನೀಡುವ ನಿಮ್ಮ ಕೈತೋಟದ ಹೂಗಿಡಗಳು, ಪ್ರಸ್ತುತಿ–ಕೆ.ಬಿ.ಮೀನಾ, 4.30 ವೃತ್ತಿ ಮಾರ್ಗದರ್ಶನ–ಭೌತಶಾಸ್ತ್ರ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ಕುರ್‌ಪಾದ್ ಮೂರ್ತಿ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್‌ವಾಣಿ, ಅರಣ್ಯ ಕೃಷಿ ಹಾಗೂ ಹೂವಿನ ಕೃಷಿಯಲ್ಲಿನ ಅನುಭವ ಕುರಿತು ಈರನಾಯಕ ಅವರೊಂದಿಗೆ ಸಂದರ್ಶನ, 9.15 ಜನಪದ ಸಂಗೀತ–ನಾಗಬಸಮ್ಮ ಮತ್ತು ತಂಡ, 10.30 ವಾದ್ಯವೃಂದ–ನಾದಂಜಲಿ, ನಿರ್ದೇಶನ– ಮೈಸೂರು ಎಂ.ನಾಗರಾಜ್, 10.30 ಸವಿನೆನಪು

# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 14 ಶುಕ್ರವಾರ 2023

ಸಂಪುಟ: 43 | ಸಂಚಿಕೆ: 354 | ಪುಟಗಳು: 12

ಮೈಸೂರು ಮಿತ್ರ 43

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




## ಮೊದಲ ದಿನವೇ ರಾಜ್ಯಾದ್ಯಂತ ಸಚಿವರು ಸೇರಿದಂತೆ
# 221 ಮಂದಿ ನಾಮಪತ್ರ ಸಲ್ಲಿಕೆ

**ಬೆಂಗಳೂರು ಏ.13(ಕೆಎಂಶಿ)– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಂಪುಟದ ಹಲವು ಸಚಿವರು ಸೇರಿದಂತೆ ರಾಜ್ಯದಾದ್ಯಂತ ಮೊದಲ ದಿನವಾದ ಇಂದು ಒಟ್ಟು 221 ಮಂದಿ ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ನಾಮಪತ್ರ ಸಲ್ಲಿಸಿದ್ದಾರೆ.**

ಪ್ರಸಕ್ತ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಇಂದು ಅಧಿಸೂಚನೆ ಹೊರ ಬೀಳುತ್ತಿದ್ದಂತೆಯೇ ನಾಮಪತ್ರ ಸಲ್ಲಿಕೆ ಕಾರ್ಯ ಆರಂಭವಾಯಿತಲ್ಲದೆ, ವಿವಿಧ ರಾಜಕೀಯ ಪಕ್ಷಗಳ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದರು. ಸಚಿವರಾದ ಬೀಳಗಿಯಿಂದ ಮುರುಗೇಶ್ ನಿರಾಣಿ, ಯಶವಂತಪುರದಿಂದ ಎಸ್.ಟಿ.ಸೋಮಶೇಖರ್, ಚಿಕ್ಕಬಳ್ಳಾಪುರದಿಂದ ಡಾ. ಸುಧಾಕರ್, ನರಗುಂದದಿಂದ ಸಿ.ಸಿ. ಪಾಟೀಲ್, ಗೋಕಾಕ್‌ನಿಂದ ರಮೇಶ್ ಜಾರಕಿಹೊಳಿ ಸೇರಿದಂತೆ ಹಲವು ಸಚಿವರು ಮತ್ತು ವಿವಿಧ ಪಕ್ಷಗಳ ಮುಖಂಡರು ತಮ್ಮ ಸ್ವಕ್ಷೇತ್ರಗಳಲ್ಲಿ ಅಧಿಕೃತ ಚುನಾವಣಾ ಅಧಿಕಾರಿಗಳಿಗೆ ನಾಮಪತ್ರ ಸಲ್ಲಿಸಿದರು.



ಈಗಾಗಲೇ ಆಡಳಿತಾರೂಢ ಬಿಜೆಪಿ ಎರಡು ಕಂತಿನಲ್ಲಿ 212 ಮಂದಿ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿದ್ದು, ಪ್ರತಿಪಕ್ಷ ಕಾಂಗ್ರೆಸ್ ಕೂಡ ಎರಡು ಕಂತುಗಳಲ್ಲಿ 166 ಮಂದಿ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ನೇತೃತ್ವದ ಜಾತ್ಯತೀತ ಜನತಾದಳ ಮೊದಲ ಹಂತದಲ್ಲಿ 93 ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿದ್ದು, ಶುಕ್ರವಾರ ಎರಡನೇ ಪಟ್ಟಿಯನ್ನು ಬಿಡುಗಡೆ ಮಾಡಲಿದೆ.

ನಾಮಪತ್ರ ಸಲ್ಲಿಸಲು ಆರಂಭದ ದಿನವಾದ ಇಂದು ವಿವಿಧ ಪಕ್ಷಗಳ ಹಾಲಿ ಶಾಸಕರು,ಮಾಜಿ ಶಾಸಕರು ಮತ್ತು ಪಕ್ಷೇತರರು ಸೇರಿದಂತೆ ಐನೂರಕ್ಕೂ ಹೆಚ್ಚು ಮಂದಿ ತಮ್ಮ ಉಮೇದುವಾರಿಕೆಯನ್ನು ಸಲ್ಲಿಸಿದರು. ಈ ಬಾರಿ 224 ವಿಧಾನ ಸಭಾ ಕ್ಷೇತ್ರಗಳಲ್ಲೂ ಪ್ರಬಲ ಪೈಪೋಟಿ ನಡೆಯುವುದು ನಿಶ್ಚಿತವಾಗಿದ್ದು, ಬಹುತೇಕ ಕ್ಷೇತ್ರಗಳಲ್ಲಿ ತ್ರಿಕೋನ ಸ್ಪರ್ಧೆ ಏರ್ಪಡಲಿದ್ದು, ಆಡಳಿತಾರೂಢ ಬಿಜೆಪಿ, ಪ್ರಮುಖ ಪ್ರತಿಪಕ್ಷಗಳಾದ ಕಾಂಗ್ರೆಸ್ ಮತ್ತು ಜೆಡಿಎಸ್ ನಡುವೆ ನೇರ ಹಣಾಹಣಿ ನಡೆಯುವುದು ನಿಶ್ಚಿತವಾಗಿದೆ. ಈ ಮಧ್ಯೆ ಅರವಿಂದ ಕೇಜ್ರಿವಾಲ್ ನೇತೃತ್ವದ ಆಮ್ ಆದ್ಮಿ ಪಕ್ಷ, ಗಾಲಿ ಜನಾರ್ಧನರೆಡ್ಡಿ ಅವರ ಕರ್ನಾಟಕ ರಾಜ್ಯ ಪ್ರಗತಿ ವಿಕಾಸ ಪಕ್ಷ ಸೇರಿದಂತೆ ಹಲವು ಪಕ್ಷಗಳು ತಮ್ಮ ಅದೃಷ್ಟ ಪರೀಕ್ಷೆಗೆ ಮುಂದಾಗಿವೆ.

ನಾಮಪತ್ರ ಸಲ್ಲಿಕೆಗೆ ಏಪ್ರಿಲ್ 20 ಕಡೆಯ ದಿನವಾಗಿದ್ದು, ನಾಮಪತ್ರಗಳ ಪರಿಶೀಲನೆ ಕಾರ್ಯ ಏಪ್ರಿಲ್ 21 ರಂದು ನಡೆಯಲಿದೆ. ನಾಮಪತ್ರ ಹಿಂತೆಗೆದುಕೊಳ್ಳಲು ಏಪ್ರಿಲ್ 24 ಕೊನೆಯ ದಿನವಾಗಿರುತ್ತದೆ. ನಾಮಪತ್ರ ಸಲ್ಲಿಕೆಗೆ ● 9ನೇ ಪುಟಕ್ಕೆ

---

**ವಿಧಾನಸಭಾ ಚುನಾವಣೆ ಅಧಿಸೂಚನೆ ಪ್ರಕಟ: ಮೈಸೂರು ಜಿಲ್ಲೆಯಲ್ಲಿ ಮೊದಲ ದಿನ**

## ಪಿರಿಯಾಪಟ್ಟಣ ಕಾಂಗ್ರೆಸ್ ಅಭ್ಯರ್ಥಿ ಕೆ.ವೆಂಕಟೇಶ್ ಸೇರಿ
# 16 ಮಂದಿ ನಾಮಪತ್ರ ಸಲ್ಲಿಕೆ

■ ಅಧಿಕೃತವಾಗಿ ಪಕ್ಷದ ಟಿಕೆಟ್ ಘೋಷಣೆ ಆಗದೆ ವಿವಿಧ ಪಕ್ಷದ ಅಭ್ಯರ್ಥಿಗಳಲ್ಲಿ ಗೊಂದಲ ■ ಕೆಲವರ ಪಾಲಿಗೆ ಶುಕ್ರವಾರ ಶುಭ ದಿನವಾದರೂ ಅಂಬೇಡ್ಕರ್ ಜಯಂತಿ ರಜೆ

ಮೈಸೂರು, ಏ.13(ಆರ್‌ಕೆ)– ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆಗೆ(2023) ಅಧಿಸೂಚನೆ ಪ್ರಕಟವಾದ ಇಂದು ಪಿರಿಯಾಪಟ್ಟಣದಲ್ಲಿ ಕಾಂಗ್ರೆಸ್ ಅಭ್ಯರ್ಥಿ, ಮಾಜಿ ಶಾಸಕ ಕೆ.ವೆಂಕಟೇಶ್ ಸೇರಿದಂತೆ ಮೈಸೂರು ಜಿಲ್ಲೆಯಲ್ಲಿ ಮೊದಲ ದಿನ 16 ಮಂದಿ ನಾಮಪತ್ರ ಸಲ್ಲಿಸಿದ್ದಾರೆ.

ಜಿಲ್ಲೆಯ ಎಲ್ಲಾ 11 ವಿಧಾನಸಭಾ ಕ್ಷೇತ್ರಗಳ ಚುನಾವಣಾಧಿಕಾರಿಗಳು ಅಧಿಕೃತ ಅಧಿಸೂಚನೆ ಹೊರಡಿಸುತ್ತಿದ್ದಂತೆಯೇ ತಮ್ಮ ಕಚೇರಿಗಳಲ್ಲಿ ಬೆಳಗ್ಗೆ 11 ಗಂಟೆಯಿಂದ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭಿಸಿದರು. ಪಿರಿಯಾಪಟ್ಟಣ ಕ್ಷೇತ್ರದಿಂದ ಮಾಜಿ ಶಾಸಕ ಕೆ.ವೆಂಕಟೇಶ್ ಅವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದು, ಆರ್. ತುಂಗಾ ಶ್ರೀನಿವಾಸ್ ಪಕ್ಷೇತರರಾಗಿ ಉಮೇದುವಾರಿಕೆ ಸಲ್ಲಿಸಿದ್ದಾರೆ. ಕೆ.ಆರ್. ನಗರ ಕ್ಷೇತ್ರದಲ್ಲಿ ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್)ಯ ಪರಮೇಶ್, ಹುಣಸೂರಲ್ಲಿ ಪಕ್ಷೇತರರಾಗಿ ತಿಮ್ಮಾಬೋವಿ, ಬೀರೇಶ್, ಹೆಚ್.ಡಿ.ಕೋಟೆಯಲ್ಲಿ ಭಾರತೀಯ ಜನತಾ ಪಾರ್ಟಿ(ಬಿಜೆಪಿ) ಆಕಾಂಕ್ಷಿ ಎಸ್.ರೂಪಾ, ಚಾಮುಂಡೇಶ್ವರಿಯಲ್ಲಿ ಕರ್ನಾಟಕ ರಾಷ್ಟ್ರ ಸಮಿತಿಯ ಎಂ.ಎಸ್. ಪ್ರವೀಣ್, ಮೈಸೂರಿನ ಕೃಷ್ಣರಾಜ ಕ್ಷೇತ್ರದಲ್ಲಿ ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯೂನಿಸ್ಟ್)ದ ಪಿ.ಎಸ್.ಸಂಧ್ಯಾ, ಕರ್ನಾಟಕ ರಾಷ್ಟ್ರ ಸಮಿತಿಯ ಕೆ.ಎಸ್.ಸೋಮಸುಂದರ್, ಉತ್ತಮ ಪ್ರಜಾಕೀಯ ಪಾರ್ಟಿಯ ಎಸ್.ಸುಮಲತಾ, ನರಸಿಂಹರಾಜದಿಂದ ● 9ನೇ ಪುಟಕ್ಕೆ




---



# ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಶತಸಿದ್ಧ

● ಚುನಾವಣಾ ಪೂರ್ವ ಸಿದ್ಧತಾ ಸಭೆಯಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ ಅತೀವ ವಿಶ್ವಾಸ ● ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಮಾವಿನಹಳ್ಳಿ ಸಿದ್ದೇಗೌಡ ಗೆಲುವಿಗೆ ಮನವಿ

ಮೈಸೂರು, ಏ.13(ಎಂಟಿವೈ)–ಬಿಜೆಪಿ ಸರ್ಕಾರದ ದುರಾಡಳಿತದಿಂದ ರಾಜ್ಯದ ಜನತೆ ಬೇಸತ್ತಿದ್ದು, ಈ ಬಾರಿ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವುದು ಖಚಿತ. ಚಾಮುಂಡೇಶ್ವರಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಈ ಬಾರಿ ಪಕ್ಷದ ಅಭ್ಯರ್ಥಿ ಮಾವಿನಹಳ್ಳಿ ಸಿದ್ದೇಗೌಡ ಅವರನ್ನು ಗೆಲ್ಲಿಸಬೇಕು ಎಂದು ಮಾಜಿ ಸಿಎಂ ಸಿದ್ದರಾಮಯ್ಯ ಮನವಿ ಮಾಡಿದ್ದಾರೆ.

ಮೈಸೂರು ತಾಲೂಕಿನ ಕೇರ್ಗಳ್ಳಿಯ ಕಲ್ಯಾಣಮಂಟಪವೊಂದರಲ್ಲಿ ಗುರುವಾರ ಮಧ್ಯಾಹ್ನ ನಡೆದ ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಮುಖಂಡರ ಚುನಾವಣಾ ಪೂರ್ವ ಸಿದ್ಧತಾ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಚಾಮುಂಡೇಶ್ವರಿ ಕ್ಷೇತ್ರ ನನಗೆ ರಾಜಕೀಯ ಜನ್ಮ ನೀಡಿದ ಕ್ಷೇತ್ರ. ಈ ಕ್ಷೇತ್ರದ ಜನರ ಮೇಲೆ ನನಗೆ ಅಪಾರವಾದ ಗೌರವ, ಪ್ರೀತಿ ಇದೆ. ಆ ಕಾರಣದಿಂದಲೇ ನಾನು ಮುಖ್ಯಮಂತ್ರಿಯಾಗಿದ್ದ ವೇಳೆ ಚಾಮುಂಡೇಶ್ವರಿ ಕ್ಷೇತ್ರದ ಅಭಿವೃದ್ಧಿಗೆ ಸಾಕಷ್ಟು ಅನುದಾನ ನೀಡಿದ್ದೇನೆ. ಈ ಚುನಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದಿಂದ ಸ್ಪರ್ಧಿಸುವಂತೆ ಕ್ಷೇತ್ರದ ಜನತೆ ಮನವಿ ಮಾಡಿದ್ದರು. ಆದರೆ, ಕೊನೆ ಚುನಾವಣೆಯನ್ನು ಹುಟ್ಟೂರು ಇರುವ ವರುಣಾ ಕ್ಷೇತ್ರದಿಂದ ಸ್ಪರ್ಧಿಸಲು ಬಯಸಿದ್ದೇನೆ. ಚಾಮುಂಡೇಶ್ವರಿ ಕ್ಷೇತ್ರದಿಂದ ಸ್ಪರ್ಧೆ ಮಾಡಲು 11 ಆಕಾಂಕ್ಷಿಗಳು ಅರ್ಜಿ ಸಲ್ಲಿಸಿದ್ದರು. ಈ 11 ಜನರೂ ಗೆಲ್ಲುವ ಸಾಮರ್ಥ್ಯ ಹೊಂದಿದ್ದಾರೆ. ಆದರೆ ಎಲ್ಲರ ಅಭಿಪ್ರಾಯ ಪಡೆದು ಮಾವಿನಹಳ್ಳಿ ಸಿದ್ದೇಗೌಡರನ್ನು ಅಂತಿಮವಾಗಿ ಹೈಕಮಾಂಡ್ ಅಧಿಕೃತ ಅಭ್ಯರ್ಥಿ ಎಂದು ಘೋಷಣೆ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಈ ಬಾರಿ ಚುನಾವಣೆಯಲ್ಲಿ ● 6ನೇ ಪುಟಕ್ಕೆ


ಚಾಮುಂಡೇಶ್ವರಿ ಕ್ಷೇತ್ರದ ವ್ಯಾಪ್ತಿಯ ಕೇರ್ಗಳ್ಳಿ ಗ್ರಾಮದ ಕಲ್ಯಾಣಮಂಟಪವೊಂದರಲ್ಲಿ ಗುರುವಾರ ಆಯೋಜಿಸಿದ್ದ ಚುನಾವಣಾ ಪೂರ್ವ ಪ್ರಚಾರ ಕಾರ್ಯಕ್ರಮ ಹಾಗೂ ಪಕ್ಷ ಸೇರ್ಪಡೆ ಕಾರ್ಯಕ್ರಮವನ್ನು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಉದ್ಘಾಟಿಸಿದರು. ಕೆ.ಮರೀಗೌಡ, ಡಾ.ಡಿ.ತಿಮ್ಮಯ್ಯ, ಮಾವಿನಹಳ್ಳಿ ಸಿದ್ದೇಗೌಡ, ಬೀರಿಹುಂಡಿ ಬಸವಣ್ಣ, ಡಾ.ಬಿ.ಜೆ.ವಿಜಯಕುಮಾರ್ ಇನ್ನಿತರರು ಹಾಜರಿದ್ದರು.

---

# ಏ.17ಕ್ಕೆ ವರುಣಾ, ಏ.19ಕ್ಕೆ ಚಾ.ನಗರ ಕ್ಷೇತ್ರದಿಂದ ನಾಮಪತ್ರ ಸಲ್ಲಿಕೆ: ಮೈಸೂರಲ್ಲಿ ಬಿಜೆಪಿ ಅಭ್ಯರ್ಥಿ ಸೋಮಣ್ಣ ಘೋಷಣೆ

■ ಜಿಲ್ಲಾ ಉಸ್ತುವಾರಿ ಸಚಿವನಾಗಿ ವರುಣಾ ಅರಿವಿದೆ ■ ವಿಜಯೇಂದ್ರ ಬಂದರೆ ಕ್ಷೇತ್ರ ತ್ಯಾಗಕ್ಕೆ ಸಿದ್ಧ ■ ಯಡಿಯೂರಪ್ಪರಿಂದ ತಮ್ಮ ಪರ ಪ್ರಚಾರ



ಮೈಸೂರು,ಏ.13(ಎಂಟಿವೈ)– ವರುಣಾ ವಿಧಾನಸಭಾ ಕ್ಷೇತ್ರದಿಂದ ಏ.17ರಂದು ಹಾಗೂ ಚಾಮರಾಜನಗರ ವಿಧಾನಸಭಾ ಕ್ಷೇತ್ರದಿಂದ ಏ.19ರಂದು ನಾಮಪತ್ರ ಸಲ್ಲಿಸುತ್ತೇನೆ. ಪಕ್ಷದ ವರಿಷ್ಠರು ನನ್ನ ಮೇಲೆ ವಿಶ್ವಾಸ ವಿಟ್ಟು ಎರಡು ಕ್ಷೇತ್ರದಿಂದ ಸ್ಪರ್ಧಿಸಲು ಅವಕಾಶ ಮಾಡಿಕೊಟ್ಟಿದ್ದಾರೆ. ಅವರನ್ನು ಅಭಿನಂದಿಸುತ್ತೇನೆ ಎಂದು ವರುಣಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ, ಸಚಿವ ವಿ.ಸೋಮಣ್ಣ ತಿಳಿಸಿದ್ದಾರೆ.

ಮೈಸೂರಿನ ಚಾಮರಾಜ ಮೊಹಲ್ಲಾದಲ್ಲಿರುವ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವರುಣಾ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತೇನೆ. ಮೈಸೂರು ಜಿಲ್ಲೆ ಉಸ್ತುವಾರಿ ಸಚಿವರಾಗಿದ್ದ ವೇಳೆ ವರುಣಾ ಕ್ಷೇತ್ರವನ್ನು ಸುತ್ತಾಡಿದ್ದೆ. ಮೈಸೂರು ತನ್ನದೇ ಇತಿಹಾಸ ಹೊಂದಿದ್ದು, ಶಾಂತಿ–ನೆಮ್ಮದಿ, ಉನ್ನತ ಮೂಲ ಸೌಕರ್ಯಗಳ ಅಗತ್ಯವಿದೆ. ಪಕ್ಷದ ವರಿಷ್ಠರು ಅರ್ಹತೆ ಮೇಲೆ ಟಿಕೆಟ್ ನೀಡಿದ್ದಾರೆ. ಸಾಮಾನ್ಯ ಜನರೂ ಲೋಕಸಭೆ ಮತ್ತು ವಿಧಾನಸಭೆಗೆ ಹೋಗಬಹುದು ಎಂಬ ಸಂದೇಶವನ್ನು ಬಿಜೆಪಿ ನೀಡಿದೆ. ● 9ನೇ ಪುಟಕ್ಕೆ

---



---

# ಕೊಡಗು ವಿಹೆಚ್‌ಪಿ ಅಧ್ಯಕ್ಷನ ಕಾರಿನ ಮೇಲೆ ಗುಂಡಿನ ದಾಳಿ

## ಮಡಿಕೇರಿ ಸಮೀಪ ಘಟನೆ, ಕೂದಲೆಳೆಯ ಅಂತರದಲ್ಲಿ ಪಾರಾದ ಪಿ.ಕೃಷ್ಣಮೂರ್ತಿ

● ಕಡು ಕತ್ತಲಲ್ಲಿ ಗಿಡಗಳ ಮರೆಯಿಂದ ದಾಳಿ ● ಕಾರಿನ ಕಿಟಕಿ ಗಾಜು ಪುಡಿಪುಡಿ

ಮಡಿಕೇರಿ, ಏ.13–ವಿಶ್ವ ಹಿಂದೂ ಪರಿಷತ್‌ನ ಕೊಡಗು ಜಿಲ್ಲಾಧ್ಯಕ್ಷ ಹಾಗೂ ವಕೀಲ ಪಿ.ಕೃಷ್ಣಮೂರ್ತಿ ಅವರ ಕಾರಿನ ಮೇಲೆ ಗುಂಡಿನ ದಾಳಿ ನಡೆಸಿ, ಅವರ ಹತ್ಯೆಗೆ ಯತ್ನಿಸಿರುವ ಘಟನೆ ಇಲ್ಲಿಗೆ ಸಮೀಪದ ಚೆಟ್ಟಳ್ಳಿ ಬಳಿ ಬುಧವಾರ ರಾತ್ರಿ ನಡೆದಿದೆ.

**ಘಟನೆ ಹಿನ್ನೆಲೆ:** ವಕೀಲ ಪಿ.ಕೃಷ್ಣಮೂರ್ತಿ ಅವರು ಕುಶಾಲನಗರದಲ್ಲಿ ಏರ್ಪಡಿಸಲಾಗಿದ್ದ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡಿದ್ದರು. ಕಾರ್ಯಕ್ರಮ ಮುಗಿಸಿ ಚೆಟ್ಟಳ್ಳಿ ಗ್ರಾಪಂ ಸದಸ್ಯ ಹಾಗೂ ವಕೀಲ ಬಲ್ಲಾರಂಡ ಕಂಠಿ ಕಾರ್ಯಪ್ಪ ಅವರನ್ನು ತಮ್ಮ ಕಾರಿನಲ್ಲೇ ಕರೆತಂದು ಚೆಟ್ಟಳ್ಳಿಯ ಅವರ ನಿವಾಸಕ್ಕೆ ಬಿಟ್ಟು ಮಡಿಕೇರಿ ಕಡೆಗೆ ಪ್ರಯಾಣ ಬೆಳೆಸಿದ್ದಾರೆ. ಈ ಸಂದರ್ಭದಲ್ಲಿ ಅಬ್ಯಾಲ ಬಳಿ ಏಕಾಏಕಿ ಗುಂಡಿನ ದಾಳಿ ನಡೆಸಲಾಗಿದೆ. ಚಾಲಕನ ಸೀಟಿನ ಕಿಟಕಿ ತೆರೆದಿದ್ದು, ಮತ್ತೊಂದು ಬದಿಯ ಕಿಟಕಿಗೆ ಗುಂಡು ತಗುಲಿ ಗಾಜು ಪುಡಿಪುಡಿಯಾಗಿದೆ. ಈ ಘಟನೆಯಲ್ಲಿ ಸ್ವತಃ ಕಾರು ಚಾಲನೆ ಮಾಡುತ್ತಿದ್ದ ವಕೀಲ ಪಿ.ಕೃಷ್ಣಮೂರ್ತಿ ಅವರು ಕೂದಲೆಳೆಯ ಅಂತರದಲ್ಲಿ ಪವಾಡಸದೃಶ ರೀತಿಯಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ.


ಪಿ.ಕೃಷ್ಣಮೂರ್ತಿ

ಕಡು ಕತ್ತಲಿನಲ್ಲಿ ಗಿಡಗಳ ಮರೆಯಿಂದ ದುಷ್ಕರ್ಮಿಗಳು 'ಪಾಯಿಂಟ್ 22' ಬಂದೂಕಿನಿಂದ ಗುಂಡು ಹಾರಿಸಿರುವ ಶಂಕೆ ವ್ಯಕ್ತವಾಗಿದೆ. ಮಡಿಕೇರಿ ಗ್ರಾಮಾಂತರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ವಿವಿಧ ಆಯಾಮಗಳಲ್ಲಿ ತನಿಖೆ ನಡೆಸುತ್ತಿದ್ದಾರೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

**ಸದೆ ಬಡಿಯುತ್ತೇವೆ:** ವಿಶ್ವ ಹಿಂದೂ ಪರಿಷತ್ ಜಿಲ್ಲಾಧ್ಯಕ್ಷರ ಕಾರಿನ ಮೇಲೆ ಗುಂಡಿನ ದಾಳಿ ನಡೆಸಿರುವ ಘಟನೆಗೆ ಸಂಬಂಧಿಸಿದಂತೆ ಶಾಸಕ ಕೆ.ಜಿ. ಬೋಪಯ್ಯ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಭಾಗಮಂಡಲದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ● 9ನೇ ಪುಟಕ್ಕೆ

---

# ಜೆಡಿಎಸ್‌ಗೆ ಹಾಕುವ ಒಂದೊಂದು ಮತ ನಾಡಿಗೆ 60 ವರ್ಷ ದುಡಿದ ದೇವೇಗೌಡರ ಕೊರಳಿಗೆ ಮುತ್ತಿನಹಾರ

■ ಮುಖಂಡರ ಜೆಡಿಎಸ್ ಸೇರ್ಪಡೆ ಕಾರ್ಯಕ್ರಮದಲ್ಲಿ ಶಾಸಕ ಜಿ.ಟಿ.ದೇವೇಗೌಡರ ಭಾವುಕ ನುಡಿ ■ ಬಿಜೆಪಿ, ಕಾಂಗ್ರೆಸ್‌ನವರೇ ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಆಗುವ ವಿಶ್ವಾಸದಲ್ಲಿದ್ದಾರೆ ■ ಚಾಮುಂಡೇಶ್ವರಿಯಲ್ಲಿ 30 ವರ್ಷ ಕಾಂಗ್ರೆಸ್‌ಗಾಗಿ ದುಡಿದವರ ಬಿಟ್ಟು 30 ದಿನದ ಹಿಂದೆ ಬಂದವರಿಗೆ ಟಿಕೆಟ್ ಕೊಟ್ಟಿದ್ದಕ್ಕೆ ನಿಷ್ಠಾವಂತರ ಅಸಮಾಧಾನ

ಮೈಸೂರು, ಏ.13(ಎಸ್‌ಬಿಡಿ)–ಜೆಡಿಎಸ್‌ಗೆ ನೀಡುವ ಒಂದೊಂದು ಮತವೂ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಕೊರಳಿಗೆ ಮುತ್ತಿನ ಹಾರವಾಗುತ್ತದೆ ಎಂದು ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ, ಶಾಸಕ ಜಿ.ಟಿ.ದೇವೇಗೌಡರು ಅಭಿಪ್ರಾಯಿಸಿದರು.

ಕ್ಷೇತ್ರ ವ್ಯಾಪ್ತಿಯ ಸಿದ್ದಲಿಂಗಪುರ ಗ್ರಾಮದಲ್ಲಿ ನಡೆದ ಮುಖಂಡರ ಜೆಡಿಎಸ್ ಸೇರ್ಪಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಾರ್ಯಕರ್ತರ ಉತ್ಸಾಹ ಕಂಡು ಹೆಚ್.ಡಿ.ದೇವೇಗೌಡರು ಅನಾರೋಗ್ಯದಿಂದ ಚೇತರಿಸಿಕೊಂಡು ತಾವೂ ಪ್ರಚಾರದಲ್ಲಿ ಪಾಲ್ಗೊಳ್ಳಲು ಉತ್ಸುಕರಾಗಿದ್ದಾರೆ. ರಾಜಕೀಯ ಕ್ಷೇತ್ರದಲ್ಲಿ 60 ವರ್ಷ ಸೇವೆ ಮಾಡಿದ ಅವರು ಮುಖ್ಯಮಂತ್ರಿಯಾಗಿ 18 ತಿಂಗಳು ಹಾಗೂ ಪ್ರಧಾನಮಂತ್ರಿಯಾಗಿ 10 ತಿಂಗಳು ಮಾತ್ರ ಅಧಿಕಾರದಲ್ಲಿದ್ದರು. ಅಷ್ಟು ಕಡಿಮೆ ಅವಧಿಯಲ್ಲೇ ಸಾಕಷ್ಟು ಕೆಲಸ ಮಾಡಿರುವುದನ್ನು ಜನ ಮರೆತಿಲ್ಲ ಎಂದರು. ಶಾಸಕರಾಗಿ, ಮಂತ್ರಿಯಾಗಿ, ಮುಖ್ಯಮಂತ್ರಿಯಾಗಿ, ಪ್ರಧಾನಮಂತ್ರಿಯಾಗಿ ರಾಜ್ಯ ಹಾಗೂ ರಾಷ್ಟ್ರಕ್ಕಾಗಿ ಪಕ್ಷಾತೀತವಾಗಿ ದುಡಿದಿದ್ದಾರೆ. ಅವರು ಪ್ರಧಾನಿಯಾಗಿದ್ದಾಗ ನೀರಾವರಿ ಹಾಗೂ ಹೆದ್ದಾರಿ ಅಭಿವೃದ್ಧಿಗೆ ಅಪಾರ ಪ್ರಮಾಣದ ಅನುದಾನ ನೀಡಿದರು. ಕೆ.ಜಿ.ಗೆ 3 ರೂ.ಗಳಂತೆ ದೇಶದ ಜನರಿಗೆ ಮೊದಲು ಅಕ್ಕಿ ವಿತರಿಸಿದ್ದು ದೇವೇಗೌಡರೇ. ಪಂಜಾಬ್ ರಾಜ್ಯದ ಜನ ಭತ್ತದ ತಳಿಗೆ ದೇವೇಗೌಡರ ಹೆಸರಿಟ್ಟು, ಸ್ಮರಿಸಿಕೊಳ್ಳುತ್ತಿದ್ದಾರೆ. ನಮ್ಮ ರೈತನ ಮಗ ಪ್ರಧಾನಿಯಾಗಿ ಜಮ್ಮು–ಕಾಶ್ಮೀರದಲ್ಲಿ ಪ್ರವಾಸ ಕೈಗೊಂಡು ಶಾಂತಿ–ಸಾಮರಸ್ಯದ ಸಂದೇಶ ಸಾರಿದ್ದರು ಎಂದು ತಿಳಿಸಿದರು. ಕಳೆದ ಬಾರಿ ಕಾಂಗ್ರೆಸ್‌ನವರೇ ಕುಮಾರಸ್ವಾಮಿ ಅವರ ಮನೆ ಬಾಗಿಲಿಗೆ ಹೋಗಿ, ಮುಖ್ಯಮಂತ್ರಿ ಮಾಡಿದರು. ಅದರ ಹಿಂದೆಯೇ ಶಾಸಕರನ್ನು ಕಳುಹಿಸಿ, ಮೈತ್ರಿ ಸರ್ಕಾರ ಬೀಳಿಸಿದರು. ಆದರೆ ಈ ಬಾರಿ ಕುಮಾರಸ್ವಾಮಿ ಅವರೇ ಮುಖ್ಯಮಂತ್ರಿಯಾಗುತ್ತಾರೆ ಎಂದು ಬಿಜೆಪಿ ಹಾಗೂ ಕಾಂಗ್ರೆಸ್‌ನವರೇ ಹೇಳುತ್ತಿದ್ದಾರೆ. ಹಾಗಾಗಿ ನಿಮ್ಮ ಒಂದೊಂದು ಮತವೂ ಮಾಜಿ ಪ್ರಧಾನಿ ದೇವೇಗೌಡರಿಗೆ ಮುತ್ತಿನಹಾರವಾಗುತ್ತದೆ. ನಾವೇ ಹೆಚ್.ಡಿ.ದೇವೇಗೌಡರು, ಕುಮಾರಸ್ವಾಮಿ, ಜಿ.ಟಿ.ದೇವೇಗೌಡ ಎಂದು ಭಾವಿಸಿ, ಜೆಡಿಎಸ್‌ಗೆ ಆಶೀರ್ವದಿಸಿ ಎಂದು ಮನವಿ ಮಾಡಿದರು.



30 ವರ್ಷಗಳಿಂದ ಪಕ್ಷಕ್ಕಾಗಿ ದುಡಿದವರನ್ನು ಬಿಟ್ಟು 30 ದಿನದ ಹಿಂದೆ ಬಂದ ವ್ಯಕ್ತಿಗೆ ಕಾಂಗ್ರೆಸ್ ಟಿಕೆಟ್ ನೀಡಿದೆ ಎಂದು ಆ ಪಕ್ಷದ ಕಾರ್ಯಕರ್ತರು ಆಕ್ರೋಶ ಹೊರಹಾಕಿದ್ದಾರೆ. ಜನ ಎಲ್ಲವನ್ನೂ ಗಮನಿಸುತ್ತಿದ್ದಾರೆ. ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ 25 ಸಾವಿರ ಕೋಟಿ ರೈತರ ಸಾಲ ಮನ್ನಾ ಮಾಡಿದ್ದರು. ನುಡಿದಂತೆ ನಡೆದಿರುವ ಅವರು ಪಂಚರತ್ನ ಕಾರ್ಯಕ್ರಮಗಳ ಭರವಸೆಯನ್ನೂ ಖಂಡಿತವಾಗಿ ಈಡೇರಿಸುತ್ತಾರೆ. ಇದಕ್ಕಾಗಿ ಮತದಾರರು ಜೆಡಿಎಸ್ ಪಕ್ಷಕ್ಕೆ ● 9ನೇ ಪುಟಕ್ಕೆ

## ನಕ್ಕರೆ ಅದೇ ಸ್ವರ್ಗ

ಗಂಡ : ಕ್ಯಾಲೆಂಡರ್ ಇಟ್ಟುಕೊಂಡು ಹಲ್ಲಿ ಬಿದ್ದ ಫಲ ನೋಡ್ತಿದ್ದೀಯಲ್ಲ, ಈಗ ಎಲ್ಲಿ ಹಲ್ಲಿ ಬಿತ್ತು?

ಹೆಂಡತಿ : ಕುದಿಯುತ್ತಿದ್ದ ಸಾಂಬಾರ್‌ನಲ್ಲಿ ಕಣ್ರೀ!


# ಮೈಸೂರು ಮಿತ್ರ

ಶುಕ್ರವಾರ, 14 ಏಪ್ರಿಲ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.


**ಅಮೃತವಾಹಿನಿ..........**

'ಮುಗ್ಧತೆ' ಮತ್ತು 'ಆತ್ಮ ವಿಶ್ವಾಸ' ಜೀವನದಲ್ಲಿ ಇರಬೇಕಾದ ಎರಡು ಅಂಶಗಳು. ಇವುಗಳಿಂದ ಜೀವನದಲ್ಲಿ ಯಶಸ್ಸು ನಿಶ್ಚಿತ. –ಮಾರ್ಕ್‌ಟ್ವೈನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಾಡಿ ಉಣ್ಣು ಬೇಡಿದಷ್ಟು, ತಗಾದೆ ಮಾಡದೇ ಉಣ್ಣು ನೀಡಿದಷ್ಟು

## ನಿಮ್ಮ ಪತ್ರಗಳು

### ವೀಕೆಂಡ್ ವಿತ್ ರಮೇಶ್ ಕಾರ್ಯಕ್ರಮದ ಘನತೆ ಹೆಚ್ಚಿಸಿದ ಡಾ.ಸಿ.ಎನ್ ಮಂಜುನಾಥ್

ಮಾನ್ಯರೆ,

ಕಳೆದ ವಾರ ವೀಕೆಂಡ್ ವಿತ್ ರಮೇಶ್ ಕಾರ್ಯಕ್ರಮಕ್ಕೆ ಜಯದೇವ ಆಸ್ಪತ್ರೆಯ ನಿರ್ದೇಶಕ ಡಾ.ಸಿ.ಎನ್ ಮಂಜುನಾಥ್ ಅವರನ್ನು ಕರೆಸಿದ್ದು ತುಂಬಾ ಸಂತೋಷ




ವಾಯಿತು. ಅವರ ಬಗ್ಗೆ ಅಲ್ಲಿ, ಇಲ್ಲಿ ಓದಿ, ಕೆಲವು ವೀಡಿಯೋ ನೋಡಿ ಸ್ವಲ್ಪ ಗೊತ್ತಿತ್ತು. ಈ ಕಾರ್ಯಕ್ರಮದ ಮೂಲಕ ಅವರ ಕಾರ್ಯ ವೈಖರಿ, ಸರಳತೆ, ಸಾಧನೆಯ ಪೂರ್ಣ ಮಾಹಿತಿ ಎಲ್ಲರಿಗೂ ಸಿಕ್ಕಿತು. ಅವರಿಂದ ಪ್ರಯೋಜನ ಪಡೆದ ಕೆಲವರು ಅವರ ಬಗ್ಗೆ ಮಾತನಾಡಿದಾಗ ಸರ್ಕಾರಿ ಆಸ್ಪತ್ರೆಯಲ್ಲಿ ನಿಸ್ವಾರ್ಥವಾಗಿ ಇಷ್ಟು ಒಳ್ಳೆಯ ಸೇವೆ ಮಾಡುವವರು ಅಲ್ಲಲ್ಲಿ ಒಬ್ಬರು ಇದ್ದಾರೆ ಎಂದು ತಿಳಿದು ಸಂತೋಷ ಮತ್ತು ಹೆಮ್ಮೆ ಆಯಿತು. ಡಾ.ಮಂಜುನಾಥ್ ಅವರಿಗೆ ಎಲ್ಲಾ ಕನ್ನಡಿಗರ ಪರವಾಗಿ ಅಭಿನಂದನೆಗಳು. ಸರ್ಕಾರಿ ಆಸ್ಪತ್ರೆ ಅಂದರೆ ಮೂಗು ಮುರಿದು, ಕಷ್ಟಪಟ್ಟು ಸಂಪಾದಿಸಿದ ಹಣವನ್ನೆಲ್ಲಾ ಖಾಸಗಿ ಆಸ್ಪತ್ರೆಗೆ ಸುರಿಯುವ ಅದೆಷ್ಟೋ ಜನರಿಗೆ ಇಂತಹ ವೈದ್ಯರಿಂದ ಉಪಯೋಗವಾಗುತ್ತದೆ. ಇಂತಹ ವೈದ್ಯರ ಸಂಖ್ಯೆ ಹೆಚ್ಚಲಿ. ವೀಕೆಂಡ್ ವಿತ್ ರಮೇಶ್ ಕಾರ್ಯಕ್ರಮಕ್ಕೆ ಇಂತಹ ಮಹಾನ್ ಸಾಧಕರನ್ನು ಹೆಚ್ಚು ಆಹ್ವಾನಿಸಲಿ.

– ರಾಘವೇಂದ್ರ ಜೋಯಿಸ್, ಮೈಸೂರು

### ರಂಗ ಶಿಕ್ಷಕರನ್ನು ಸರ್ಕಾರ ನೇಮಕ ಮಾಡಲಿ


ಮಾನ್ಯರೆ,



ಈಗಿನ ಕಾಲದಲ್ಲಿ ಮಕ್ಕಳ ವ್ಯಕ್ತಿತ್ವ ವಿಕಸನಗೊಳ್ಳಲು ಶಾಲೆಗಳಲ್ಲಿ ಮಕ್ಕಳಿಗೆ ಶಿಕ್ಷಣದ ಜೊತೆಗೆ ಕಲೆ, ಸಾಹಿತ್ಯ, ಸಂಗೀತ ಮತ್ತು ರಂಗ ಭೂಮಿಯ ಪಾಠ ಅವಶ್ಯಕವಾಗಿದೆ. ಸರ್ಕಾರಿ ಶಾಲೆಗಳಲ್ಲಿ ಸಂಗೀತ ಶಿಕ್ಷಕರು, ಚಿತ್ರಕಲಾ ಶಿಕ್ಷಕರು ಇದ್ದಾರೆ. ಆದರೆ ರಂಗಭೂಮಿಯ ಶಿಕ್ಷಕರು ಯಾಕೆ ಇಲ್ಲ? ಹತ್ತು ಹಲವು ವರ್ಷಗಳಿಂದ ಸರ್ಕಾರಿ ಶಾಲೆಗಳಲ್ಲಿ ರಂಗಭೂಮಿಯ ಶಿಕ್ಷಕರ ನೇಮಕ ಮಾಡಿಕೊಳ್ಳಲು ಹೋರಾಟಗಳು ನಡೆದು ಬಂದಿದ್ದರೂ ಅದರ ಪ್ರತಿಫಲ ಕಾಣಲಾಗುತ್ತಿಲ್ಲ? ಪ್ರತಿ ವರ್ಷ ರಾಜ್ಯದ ಪ್ರತಿಷ್ಠಿತ ಕಾಲೇಜುಗಳಿಂದ ಉದಾಹರಣೆಗೆ, ರಂಗಾಯಣ ಮೈಸೂರು, ನೀನಾಸಂ, ಎನ್‌ಎಸ್‌ಡಿ ಬೆಂಗಳೂರು, ಸಾಣೆಹಳ್ಳಿ, ಬೆಂಗಳೂರು ವಿಶ್ವವಿದ್ಯಾನಿಲಯ, ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಗಂಗೂಬಾಯಿ ಹಾನಗಲ್ ವಿಶ್ವವಿದ್ಯಾನಿಲಯದಿಂದ ಪದವಿ, ಸ್ನಾತಕೋತ್ತರ ಪದವಿಗಳನ್ನು ಮುಗಿಸಿ KST ,NET ಅಂತಹ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ತಮ್ಮ ಜೀವನ ರೂಪಿಸಿಕೊಳ್ಳಲು ಅದೆಷ್ಟೋ ಯುವಕ ಯುವತಿಯರು ಕಾಯುತ್ತಿದ್ದಾರೆ. ತಮ್ಮ ಜೀವನ ರೂಪಿಸಿಕೊಳ್ಳಲು ಖಾಸಗಿ ಶಾಲೆಗಳಲ್ಲಿ ರಂಗ ಶಿಕ್ಷಕರಾಗಿ ಯಾವುದೇ ಭತ್ಯಗಳಿಲ್ಲದೆ, ನಿರೀಕ್ಷೆಗಳಿಲ್ಲದೆ ಕೆಲಸ ಮಾಡುತ್ತಿದ್ದಾರೆ. ಒಂದು ಬಾರಿಯಾದರೂ ಸರ್ಕಾರ ರಂಗ ಶಿಕ್ಷಕರನ್ನು ನೇಮಕ ಮಾಡಲಿ.

–ಎನ್.ಅಂಕರಾಜು, ಗ್ರಂಥಪಾಲಕ, ಕೊಳ್ಳೇಗಾಲ.

### ಅವೈಜ್ಞಾನಿಕ ರಸ್ತೆ ಡುಬ್ಬ ತೆರವುಗೊಳಿಸಿ



ಮಾನ್ಯರೆ,

ಮೈಸೂರಿನ ಪ್ರಮುಖ ಕನೆಕ್ಟಿಂಗ್ ರಸ್ತೆಗಳಲ್ಲಿ ಒಂದಾದ (ಹುಣಸೂರು ಮುಖ್ಯ ರಸ್ತೆ ಹಾಗೂ ಕಾಳಿದಾಸ ರಸ್ತೆ) ಪ್ರೀಮಿಯರ್ ಅಪಾರ್ಟ್‌ಮೆಂಟ್ ಎದುರಿನ ರಸ್ತೆಯಲ್ಲಿ ಹೊಸದಾಗಿ ರಸ್ತೆಯನ್ನು ಮಾಡಿರುವುದು ಒಳ್ಳೆಯ ವಿಷಯವೇ. ಆದರೆ ಇಲ್ಲಿ ನಿರ್ಮಿಸಿರುವ ರಸ್ತೆ ಡುಬ್ಬ ಅವೈಜ್ಞಾನಿಕವಾಗಿದೆ. ಇದು ರಾತ್ರಿ ವೇಳೆ ಕಾಣಿಸುವುದಿಲ್ಲ. ಹಾಗೂ ಈ ದಾರಿಯಲ್ಲಿ ಯಾವುದೇ ರಸ್ತೆ ದೀಪ ಸಹ ಇರುವುದಿಲ್ಲ. ಇದರಿಂದಾಗಿ ದಿನನಿತ್ಯ ಅಪಘಾತ ನಡೆಯುತ್ತಿದ್ದು, ಹಲವಾರು ಜನ ಆಸ್ಪತ್ರೆಯಲ್ಲಿ ಈಗಲೂ ಚಿಕಿತ್ಸೆ ಪಡೆಯುತ್ತಿದ್ದಾರೆ. ದಿನನಿತ್ಯ ಇಷ್ಟು ಅಪಘಾತ ನಡೆಯುತ್ತಿದ್ದರೂ ಯಾವ ಪಾಲಿಕೆ ಅಧಿಕಾರಿಗಳಾಗಲಿ ಅಥವಾ ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳಾಗಲಿ ಈ ಬಗ್ಗೆ ಕ್ರಮ ಕೈಗೊಂಡಿಲ್ಲ. ದಯವಿಟ್ಟು ಆದಷ್ಟು ಬೇಗ ಈ ಸಮಸ್ಯೆ ಬಗೆಹರಿಸಿ, ಇಲ್ಲವಾದಲ್ಲಿ ಈ ರಸ್ತೆ ಡುಬ್ಬವನ್ನು ತೆರವುಗೊಳಿಸಬೇಕಾಗಿ ಮನವಿ.

–ರಾಘವೇಂದ್ರ, ಸಾಮಾಜಿಕ ಕಾರ್ಯಕರ್ತ, ಕುವೆಂಪುನಗರ

### ತಲೆಯ ಮೇಲೆ ಕಲ್ಲು ಹಾಕಿಕೊಳ್ಳುತ್ತಿರುವ ಬಿಜೆಪಿ!





ಮಾನ್ಯರೆ,

ಕರ್ನಾಟಕದಲ್ಲಿ ಸಾರ್ವಜನಿಕ ಚುನಾವಣೆಯು ಹತ್ತಿರವಾಗುತ್ತಿರುವಾಗ ವಿವಾದಗಳನ್ನು ಜನತೆಯ ಮುಂದೆ ತರುತ್ತಿರುವ ಬಿಜೆಪಿ ತನ್ನ ತಲೆಯ ಮೇಲೆ ಕಲ್ಲು ಎತ್ತಿ ಹಾಕಿಕೊಳ್ಳುವ ಕೆಲಸ ಮಾಡುತ್ತಿದೆ.

ಇದೀಗ ಒಂದು ರಾಷ್ಟ್ರ ಒಂದು ಹಾಲು ಘೋಷಣೆಯಡಿ ಕರ್ನಾಟಕದ ನಂದಿನಿಯನ್ನು ಅಮುಲ್‌ನೊಂದಿಗೆ ವಿಲೀನ ಮಾಡುವ ಮನೆ ಹಾಳು ಕೆಲಸಕ್ಕೆ ಕೈ ಹಾಕಿರುವ ಕೇಂದ್ರ ಸರಕಾರ ಜನರ ಭಾವನೆಗಳಿಗೆ ಬೆಲೆ ಕೊಡದಿದ್ದರೆ ಬಹು ಅಮೂಲ್ಯವಾದ ಬೆಲೆ ತೆರಬೇಕಾಗುತ್ತದೆ. ಜನರ ಭಾವನೆಗಳೊಂದಿಗೆ ಆಟವಾಡುವ ಹುಚ್ಚು ಸಾಹಸ ಬಿಜೆಪಿ ಸರಕಾರಕ್ಕೆ ಬೇಡ!

–ಕೊ.ಸು. ನರಸಿಂಹಮೂರ್ತಿ, ಹಿರಿಯ ನಾಗರಿಕ, ಮೈಸೂರು.




ಕಾರ್ಕಳ ಆನಂದಭಟ್
ಮೊ.7676554198

ದಿಕ್ಕುದೆಸೆ

# ಭಾರತದಲ್ಲಿರುವ 'ಶತ್ರು'ಗಳ ಆಸ್ತಿ ಮಾರಾಟದಿಂದ ಬೊಕ್ಕಸ ತುಂಬಲಿದೆ ಲಕ್ಷ ಕೋಟಿ!

ಕೇಂದ್ರ ಸರಕಾರ ಮುಂದಿನ ಕೆಲವೇ ತಿಂಗಳುಗಳಲ್ಲಿ ದೇಶದಲ್ಲಿರುವ ಶತ್ರುಗಳ ಬಾರೀ ಆಸ್ತಿಗಳನ್ನು ಮಾರಾಟ ಮಾಡಲು ಎಲ್ಲಾ ಸಿದ್ಧತೆಗಳನ್ನು ಮಾಡಿದೆ. ದೇಶಾದ್ಯಂತ ಇಪ್ಪತ್ತು ರಾಜ್ಯಗಳು ಮತ್ತು ಮೂರು ಕೇಂದ್ರಾಡಳಿತ ಪ್ರದೇಶಗಳಲ್ಲಿರುವ ಪಾಕಿಸ್ತಾನಿ ಪ್ರಜೆಗಳ 12485 ಮತ್ತು ಚೀನಿಯರ 126 ಆಸ್ತಿ ಒಟ್ಟು 12611 ಶತ್ರುಗಳ ಆಸ್ತಿಗಳನ್ನು ಮಾರಾಟ ಮಾಡಿ ಸರಕಾರವು ಸುಮಾರು 1.04 ಲಕ್ಷ ಕೋಟಿ ರೂ. ಆದಾಯ ಗಳಿಸುವ ನಿರೀಕ್ಷೆಯಲ್ಲಿದೆ. ಉತ್ತರ ಪ್ರದೇಶದಲ್ಲಿ ಅತೀ ಹೆಚ್ಚು ಅಂದರೆ 6255 ಮತ್ತು ಆಂಧ್ರ ಪ್ರದೇಶ, ಅಂಡಮಾನ್ ನಿಕೋಬಾರ್ ದ್ವೀಪಗಳಲ್ಲಿ ಕನಿಷ್ಠವೆಂದರೆ ತಲಾ 1 ಆಸ್ತಿ ಇದೆ. ಕರ್ನಾಟಕದಲ್ಲಿ 24 ಶತ್ರುಗಳ ಆಸ್ತಿಗಳಿವೆ. ಇದುವರೆಗೆ ಸರಕಾರವು ಮಾರಾಟ ಮಾಡಿರುವ ಆಸ್ತಿಗಳಿಂದ ರೂ. 3400 ಕೋಟಿ ಆದಾಯ ಗಳಿಸಿದೆ. ಮಾರಾಟ ಪ್ರಕ್ರಿಯೆ ಸುಗಮಗೊಳಿಸಲು 2020ರಲ್ಲಿ ಸರಕಾರವು ಕೇಂದ್ರ ಗೃಹ ಸಚಿವ ಅಮಿತ್ ಷಾ ನೇತೃತ್ವದಲ್ಲಿ ಸಚಿವರ ತಂಡವನ್ನು ರಚಿಸಿದೆ. ಶತ್ರು ಆಸ್ತಿ ಮಾರಾಟದಿಂದ ಬರುವ ಆದಾಯವು ಸಂಪನ್ಮೂಲಗಳ ಕೊರತೆ ಎದುರಿಸುತ್ತಿರುವ ಅಭಿವೃದ್ಧಿ ಕಾರ್ಯಗಳಿಗೆ ವೇಗ ನೀಡಲಿದೆ.



**ದೇಶದಲ್ಲಿರುವ ಶತ್ರುಗಳ ಆಸ್ತಿಗಳ ಪ್ರಮಾಣ**

2017ರಲ್ಲಿ ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಹಂಸರಾಜ್ ಗಂಗಾರಾವ್ ಅಹಿರ್‌ರವರು ರಾಜ್ಯಸಭೆಯಲ್ಲಿ ನೀಡಿದ ಹೇಳಿಕೆಯಂತೆ ದೇಶದಲ್ಲಿರುವ ಸುಮಾರು 12611 ಸ್ಥಿರಾಸ್ತಿಗಳ ಒಟ್ಟು ಮೌಲ್ಯ ಅಂದಾಜು ರೂ. 1.00 ಲಕ್ಷ ಕೋಟಿಯಾಗಿರುತ್ತದೆ. ಚಿರಸ್ಥಾಪಿತ ಆಸ್ತಿಗಳಲ್ಲಿ 266 ಲಿಸ್ಟೆಡ್ ಕಂಪನಿಗಳ ಸುಮಾರು 2610 ಕೋಟಿ ರೂ.ಗಳ ಷೇರುಗಳಿವೆ. 318 ಪಟ್ಟಿ ಮಾಡದ (ಅನ್‌ಲಿಸ್ಟೆಡ್) ಕಂಪನಿಗಳ ಷೇರು ಮೌಲ್ಯ ರೂ. 24 ಕೋಟಿ. ಸುಮಾರು 40 ಲಕ್ಷ ರೂ. ಮೌಲ್ಯದ ಚಿನ್ನಾಭರಣಗಳು, ಬ್ಯಾಂಕ್ ಖಾತೆಗಳಲ್ಲಿರುವ ಮೊತ್ತ ರೂ. 177 ಕೋಟಿ, ಸರಕಾರಿ ಬಾಂಡ್‌ಗಳಲ್ಲಿ ಮಾಡಿರುವ ಹೂಡಿಕೆ ರೂ. 2150 ಕೋಟಿ ರೂ. 160 ಕೋಟ ಸ್ಥಿರ ಠೇವಣಿಗಳಿವೆ ಎಂದು ಅಂದಾಜು ಮಾಡಲಾಗಿದೆ.

**ಶತ್ರು ಸಂಪತ್ತಿ ಆಸ್ತಿ ಎಂದರೇನು?**

ಸಂಕ್ಷಿಪ್ತದಲ್ಲಿ ಶತ್ರು ಆಸ್ತಿ ಎನ್ನುವುದು ಶತ್ರು ದೇಶಕ್ಕೆ ಸೇರಿದ ಪ್ರಜೆ ಅಥವಾ ಶತ್ರು ಸಂಸ್ಥೆ ಪರವಾಗಿ ನಿರ್ವಹಿಸುವ ಆಸ್ತಿಯಾಗಿರುತ್ತದೆ. 1947ರಲ್ಲಿ ದೇಶ ವಿಭಜನೆಯ ನಂತರ, 1962ರ ಚೀನಾಯುದ್ಧ, 1965, 1971 ಪಾಕ್‌ನೊಂದಿಗಿನ ಯುದ್ಧಾ ನಂತರ ಭಾರತದಿಂದ ವಲಸೆ ಹೋದ ಜನರು ಬಿಟ್ಟು ಹೋದ ಸ್ಥಿರ–ಚರ ಆಸ್ತಿಗಳು ಶತ್ರು ಆಸ್ತಿ ಎಂದು ಪರಿಗಣಿಸಲಾಗಿದೆ. ಇವುಗಳ ಮಾಲೀಕತ್ವವನ್ನು ಭಾರತ ಸರಕಾರ ವಹಿಸಿಕೊಂಡಿತು. ಭಾರತೀಯ ರಕ್ಷಣಾ ಕಾಯ್ದೆ, 1939ರ ಅಡಿಯಲ್ಲಿ ಸ್ಥಾಪಿಸಲಾದ ಕಸ್ಟೋಡಿಯನ್ (ಪಾಲಕರು) ಆಫ್ ಎನಿಮಿ ಪ್ರಾಪರ್ಟಿ ಫಾರ್ ಇಂಡಿಯಾ (ಸಿಇಪಿಐ)ಗೆ ಸರಕಾರವು ಈ ಆಸ್ತಿಗಳ ರಕ್ಷಣೆ, ನಿರ್ವಹಣೆ ಮತ್ತು ಉಸ್ತುವಾರಿಯ ಜವಾಬ್ದಾರಿ ವಹಿಸಿದೆ.

1965ರ ಯುದ್ಧಾ ನಂತರ ಭಾರತ–ಪಾಕಿಸ್ತಾನ ದೇಶಗಳು 1966ರಲ್ಲಿ ತಾಷ್ಕೆಂಟ್ ಘೋಷಣೆಗೆ ಸಹಿ ಹಾಕಿದವು. ಇದರ ಪ್ರಕಾರ ಯುದ್ಧಾ ನಂತರ ಎರಡೂ ಕಡೆಯಿಂದ ಸ್ವಾಧೀನಗೊಂಡ ಆಸ್ತಿಗಳ ಸಂಭಾವ್ಯ ವಾಪಸಾತಿಗೆ ಮಾತುಕತೆ ನಡೆಸುವ ಭರವಸೆ ನೀಡಲಾಯಿತು. ಆದರೆ ಪಾಕಿಸ್ತಾನವು ಭರವಸೆಯನ್ನು ಉಲ್ಲಂಘಿಸಿ 1971ರಲ್ಲಿ ತನ್ನಲ್ಲಿದ್ದ ಎಲ್ಲಾ ಶತ್ರು ಆಸ್ತಿಗಳನ್ನು ವಿಲೇವಾರಿ ಮಾಡಿತು. 1968ರಲ್ಲಿ ಭಾರತವು ಶತ್ರು ಆಸ್ತಿ ಕಾಯ್ದೆ ಜಾರಿಗೊಳಿಸಿತ್ತು. ಈ ಕಾನೂನು ಶತ್ರು ಆಸ್ತಿಗಳ ಪಾಲನೆ ಮತ್ತು ನಿಯಂತ್ರಣಕ್ಕೆ ಅವಕಾಶ ನೀಡುತ್ತದೆ. ಆದರೆ ಶತ್ರು ಆಸ್ತಿಗಳ ಮೂಲ ಮಾಲೀಕರ ಕಾನೂನು ಬದ್ಧ ವಾರಸುದಾರರಿಂದ ಹೆಚ್ಚುತ್ತಿದ್ದ ಉತ್ತರಾಧಿಕಾರದ ಹಕ್ಕುಗಳನ್ನು ಗಮನಿಸಿ 2017ರಲ್ಲಿ 50 ವರ್ಷಗಳಷ್ಟು ಹಳೆಯ ಕಾನೂನಿಗೆ ತಿದ್ದುಪಡಿ ತರಲು ಕೇಂದ್ರ ಸರಕಾರಕ್ಕೆ ಒತ್ತಾಯಿಸಲಾಯಿತು.

**ಪ್ರತಿಕೂಲ ತೀರ್ಪಿನಿಂದ ಕಾಯ್ದೆಗೆ ತಿದ್ದುಪಡಿ**

1968ರ ಕಾಯ್ದೆಯಡಿ ನ್ಯಾಯಾಲಯಗಳು ನೀಡಿದ ತೀರ್ಪುಗಳು ಶತ್ರು ಆಸ್ತಿಗಳ ಮೇಲೆ ಭಾರತ ಸರಕಾರಕ್ಕಿದ್ದ ಅಧಿಕಾರಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಿದ್ದವು. ಇವುಗಳಲ್ಲಿ 2005ರ ದೇಶದ ಸರ್ವೋಚ್ಛ ನ್ಯಾಯಾಲಯ ನೀಡಿದ ತೀರ್ಪು ಅತ್ಯಂತ ಮಹತ್ವಪೂರ್ಣವಾಗಿದೆ. ಮಹಮೂದಾಬಾದ್‌ನ ಹಿಂದಿನ ರಾಜನ ಸ್ಥಿರಾಸ್ತಿಗಳ ಮಾಲೀಕತ್ವದ ಕುರಿತು ತೀರ್ಪು ನೀಡುವಾಗ, ತಂದೆಯ ನಿಧನಾ ನಂತರ ಆಸ್ತಿಗೆ ಸಂಬಂಧಿಸಿದಂತೆ ದೇಶದ ಸುಪ್ರೀಂಕೋರ್ಟ್ ಆತನ ಮಗನ ಪರವಾಗಿ ತೀರ್ಪು ನೀಡಿತು. ದೇಶದ ಅನೇಕ ಕಡೆ ಆಸ್ತಿಗಳನ್ನು ಹೊಂದಿದ್ದ ತಂದೆ ದೇಶ ವಿಭಜನೆಯ ನಂತರ ಭಾರತ ತೊರೆದು ಇರಾಕ್‌ಗೆ ಹೋಗಿ, ಅಲ್ಲಿಂದ 1957ರಲ್ಲಿ ಪಾಕಿಸ್ತಾನಕ್ಕೆ ಬಂದು ಪೌರತ್ವ ಪಡೆದು, ನಂತರ ಲಂಡನ್‌ಗೆ ತೆರಳಿ ಅಲ್ಲಿಯೇ ನಿಧನರಾದರು. ಭಾರತದಲ್ಲಿ ಅವರ ರಾಜಾಸ್ ಎಸ್ಟೇಟ್ ಅನ್ನು ಶತ್ರು ಆಸ್ತಿ ಎಂದು ಘೋಷಿಸಲಾಯಿತು. ಭಾರತದ ಪೌರತ್ವ ಹೊಂದಿದ್ದ ಅವರ ಮಗ ಮಹ್ಮದ್ ಅಮರ್ ಮಹ್ಮದ್ ಖಾನ್‌ರು, ತಂದೆಯ ಆಸ್ತಿಯನ್ನು ಪಡೆಯಲು 1968ರ ಶತ್ರು ಆಸ್ತಿ ಕಾನೂನಿನ ನಿಯಮಗಳ ಅಡಿಯಲ್ಲಿ 4 ದಶಕಳ ಕಾಲ ನ್ಯಾಯಾಲಯದಲ್ಲಿ ಹೋರಾಡಿದರು. ಕೊನೆಗೆ 2005ರಲ್ಲಿ ದೇಶದ ಸುಪ್ರೀಂಕೋರ್ಟ್ ಆಸ್ತಿಯ ಮಾಲೀಕತ್ವ ಮಗನಿಗೆ ನೀಡುವಂತೆ ತೀರ್ಪು ನೀಡಿತು.

ಕೇಂದ್ರ ಸರಕಾರವು ಈ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಮತ್ತು ಶತ್ರು ಆಸ್ತಿ ಮೇಲಿನ ಹಕ್ಕುಗಳು ಸರಕಾರಕ್ಕೆ ಪ್ರಶ್ನಾತೀತವಾಗ ಬರಲು ಶತ್ರು ಆಸ್ತಿ ತಿದ್ದುಪಡಿ ಮತ್ತು ಊರ್ಜಿತಗೊಳಿಸುವಿಕೆ (Amendments and Validation) ಮಸೂದೆ 2016ನ್ನು ಮಂಡಿಸಿತು. ಶತ್ರು ಆಸ್ತಿ ಕಾಯ್ದೆ 1968 ಮತ್ತು ಸಾರ್ವಜನಿಕ ಆವರಣ (ಅನಧಿಕೃತ ನಿವಾಸಿಗಳ ತೆರವು) ಕಾಯ್ದೆ 1971ಕ್ಕೆ ತಿದ್ದುಪಡಿ ಮಾಡಲು ಮಂಡಿಸಲಾದ ಮೇಲಿನ ಮಸೂದೆಗೆ ಸಂಸತ್ತು ಮಾರ್ಚ್ 2017ರಲ್ಲಿ ಅಂಗೀಕಾರ ನೀಡಿತು. ನೂತನ ತಿದ್ದುಪಡಿ ಕಾಯ್ದೆಯು 'ಶತ್ರು' ಶಬ್ದಕ್ಕೆ ಹೆಚ್ಚಿನ ವ್ಯಾಖ್ಯಾನ ನೀಡಿ, 2017ರ ಕಾನೂನು ಅವರ ರಾಷ್ಟ್ರೀಯತೆಯನ್ನು ಪರಿಗಣಿಸದೇ ಮೂರು ಯುದ್ಧಗಳ ನಂತರ ಭಾರತದಿಂದ ನಿರ್ಗಮಿಸಿದವರ ಉತ್ತರಾಧಿಕಾರಿಗಳು ಶತ್ರು ಆಸ್ತಿಗಳ ಮಾಲೀಕತ್ವವನ್ನು ಪಡೆಯಲು ಸಾಧ್ಯವಿಲ್ಲವೆಂದು ತಿಳಿಸುತ್ತದೆ. ಶತ್ರು ಆಸ್ತಿ ವಿಲೇವಾರಿ ಮಾಡಲು ಅಥವಾ ಮಾರಾಟ ಮಾಡಲು ಅಥವಾ ಅಕ್ರಮವಾಗಿ ನೆಲೆಸಿರುವವರನ್ನು ಹೊರ ಹಾಕಲು ಕಸ್ಟೋಡಿಯನ್‌ಗೆ ಅಧಿಕಾರವಿದೆ ಎಂದು ಸಂಸದ ಮತ್ತು ತಿದ್ದುಪಡಿ ಮಸೂದೆ ಆಯ್ಕೆ ಸಮಿತಿ ಅಧ್ಯಕ್ಷರಾದ ಭೂಪೇಂದ್ರ ಯಾದವ್ ಹೇಳಿದ್ದಾರೆ.

**ಮಾರಾಟದ ಸಮಿತಿ ಮತ್ತು ಮಾರ್ಗಸೂಚಿ**

ಕೇಂದ್ರವು ಶತ್ರು ಆಸ್ತಿ ವಿಲೇವಾರಿ ಸಮಿತಿಯನ್ನು ರಚಿಸುತ್ತದೆ. ಈ ಸಮಿತಿಯಲ್ಲಿ ಗೃಹ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ, ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆಯ ಜಂಟಿ ಕಾರ್ಯದರ್ಶಿಯವರು ಹಣಕಾಸು ಸಲಹೆಗಾರರಾಗಿರುತ್ತಾರೆ. ಕಾನೂನು–ನ್ಯಾಯ ಸಚಿವಾಲಯದ ಜಂಟಿ ಕಾರ್ಯದರ್ಶಿ, ಮುಖ್ಯ ಇಂಜಿನಿಯರ್ (ಸಿಪಿಡಬ್ಲ್ಯುಡಿ), ಶತ್ರು ಆಸ್ತಿ ಪಾಲಕರು, ಗೃಹ ಸಚಿವಾಲಯದಲ್ಲಿ ಶತ್ರು ಆಸ್ತಿಯೊಂದಿಗೆ ವ್ಯವಹರಿಸುವ ಜಂಟಿ ಕಾರ್ಯದರ್ಶಿಯವರನ್ನು ಒಳಗೊಂಡ ಸಮಿತಿಯು ದೇಶ ದಲ್ಲಿ ಶತ್ರು ಆಸ್ತಿ ವಿಲೇವಾರಿ ಪ್ರಕ್ರಿಯೆಯ ಉಸ್ತುವಾರಿಯಾಗಿರುತ್ತಾರೆ. ಕೆಳಹಂತದಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟ್ ನೇತೃತ್ವದಲ್ಲಿ ಜಿಲ್ಲಾ ಮಟ್ಟದಲ್ಲಿ ಮೌಲ್ಯಮಾಪನ ಸಮಿತಿ ಮತ್ತು ಹೆಚ್ಚುವರಿ ಕಾರ್ಯದರ್ಶಿ ನೇತೃತ್ವದ ಅಂತರ ಸಚಿವಾಲಯ ವಿಲೇವಾರಿ ಸಮಿತಿ ರಚಿಸಲಾಗುವುದು. ಇದರಿಂದ ಶತ್ರು ಆಸ್ತಿ ವಿಲೇವಾರಿ ಪ್ರಕ್ರಿಯೆ ಕಾಲಮಿತಿಯಲ್ಲಿ ಪೂರ್ಣಗೊಳ್ಳಲು ಸಹಾಯಕವಾಗುತ್ತದೆ. ಶತ್ರು ಆಸ್ತಿ ಕಾಯ್ದೆ 2017 ಮತ್ತು ಶತ್ರು ಆಸ್ತಿ (ತಿದ್ದುಪಡಿ) ನಿಯಮಗಳು. 2018ರ ತಿದ್ದುಪಡಿ ನಂತರ ಈ ಕ್ರಮ ಬಂದಿದೆ. ಇದು ವಿಭಜನೆಯ ನಂತರ ಪಾಕಿಸ್ತಾನ ಮತ್ತು ಚೀನಾಕ್ಕೆ ಭಾರತದಿಂದ ವಲಸೆ ಹೋದವರು ಉತ್ತರಾಧಿಕಾರಿಗಳು ಯಾವುದೇ ಹಕ್ಕು ಪಡೆಯುವುದಿಲ್ಲವೆಂದು ಖಚಿತಪಡಿಸಬೇಕು. ಈ ಆದೇಶ ಪ್ರಕಟಿಸಿದ ಮೂರು ತಿಂಗಳೊಳಗೆ ಎಲ್ಲಾ ಸ್ಥಾಪಿತ ಶತ್ರು ಸ್ಥಿರ–ಚರ ಆಸ್ತಿಗಳ ಪಟ್ಟಿಯನ್ನು ಕಸ್ಟೋಡಿಯನ್ ಸಿದ್ಧಪಡಿಸಿ ಕೇಂದ್ರ ಸರಕಾರಕ್ಕೆ ಸಲ್ಲಿಸಬೇಕು.

ಮಾರಾಟ ಪ್ರಕ್ರಿಯೆ ಚುರುಕುಗೊಳಿಸಲು ಗೃಹ ಸಚಿವಾಲಯವು ಶತ್ರು ಆಸ್ತಿ ವಿಲೇವಾರಿ ಮಾರ್ಗಸೂಚಿಗಳನ್ನು ಬದಲಿಸಿದೆ. ಹೊಸ ಸೂಚಿಯಂತೆ ಮಾರಾಟದ ಮೊದಲು ಸಂಬಂಧಿತ ಜಿಲ್ಲಾ ಮ್ಯಾಜಿಸ್ಟ್ರೇಟ್ ಅಥವಾ ಜಿಲ್ಲಾಧಿಕಾರಿಯವರ ಸಹಾಯದಿಂದ ಶತ್ರು ಆಸ್ತಿ ತೆರವುಗೊಳಿಸಬೇಕು. ಒಂದು ಕೋಟಿಗಿಂತ ಕಡಿಮೆ ಮೌಲ್ಯದ ಶತ್ರು ಆಸ್ತಿಯನ್ನು ಮೊದಲಿಗೆ ಅಲ್ಲಿ ವಾಸಿಸುತ್ತಿರುವ ನಿವಾಸಿಗೆ ಖರೀದಿಸುವ ಅವಕಾಶವಿದೆ. ನಿವಾಸಿ ನಿರಾಕರಿಸಿದರೆ ನಂತರ ಆಸ್ತಿಯನ್ನು ವಿಲೇವಾರಿ ಮಾಡಲಾಗುತ್ತದೆ.

**ಇ–ಹರಾಜು ಮೂಲಕ ವಿಲೇವಾರಿ**

ಒಂದು ಕೋಟಿ ಮತ್ತು 100 ಕೋಟಿಗಿಂತ ಕಡಿಮೆ ಮೌಲ್ಯದ ಶತ್ರು ಆಸ್ತಿಗಳನ್ನು ಸಿಇಪಿಐ ಅನ್ವಯ ಕೇಂದ್ರ ಸರಕಾರವು ಇ–ಹರಾಜು ಅಥವಾ ಕೇಂದ್ರ ಸರಕಾರ ನಿರ್ಧರಿಸಿದಂತೆ ಇತರ ಯಾವುದೇ ವಿಧಾನದ ಮೂಲಕ ಹರಾಜು ಮಾಡಲಾಗುತ್ತದೆ. ಕರ್ನಾಟಕದಲ್ಲಿ 24 ಶತ್ರು ಆಸ್ತಿಗಳನ್ನು ಗುರುತಿಸಲಾಗಿದ್ದು, ಕೇವಲ ಬೆಂಗಳೂರು ಜಿಲ್ಲಾಡಳಿತದ ವ್ಯಾಪ್ತಿಯಲ್ಲಿ 12 ಆಸ್ತಿಗಳಿವೆ. ಈ ಪೈಕಿ ಐದು ಪಾಕ್ ಪ್ರಜೆ ಹಾಗೂ ಒಂದು ಚೀನಾ ಪೌರತ್ವ ಪಡೆದ ವ್ಯಕ್ತಿಗಳ ಒಟ್ಟು ಆರು ಆಸ್ತಿಗಳ ಮೌಲ್ಯ ರೂ. 500 ಕೋಟಿಯಷ್ಟು ಎಂದು ಅಂದಾಜು ಮಾಡಲಾಗಿದೆ. ಭಾರತದಲ್ಲಿರುವ ಪಾಕಿಸ್ತಾನಿ–ಚೀನಾದಂತಹ ಶತ್ರು ರಾಷ್ಟ್ರಗಳ ಪ್ರಜೆಗಳು ಅಥವಾ ಸಂಸ್ಥೆಗಳಿಗೆ ಸೇರಿದ ಆಸ್ತಿಗಳನ್ನು ತೆರವುಗೊಳಿಸಿ ಸರಕಾರವು ಹರಾಜು ಪ್ರಕ್ರಿಯೆಗೆ ಮುಂದಾಗಿದೆ. ಈ ರೀತಿ ಕೇಂದ್ರ ಸರಕಾರವು ಶತ್ರು ದೇಶಗಳಲ್ಲಿ ಪೌರತ್ವ ಹೊಂದಿರುವವರ ಆಸ್ತಿಗಳನ್ನು ಹರಾಜು ಮಾಡಿ ಶತ್ರುಗಳ ಆಸ್ತಿತ್ವವನ್ನು ದೇಶದಿಂದ ಕೊನೆಗಾಣಿಸುವ ಉದ್ದೇಶ ಹೊಂದಿದೆ. ಭಾರತದಂತೆ ಅಮೇರಿಕ, ಇಂಗ್ಲೆಂಡ್, ಇಸ್ರೇಲ್, ಜೋರ್ಡಾನ್, ಕೆನಡಾ ಮತ್ತು ನೆರೆಯ ಬಾಂಗ್ಲಾ ಮೊದಲಾದ ದೇಶಗಳೂ ಶತ್ರುಗಳ ಆಸ್ತಿಗಳಿಗೆ ಸಂಬಂಧಿಸಿ ಕಾಯ್ದೆಗಳನ್ನು ರೂಪಿಸಿದೆ.

# ಕ್ಷಣ ಕ್ಷಣಕ್ಕೂ ಬಿಜೆಪಿಯಲ್ಲಿ ಬಂಡಾಯ ಸ್ಫೋಟ!

## ಲಕ್ಷ್ಮಣ್ ಸವದಿ, ಗೂಳಿಹಟ್ಟಿ ಶೇಖರ್, ಸೊಗಡು ಶಿವಣ್ಣ, ಅಂಗಾರ, ಎನ್.ಆರ್.ಸಂತೋಷ್, ಅನಿಲ್ ಬೆನಕೆ, ನೆಹರು ಓಲೇಕರ್, ಎಂ.ಪಿ.ಕುಮಾರ್ ಸ್ವಾಮಿ ಇತರರು ಜೆಜೆಪಿಗೆ ಸೆಡ್ಡು; ಪಕ್ಷ ತೊರೆಯುವ ನಿರ್ಧಾರ

ಮೈಸೂರು, ಏ.13–ಬಿಜೆಪಿ ಎರಡು ಹಂತಗಳಲ್ಲಿ ಒಟ್ಟು 212 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡುತ್ತಿದ್ದಂತೆಯೇ ದಿನೇ ದಿನೇ ಟಿಕೆಟ್ ವಂಚಿತರ ಅಸಮಾಧಾನ ಹೆಚ್ಚಾಗುತ್ತಿದ್ದು, ರಾಜೀನಾಮೆ ಪರ್ವ ಮುಂದುವರೆದಿದೆ. ಕೆಲವರು ಬಂಡಾಯವಾಗಿ ಸ್ಪರ್ಧಿಸಲು ಮುಂದಾದರೆ, ಮತ್ತೆ ಕೆಲವರನ್ನು ಕಾಂಗ್ರೆಸ್ ಮತ್ತು ಜೆಡಿಎಸ್ ಸೆಳೆಯಲು ಪ್ರಯತ್ನಿಸುತ್ತಿದೆ. ಇನ್ನೊಂದೆಡೆ ಕೆಲ ಟಿಕೆಟ್ ವಂಚಿತರು ಅಭಿಮಾನಿಗಳ ಸಭೆ ನಡೆಸಿ ಅವರ ಸಲಹೆ ಪಡೆಯುವ ಶಾಸ್ತ್ರದಲ್ಲಿ ತೊಡಗಿದ್ದಾರೆ.

ಅಥಣಿ ಕ್ಷೇತ್ರದ ಟಿಕೆಟ್ ಕೈತಪ್ಪಿದ್ದರಿಂದ ಪಕ್ಷ ತೊರೆಯಲು ಮುಂದಾಗಿರುವ ಮಾಜಿ ಡಿಸಿಎಂ ಆದ ವಿಧಾನಪರಿಷತ್ ಸದಸ್ಯ ಲಕ್ಷ್ಮಣ ಸವದಿ ಈಗಾಗಲೇ ಅಭಿಮಾನಿಗಳ ಸಭೆ ನಡೆಸಿದ್ದು, ಪರಿಷತ್ ಸದಸ್ಯತ್ವ ಹಾಗೂ ಬಿಜೆಪಿ ರಾಜೀನಾಮೆ ಸಲ್ಲಿಸುವ ನಿರ್ಧಾರ ಕೈಗೊಂಡಿದ್ದಾರೆ. ಇವರು ಕಾಂಗ್ರೆಸ್ ಮತ್ತು ಜೆಡಿಎಸ್ ಮುಖಂಡರ ಸಂಪರ್ಕದಲ್ಲಿದ್ದು, ಇವೆರಡರಲ್ಲಿ ಒಂದು ಪಕ್ಷದಿಂದ ಚುನಾವಣೆಯಲ್ಲಿ ಸ್ಪರ್ಧಿಸುವುದು ಬಹುತೇಕ ಖಚಿತವಾಗಿದೆ. ಬಲ್ಲ ಮೂಲಗಳ ಪ್ರಕಾರ ಮಾಜಿ ಸಚಿವ ಬಸವರಾಜ ರಾಯರೆಡ್ಡಿ ಅವರ ಮೂಲಕ ಕಾಂಗ್ರೆಸ್ ಮುಖಂಡರೊಂದಿಗೆ ಮಾತುಕತೆ ನಡೆಸಿರುವ ಸವದಿ, ಇನ್ನೆರಡು ದಿನದಲ್ಲಿ ಕಾಂಗ್ರೆಸ್ ಸೇರ್ಪಡೆಯಾಗಿ ಆ ಪಕ್ಷದ ಅಭ್ಯರ್ಥಿಯಾಗಿ ಕಣಕ್ಕಿಳಿಯಲಿದ್ದಾರೆ ಎಂದು ತಿಳಿದು ಬಂದಿದೆ.

ಹೊಸದುರ್ಗ ಕ್ಷೇತ್ರದ ಟಿಕೆಟ್ ವಂಚಿತ ಶಾಸಕ ಗೂಳಿಹಟ್ಟಿ ಶೇಖರ್ ಈಗಾಗಲೇ ರಾಜೀನಾಮೆ ಸಲ್ಲಿಸಿದ್ದು, ಪಕ್ಷೇತರರಾಗಿ ಸ್ಪರ್ಧಿಸಲಿರುವುದಾಗಿ ಘೋಷಿಸಿದ್ದಾರೆ. ಮೂಡಿಗೆರೆ ಶಾಸಕ ಎಂ.ಪಿ.ಕುಮಾರಸ್ವಾಮಿಯವರು ಬಿಜೆಪಿಗೆ ರಾಜೀನಾಮೆ ಸಲ್ಲಿಸಿದ್ದು, ಈ ಚುನಾವಣೆಯಲ್ಲಿ ಸ್ಪರ್ಧಿಸುವುದಾಗಿ ತಿಳಿಸಿದ್ದಾರೆಯಾದರೂ, ಯಾವ ಪಕ್ಷದಿಂದ ಎಂದು ಬಹಿರಂಗಪಡಿಸಿಲ್ಲ. ಆದರೆ ಈಗಾಗಲೇ ಜೆಡಿಎಸ್ ಮುಖಂಡರೊಂದಿಗೆ ಅವರು ಒಂದು ಸುತ್ತಿನ ಮಾತುಕತೆ ನಡೆಸಿದ್ದಾರೆ ಎಂದು ಹೇಳಲಾಗಿದೆ.




ತುಮಕೂರು ನಗರ ಕ್ಷೇತ್ರದ ಆಕಾಂಕ್ಷಿಯಾಗಿದ್ದ ಮಾಜಿ ಸಚಿವ ಸೊಗಡು ಶಿವಣ್ಣ ಬಿಜೆಪಿ ತೊರೆಯಲು ನಿರ್ಧರಿಸಿದ್ದು, ಅವರು ಜೆಡಿಎಸ್ ಸಂಪರ್ಕದಲ್ಲಿದ್ದಾರೆ ಎಂದು ಹೇಳಲಾಗಿದೆ. ವಿಜಯಪುರ ನಗರ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದ ಅಪ್ಪು ಪಟ್ಟಣಶೆಟ್ಟಿ ಇಂದು ತಮ್ಮ ಬೆಂಬಲಿಗರ ಸಭೆ ನಡೆಸಿದ್ದು, ಬಿಜೆಪಿ ತೊರೆಯುವ ಸ್ಪಷ್ಟ ಸೂಚನೆ ನೀಡಿದ್ದಾರೆ. ಹಾವೇರಿ ಟಿಕೆಟ್ ವಂಚಿತರಾದ ಶಾಸಕ ನೆಹರು ಓಲೇಕರ್ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸೆಡ್ಡು ಹೊಡೆದಿದ್ದು, ನಾನು ಈ ಚುನಾವಣೆಯಲ್ಲಿ ನಮ್ಮ ದಮ್ಮು–ತಾಕತ್ತು ತೋರಿಸುತ್ತೇವೆ. ಸಾಧ್ಯವಾದರೆ ಬೊಮ್ಮಾಯಿ ಅವರೂ ಕೂಡ ಅವರ ದಮ್ಮು–ತಾಕತ್ತು ತೋರಿಸಲಿ ಎಂದು ಮುಖ್ಯಮಂತ್ರಿಗಳ ಶೈಲಿಯಲ್ಲೇ ಸವಾಲು ಹಾಕಿರುವ ಅವರು, ಈ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ವಿರುದ್ಧ ಕಣಕ್ಕಿಳಿಯುವ ಸ್ಪಷ್ಟ ಸೂಚನೆ ನೀಡಿದ್ದಾರೆ.

ಮತ್ತೊಂದೆಡೆ ಸುಳ್ಯ ಕ್ಷೇತ್ರದಲ್ಲಿ ಸತತ 6 ಬಾರಿ ಗೆಲುವು ಸಾಧಿಸಿದ್ದ ಸಚಿವ ಅಂಗಾರ ಅವರು ರಾಜಕೀಯ ನಿವೃತ್ತಿ ಘೋಷಿಸಿದ್ದಾರೆ. ಹಾಸನ ಜಿಲ್ಲೆ ಅರಸೀಕೆರೆ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಸಂಬಂಧಿ ಎನ್.ಆರ್.ಸಂತೋಷ್ ಟಿಕೆಟ್ ತಪ್ಪಿದ್ದಕ್ಕೆ ಕೆಂಡಾಮಂಡಲವಾಗಿದ್ದಾರೆ. ಈ ಚುನಾವಣೆಯಲ್ಲಿ ತಾನು ಸ್ಪರ್ಧಿಸುವುದಾಗಿ ಘೋಷಿಸಿರುವ ಅವರು, ಪಕ್ಷೇತರ ಅಥವಾ ಯಾವುದಾದರೂ ಪಕ್ಷದ ಅಭ್ಯರ್ಥಿಯಾಗಿ ಕಣಕ್ಕಿಳಿಯುವುದಾಗಿ ತಿಳಿಸಿದ್ದಾರೆ. ಮೂಲಗಳ ಪ್ರಕಾರ ಅವರು ಜೆಡಿಎಸ್ ಮುಖಂಡರನ್ನು ಸಂಪರ್ಕಿಸಿದ್ದಾರೆ ಎಂದು ಹೇಳಲಾಗಿದೆ. ಮತ್ತೊಂದೆಡೆ ಬೆಳಗಾವಿ ಉತ್ತರ ಕ್ಷೇತ್ರದ ಶಾಸಕ ಅನಿಲ್ ಬೆನಕೆ ಅವರಿಗೆ ಟಿಕೆಟ್ ತಪ್ಪಿದ್ದು, ಅವರೂ ಕೂಡ ಬಿಜೆಪಿ ತೊರೆಯಲು ನಿರ್ಧರಿಸಿದ್ದಾರೆ. ಶಾಸಕಿ ಲಕ್ಷ್ಮೀ ಹೆಬ್ಬಾಳ್ಕರ್ ಮೂಲಕ ಅನಿಲ್ ಬೆನಕೆ ಅವರು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ಸಂಪರ್ಕಿಸಿ, ಕಾಂಗ್ರೆಸ್ ಟಿಕೆಟ್ ಕೋರಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಚಾಮರಾಜನಗರದಲ್ಲಿ ಟಿಕೆಟ್ ಕೈತಪ್ಪಿದ್ದರಿಂದ ಅಸಮಾಧಾನಗೊಂಡಿರುವ ಮಾಜಿ ಶಾಸಕ ಸಿ.ಗುರುಸ್ವಾಮಿ ಪುತ್ರಿ ನಾಗಶ್ರೀ ಪ್ರತಾಪ್ ಅವರು ಇಂದು ತಮ್ಮ ಬೆಂಬಲಿಗರ ಸಭೆ ನಡೆಸಿದರು. ಈ ಸಭೆಯಲ್ಲಿ ನೆರೆದಿದ್ದ ಸಾವಿರಾರು ಬೆಂಬಲಿಗರು ನಾಗಶ್ರೀ ಅವರನ್ನು ಪಕ್ಷೇತರರಾಗಿ ಸ್ಪರ್ಧಿಸುವಂತೆ ಒತ್ತಡ ಹೇರಿದ್ದಾರೆ. ಚಾ.ನಗರದಲ್ಲಿ ಬಿಜೆಪಿ ಟಿಕೆಟ್ ಗಿಟ್ಟಿಸಿಕೊಂಡಿರುವ ಸಚಿವ ವಿ.ಸೋಮಣ್ಣ ಅವರು ಮುಖಂಡರಾದ ಕೋಟೆ ಶಿವಣ್ಣ ಮತ್ತು ಮೈ.ವಿ.ರವಿಶಂಕರ್ ಅವರೊಡಗೂಡಿ ನಾಗಶ್ರೀ ಅವರ ನಿವಾಸಕ್ಕೆ ತೆರಳಿ ಅವರ ಅಸಮಾಧಾನವನ್ನು ಶಮನಗೊಳಿಸಲು ಪ್ರಯತ್ನಿಸಿದರಾದರೂ ನಾಗಶ್ರೀ ಅವರು ನಿರ್ಧಾರ ಕೈಗೊಳ್ಳಲು ತಮಗೆ ಇನ್ನೆರಡು ದಿನ ಅವಕಾಶ ನೀಡುವಂತೆ ಮನವಿ ಮಾಡಿದ್ದಾರೆಯೇ ಹೊರತು ಬಂಡಾಯ ವಾಗಿ ಸ್ಪರ್ಧಿಸುವುದಿಲ್ಲ ಎಂದು ಹೇಳಿಲ್ಲ. ಹೀಗಾಗಿ ಚಾಮರಾಜನಗರದಲ್ಲಿ ಬಿಜೆಪಿ ಬಂಡಾಯದ ಹೊಗೆ ಬೂದಿ ಮುಚ್ಚಿದ ಕೆಂಡದಂತಿದೆ.

## ಶೀಘ್ರವೇ ಭಿನ್ನಮತ ಶಮನ

ಮಂಗಳೂರು, ಏ.13– ಮುಂಬರುವ



ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ಸಿಗದೆ ಅತೃಪ್ತರಾಗಿರುವ ನಾಯಕರನ್ನು ಮನವೊಲಿಸುವ ಪ್ರಯತ್ನದಲ್ಲಿ ಬಿಜೆಪಿ ಹಿರಿಯ ನಾಯಕರು ತೊಡಗಿಸಿಕೊಂಡಿದ್ದಾರೆ. ಶೀಘ್ರದಲ್ಲೇ ಪಕ್ಷದಲ್ಲಿನ ಭಿನ್ನಾಭಿಪ್ರಾಯ ಶಮನಗೊಳ್ಳಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುರುವಾರ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಬದಲಾವಣೆ ಸಹಜ, ಕೆಲವೊಮ್ಮೆ ಹೀಗಾಗುತ್ತೆ. ಅಸಮಾಧಾನ ಇರುವವರ ಮನವೊಲಿಸುತ್ತೇವೆ. ಪಕ್ಷದಲ್ಲಿನ ಅಸಮಾಧಾನ ಸರಿಪಡಿಸಲಾಗುತ್ತಿದೆ. ಕಾರ್ಯಕರ್ತರು ಬಲಿಷ್ಠರಾಗಿದ್ದು, ಇದರಿಂದ ಯಾವುದೇ ತೊಂದರೆಯಾಗುವುದಿಲ್ಲ. ಬಹುತೇಕ ಕಡೆ ಪಕ್ಷದ ಭಿನ್ನಾಭಿಪ್ರಾಯ ಶಮನವಾಗಲಿದೆ ಎಂದರು. ಹೈಕಮಾಂಡ್ ಅತೃಪ್ತರ ಜೊತೆ ಮಾತನಾಡುತ್ತಿದೆ. ಎಲ್ಲ ನಾಯಕರ ಜತೆ ಮಾತನಾಡಿದ್ದೇನೆ. ಸವದಿ ಹಿರಿಯರಾಗಿದ್ದು, ಸುದೀರ್ಘ ಕಾಲದಿಂದ ರಾಜಕೀಯದಲ್ಲಿದ್ದಾರೆ. ಆ ಕ್ಷೇತ್ರಕ್ಕಾಗಿ ಒತ್ತಡವೂ ಇದೆ, ಸರಿಹೋಗಲು ಸಮಯ ತೆಗೆದುಕೊಳ್ಳುತ್ತದೆ. ಕಾಂಗ್ರೆಸ್‌ನಲ್ಲಿ 60ರಿಂದ 65 ಕ್ಷೇತ್ರಗಳಿಗೆ ಅಭ್ಯರ್ಥಿಗಳಿಲ್ಲ ಎಂದು ಹೇಳಿರುವ ಸಿಎಂ, ಈಗ ಪಕ್ಷವು ಬೇರೆ ಪಕ್ಷಗಳಿಂದ ನಾಯಕರನ್ನು ಸೇರಿಸಿಕೊಳ್ಳುವ ಚಿಂತನೆ ನಡೆಸುತ್ತಿದೆ. ಕಾಂಗ್ರೆಸ್‌ಗೆ ಸಮರ್ಥ ಅಭ್ಯರ್ಥಿ ಇಲ್ಲ, ಅಧಿಕಾರಕ್ಕೆ ಬರುವುದಿಲ್ಲ ಎಂದರು.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com*

ಮೈಸೂರು ಮಿತ್ರ



# ಹೈಕಮಾಂಡ್ ಆದೇಶದಂತೆ ಸೋಮಣ್ಣ ವರುಣಾ, ಚಾ.ನಗರದಲ್ಲಿ ಸ್ಪರ್ಧಿಸುತ್ತಿದ್ದಾರೆ

● ಸಂಸದ ಶ್ರೀನಿವಾಸಪ್ರಸಾದ್ ಪ್ರತಿಕ್ರಿಯೆ ● ಪ್ರಸಾದರ ಸಹಕಾರ ಕೋರಿದ ಸೋಮಣ್ಣ



ಮೈಸೂರು,ಏ.13–ಚಾಮರಾಜನಗರ ಮತ್ತು ವರುಣಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿರುವ ಸಚಿವ ವಿ.ಸೋಮಣ್ಣ ಅವರು ಗುರುವಾರ ಚಾಮರಾಜನಗರ ಸಂಸದ ವಿ.ಶ್ರೀನಿವಾಸಪ್ರಸಾದ್ ಅವರನ್ನು ಅವರ ಜಯಲಕ್ಷ್ಮೀಪುರಂ ನಿವಾಸದಲ್ಲಿ ಭೇಟಿ ಮಾಡಿ, ಸಹಕಾರ ಕೋರಿದರು.

ಈ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿದ ಶ್ರೀನಿವಾಸಪ್ರಸಾದ್, ಚಾಮರಾಜನಗರ ಮತ್ತು ವರುಣಾ ಎರಡೂ ಕ್ಷೇತ್ರಗಳೂ ನನ್ನ ಚಾಮರಾಜನಗರ ಲೋಕಸಭಾ ಕ್ಷೇತ್ರಕ್ಕೆ ಒಳಪಡುವುದರಿಂದ ಈ ಕ್ಷೇತ್ರಗಳಲ್ಲಿ ಸ್ಪರ್ಧಿಸಲಿರುವ ಸೋಮಣ್ಣ ನನ್ನನ್ನು ಭೇಟಿ ಮಾಡಿ ಸಹಕಾರ ಕೋರಿದ್ದಾರೆ. ಅವರೊಂದಿಗೆ ಸಂಸದ ಪ್ರತಾಪ್ ಸಿಂಹ ಅವರೂ ಕೂಡ ಬಂದಿದ್ದರು. ನಾನು ಒಳ್ಳೆಯದಾಗಲಿ ಎಂದು ಹೇಳಿದ್ದೇನೆ. ಅಲ್ಲದೇ ಅವರಿಗೆ ಏನೇನು ಹೇಳಬೇಕೋ ಎಲ್ಲವನ್ನೂ ಹೇಳಿದ್ದೇನೆ. ಅವೆಲ್ಲವನ್ನೂ ಬಹಿರಂಗಪಡಿಸಲಾಗುವುದಿಲ್ಲ ಎಂದರು.

ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸುವಂತೆ ಹೈಕಮಾಂಡ್ ಆದೇಶ ಮಾಡಿದೆ. ನನ್ನನ್ನು ಈ ಕ್ಷೇತ್ರಗಳಲ್ಲಿ ನಿಲ್ಲಲೇಬೇಕೆಂದು ಬಲವಂತವಾಗಿ ಆದೇಶಿಸಿರುವುದರಿಂದ ನಾನು ನಿಲ್ಲುತ್ತಿದ್ದೇನೆ. ನನ್ನ ಪರಿಸ್ಥಿತಿ ಹೀಗಿದೆ ಎಂದು ಸೋಮಣ್ಣ ಹೇಳಿದರು ಎಂದ ಪ್ರಸಾದ್, ಸೋಮಣ್ಣ ಆಗಲೀ, ಅಶೋಕ್ ಆಗಲೀ ಎರಡೆರಡು ಕ್ಷೇತ್ರಗಳಲ್ಲಿ ಸ್ಪರ್ಧಿಸುವುದು ಕಷ್ಟ ಎಂದು ನಾವು ಹೇಳಲಾಗಲ್ಲ. ಅದರ ಬಗ್ಗೆ ಹೈಕಮಾಂಡ್ ಯೋಚನೆ ಮಾಡಬೇಕು ಎಂದ ಅವರು, ಚುನಾವಣೆಯಲ್ಲಿ ಸ್ಪರ್ಧಿಸುವುದು ಸಾಮಾನ್ಯವಲ್ಲ. ಹಲವಾರು ಅಡೆ–ತಡೆಗಳು ಬರುತ್ತವೆ. ಅವೆಲ್ಲವನ್ನೂ ಎದುರಿಸಿ ನಿಲ್ಲುವುದೇ ಚುನಾವಣೆ ಎಂದರಲ್ಲದೆ, ಹೈಕಮಾಂಡ್‌ನವರು ಎಲ್ಲಾ ನಿಟ್ಟಿನಲ್ಲೂ ಯೋಚಿಸಿ ತೀರ್ಮಾನ ತೆಗೆದುಕೊಂಡಿರಬಹುದು ಎಂದರು.

ಚಾಮರಾಜನಗರ ಬಿಜೆಪಿಯಲ್ಲಿ ಸೋಮಣ್ಣ ಅವರಿಗೆ ವಿರೋಧ ವ್ಯಕ್ತವಾಗಿರುವುದರ ಬಗ್ಗೆ ಪ್ರತಿಕ್ರಿಯಿಸಿದ ಅವರು, ಚಾಮರಾಜನಗರದವರು ಕೇಳುವುದು ಸರಿಯಿದೆ. ಸ್ಥಳೀಯರಿಗೆ ಟಿಕೆಟ್ ಕೊಡಿ ಎಂದು ಕೇಳುವುದನ್ನು ನಾವು ಬೇಡ ಎನ್ನಲಾಗುವುದಿಲ್ಲ. ಆದರೆ ಹೈಕಮಾಂಡ್‌ನವರು ಅಳೆದು–ತೂಗಿ ಸರ್ವೆ ವರದಿಗಳನ್ನಾಧರಿಸಿ ಟಿಕೆಟ್ ಕೊಟ್ಟಿದ್ದಾರೆ. ಟಿಕೆಟ್ ಘೋಷಣೆಯಾದಾಗ ಅಸಮಾಧಾನಗಳು ಎಲ್ಲಾ ಪಕ್ಷದಲ್ಲೂ ಸರ್ವೇಸಾಮಾನ್ಯ. ನಾಮಪತ್ರ ಸಲ್ಲಿಕೆಯಾಗಿ ಚುನಾವಣಾ ಪ್ರಕ್ರಿಯೆಗಳು ಆರಂಭವಾಗುತ್ತಿದ್ದಂತೆಯೇ ಎಲ್ಲವೂ ಸರಿಯಾಗುತ್ತದೆ ಎಂದರು.

ನಾನು ಈಗಾಗಲೇ ರಾಜಕೀಯ ನಿವೃತ್ತಿ ಘೋಷಿಸಿದ್ದೇನೆ. ಸಂಸತ್ ಸದಸ್ಯ ಸ್ಥಾನದ ಅವಧಿ ಇನ್ನೂ ಒಂದು ವರ್ಷವಿದೆ. ಅಲ್ಲಿವರೆವಿಗೂ ನಾನು ರಾಜಕಾರಣ ಮಾಡುತ್ತೇನೆ ಎಂಬುದನ್ನು ಈ ಹಿಂದೆಯೇ ಹೇಳಿದ್ದೇನೆ. ಈಗ ನಡೆಯುತ್ತಿರುವ ವಿಧಾನಸಭಾ ಚುನಾವಣೆಯ ಪ್ರಚಾರವೇ ನನ್ನ ಕೊನೆಯ ಪ್ರಚಾರವಾಗಿರುತ್ತದೆ. ಆನಂತರ ಯಾವುದೇ ಚುನಾವಣೆಯಲ್ಲೂ ನಾನು ಪ್ರಚಾರ ಮಾಡುವುದಿಲ್ಲ ಎಂದು ಪ್ರಸಾದ್ ಹೇಳಿದರು.

ವರುಣಾದಲ್ಲಿ ಸಿದ್ದರಾಮಯ್ಯನವರೇ ಗೆಲ್ಲುತ್ತಾರೆ ಎಂದು ಅವರ ಪುತ್ರ ಶಾಸಕ ಡಾ.ಯತೀಂದ್ರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಎಲ್ಲರೂ ಹಾಗೇ ಹೇಳುತ್ತಾರೆ. ಆದರೆ ರಾಜ್ಯದ 224 ಕ್ಷೇತ್ರಗಳಲ್ಲೂ ಯಾರು ಗೆಲ್ಲಬೇಕು ಎಂಬುದನ್ನು ತೀರ್ಮಾನಿಸುವುದು ಮತದಾರರು. ಮೇ 13ರಂದು ಮತದಾರರು ನೀಡಿದ ತೀರ್ಪು ಗೊತ್ತಾಗುತ್ತದೆ ಎಂದರು.

## ಇಂದು ಕಂಚಿನ ಬುದ್ಧ ಪ್ರತಿಮೆ ಅನಾವರಣ

ಮೈಸೂರು,ಏ.13–ಡಾ.ಅಂಬೇಡ್ಕರ್ ಅವರ 132ನೇ ಜನ್ಮ ದಿನಾಚರಣೆ (ಏ.14)ಯಂದು ಬೆಳಗ್ಗೆ 8ಕ್ಕೆ ಪೂಜ್ಯ ಭಿಕ್ಕು ಸಂಘದ ವತಿಯಿಂದ ಮೈಸೂರಿನ ಭಗವಾನ್ ಬುದ್ಧವೃತ್ತದಲ್ಲಿ ಕಂಚಿನ ಬುದ್ಧರ ಪ್ರತಿಮೆಯನ್ನು ಅನಾವರಣಗೊಳಿಸಲಾಗುವುದು. ಸಂಜೆ 5.30ರಿಂದ ಅಮ್ಮ ರಾಮಚಂದ್ರ ತಂಡದಿಂದ ಡಾ.ಬಿ.ಆರ್.ಅಂಬೇಡ್ಕರ್ ಗೀತಗಾಯನ ಕಾರ್ಯಕ್ರಮ ನಡೆಯಲಿದೆ.

## ಸಚಿವ ಎಸ್‌ಟಿಎಸ್ ವಿರುದ್ಧ ಎಫ್‌ಐಆರ್

ಬೆಂಗಳೂರು,ಏ.13(ಕೆಎಂಶಿ)–ಚುನಾವಣಾ ನೀತಿಸಂಹಿತೆ ಉಲ್ಲಂಘನೆ ಹಿನ್ನೆಲೆ ಸಚಿವ ಎಸ್.ಟಿ.ಸೋಮಶೇಖರ್ ವಿರುದ್ಧ ಕಗ್ಗಲಿಪುರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಚುನಾವಣಾ ಪ್ರಚಾರದ ಭಾಷಣದಲ್ಲಿ ಬಿರಿಯಾನಿ ಊಟದ ವ್ಯವಸ್ಥೆ ಇದೆ ಎಂದು ಸೋಮಶೇಖರ್ ಹೇಳಿ ಮತದಾರರಿಗೆ ಆಮಿಷ ಒಡ್ಡಿದ್ದಾರೆ ಎಂದು ಆರೋಪಿಸಿ ಜೆಡಿಎಸ್ ಕಾನೂನು ವಿಭಾಗದ ಅಧ್ಯಕ್ಷ ಎ.ಪಿ.ರಂಗನಾಥ್ ದೂರು ದಾಖಲಿಸಿದ್ದಾರೆ.

## ಅಗ್ನಿ ಅವಘಡ: ಅಪ್ಪ–ಮಗ ಸಾವು

ಕೋಲ್ಕತ್ತಾ, ಏ.13– ಕೋಲ್ಕತ್ತಾದ ಶೂ ಲೇಬಲ್ ಮುದ್ರಣ ಘಟಕದಲ್ಲಿ ಗುರುವಾರ ಬೆಳಗ್ಗೆ ಸಂಭವಿಸಿದ ಭಾರೀ ಅಗ್ನಿ ಅವಘಡದಲ್ಲಿ ಅಪ್ಪ–ಮಗ ಸಾವನ್ನಪ್ಪಿದ್ದು, ಮತ್ತೊಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ. ತಿಲಜಾಲಾ ಪ್ರದೇಶದ ಹೋಟೆಲ್ ಅಲ್ಬೆಲಾ ಪಕ್ಕದಲ್ಲಿರುವ ಘಟಕದಲ್ಲಿ ಬೆಳಿಗ್ಗೆ 7.20ರ ಸುಮಾರಿಗೆ ಬೆಂಕಿ ಕಾಣಿಸಿಕೊಂಡಿತ್ತು. ನಾಲ್ಕು ಅಗ್ನಿಶಾಮಕ ವಾಹನಗಳ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

## ತಕರಾರು ಮಾಡಿದ ಮಹಾರಾಣಿ ಕಾಲೇಜು ಕ್ಯಾಂಟೀನ್ ಬಾಡಿಗೆದಾರರಿಗೆ 5.03 ಲಕ್ಷ ರೂ. ಬಾಕಿ ಪಾವತಿಸಿ, ತೆರವುಗೊಳಿಸಲು ತಾಕೀತು

ಮೈಸೂರು, ಏ.13– ಮೈಸೂರು ಜೆಎಲ್‌ಬಿ ರಸ್ತೆಯ ಮಹಾರಾಣಿ ಮಹಿಳಾ ವಿಜ್ಞಾನ ಸ್ವಾಯತ್ತ ಕಾಲೇಜಿನಲ್ಲಿ ಅವಧಿ ಮೀರಿ ಕ್ಯಾಂಟೀನ್ ನಡೆಸುತ್ತಿದ್ದ ಬಾಡಿಗೆದಾರರು ಖಾಲಿ ಮಾಡುವಂತೆ ಕರ್ನಾಟಕ ಸಾರ್ವಜನಿಕ ಆವರಣಗಳ ಸಕ್ಷಮ ಪ್ರಾಧಿಕಾರಗಳ ಜಿಲ್ಲಾ ನ್ಯಾಯಾಲಯ ಇತ್ತೀಚೆಗೆ ಆದೇಶ ನೀಡಿದೆ.

ಕಾಲೇಜು ಕ್ಯಾಂಟೀನ್ ನಡೆಸಲು 21,300 ರೂ. ಭದ್ರತಾ ಠೇವಣಿ ಹಾಗೂ ಮಾಸಿಕ 7,100 ರೂ. ಬಾಡಿಗೆ ಆಧಾರದಲ್ಲಿ 2017ರಿಂದ 2022ರವರೆಗೆ ಕರಾರು ಮಾಡಿಕೊಳ್ಳಲಾಗಿತ್ತು. ಆದರೆ ಒಟ್ಟು 58 ತಿಂಗಳ ಬಾಡಿಗೆ ಬದಲಿಗೆ ಕೇವಲ 26 ತಿಂಗಳ ಬಾಡಿಗೆ ನೀಡಲಾಗಿತ್ತು. ಅಲ್ಲದೇ 52 ತಿಂಗಳ 2.6 ಲಕ್ಷ ರೂ. ವಿದ್ಯುತ್ ಬಿಲ್ ಪಾವತಿಸದೆ ಕರಾರು ಉಲ್ಲಂಘನೆ ಮಾಡಲಾಗಿತ್ತು. ಬಾಕಿ ಬಾಡಿಗೆ ಹಾಗೂ ವಿದ್ಯುತ್ ಬಿಲ್ ಸಂದಾಯ ಮಾಡಿ, ಕರಾರಿನ ಅವಧಿ ಮುಗಿದಿರುವುದರಿಂದ ಕ್ಯಾಂಟೀನ್ ಬಿಟ್ಟುಕೊಡುವಂತೆ ಪ್ರಾಂಶುಪಾಲರು ಸೂಚಿಸಿದ್ದರು. ಆದರೆ ಬಾಡಿಗೆದಾರರಾದ ಪ್ರಭಾವತಿ ಅವರು ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿ, ಒಪ್ಪಂದ ಉಲ್ಲಂಘಿಸಿ ಕ್ಯಾಂಟೀನ್ ಹಸ್ತಾಂತರ ಮಾಡಿರಲಿಲ್ಲ. ಈ ಬಗ್ಗೆ ಪ್ರಾಂಶುಪಾಲರು, ಕರ್ನಾಟಕ ಸಾರ್ವಜನಿಕ ಆವರಣಗಳ ಸಕ್ಷಮ ಪ್ರಾಧಿಕಾರಗಳ ಜಿಲ್ಲಾ ನ್ಯಾಯಾಲಯದ ಮೊರೆ ಹೋಗಿದ್ದರು. ಸದರಿ ವಿಷಯವನ್ನು ಮನಗಂಡ ಮಾನ್ಯ ಕರ್ನಾಟಕ ಸಾರ್ವಜನಿಕ ಆವರಣಗಳ(ಅನಧಿಕೃತ ಅಧಿಬೋಗದಾರರನ್ನು ಹೊರಹಾಕುವ) ಅಧಿನಿಯಮ 1974ರ ಸಕ್ಷಮ ಪ್ರಾಧಿಕಾರಗಳ ನ್ಯಾಯಾಲಯವು ಪ್ರಕರಣವನ್ನು ಇತ್ಯರ್ಥಪಡಿಸಿ, ಬಾಕಿ ಬಾಡಿಗೆ 2,43,800 ರೂ., ವಿದ್ಯುತ್ ಹಾಗೂ ನೀರಿನ ಬಾಕಿ 2.60 ಲಕ್ಷ ರೂ. ಸೇರಿ ಒಟ್ಟು 5.03 ಲಕ್ಷ ರೂ. ಪಾವತಿಸಿ ಕ್ಯಾಂಟೀನ್ ಅನ್ನು ಕಾಲೇಜು ಮುಖ್ಯಸ್ಥರಿಗೆ ಹಸ್ತಾಂತರಿಸುವಂತೆ ಕ್ಯಾಂಟೀನ್ ಬಾಡಿಗೆದಾರರಾದ ಪ್ರಭಾವತಿ ಅವರಿಗೆ ಆದೇಶ ನೀಡಿದೆ. ಕಾಲೇಜು ಪರವಾಗಿ ಜಿಲ್ಲಾ ಸರ್ಕಾರಿ ವಕೀಲ ಉಮೇಶ್ ಕುಮಾರ್ ವಾದ ಮಂಡಿಸಿದ್ದರು.

ಕೋವಿಡ್ ಸಮಯದಲ್ಲಿ ವಿನಾಯ್ತಿ ನೀಡಿದ್ದನ್ನು ದುರುಪಯೋಗಪಡಿಸಿಕೊಂಡು ಮುಂದುವರೆದಿದ್ದರು. ವಿದ್ಯಾರ್ಥಿನಿಯರ ದೂರಿನ ಮೇರೆಗೆ ಆಹಾರ ಗುಣಮಟ್ಟದ ಬಗ್ಗೆ ಪ್ರಶ್ನೆ ಮಾಡಿದ ಪ್ರಾಂಶುಪಾಲರೊಂದಿಗೆ ಬಾಡಿಗೆದಾರರು ಜಗಳ ಮಾಡಿದ್ದರು. ನಂತರ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದ್ದರ ಹಿನ್ನೆಲೆಯಲ್ಲಿ ಪ್ರಾಂಶುಪಾಲ ಡಾ.ಡಿ.ರವಿ ಸಮಸ್ಯೆಯನ್ನು ಜಿಲ್ಲಾಧಿಕಾರಿ ಗಮನಕ್ಕೆ ತಂದಿದ್ದರು. ವಿದ್ಯಾರ್ಥಿನಿಯರ ಪ್ರತಿಭಟನೆ ತಿಳಿದ ಅಂದಿನ ಜಿಲ್ಲಾಧಿಕಾರಿ, ಗುಣಮಟ್ಟ ಪರಿಶೀಲಿಸಿ ವರದಿ ನೀಡುವಂತೆ ಪಾಲಿಕೆ ಆರೋಗ್ಯಾಧಿಕಾರಿಗೆ ನಿರ್ದೇಶಿಸಿದ್ದರು.

## ಹೆಲಿಪ್ಯಾಡ್ ಬಳಿ ಆಕಸ್ಮಿಕ ಬೆಂಕಿ: ಅದೃಷ್ಟವಶಾತ್ ಸಿಎಂ ಬೊಮ್ಮಾಯಿ ಪಾರು

ಉಡುಪಿ, ಏ.13– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಹೆಲಿಕಾಪ್ಟರ್ ಲ್ಯಾಂಡ್ ಆಗುತ್ತಿದ್ದ ಹೆಲಿಪ್ಯಾಡ್ ಬಳಿ ಬೆಂಕಿ ಕಾಣಿಸಿಕೊಂಡಿದ್ದು, ಅದೃಷ್ಟವಶಾತ್ ಬೊಮ್ಮಾಯಿಯವರು ಅಪಾಯದಿಂದ ಪಾರಾಗಿದ್ದಾರೆ. ಉಡುಪಿ ಜಿಲ್ಲೆ ಬೈಂದೂರಿನ ಅರೆಶಿರೂರು ಹೆಲಿಪ್ಯಾಡ್ ಬಳಿ ಮುಖ್ಯಮಂತ್ರಿಗಳ ಎಸ್ಕಾರ್ಟ್ ಹೋದ ಬಳಿಕ ಬೆಂಕಿ ಕಾಣಿಸಿಕೊಂಡಿದ್ದು, ಇದರಿಂದ ಕೆಲಕಾಲ ಆತಂಕದ ವಾತಾವರಣ ಸೃಷ್ಟಿಯಾಗಿತ್ತು.

ಬೈಂದೂರು ಅಗ್ನಿಶಾಮಕದಳ ಸಿಬ್ಬಂದಿ ಕೂಡಲೇ ಬೆಂಕಿ ನಂದಿಸಿದ್ದು, ಬಳಿಕ ಅರೆಶಿರೂರು ಹೆಲಿಪ್ಯಾಡ್ ಮೂಲಕ ಮುಖ್ಯಮಂತ್ರಿಗಳು ಕೊಲ್ಲೂರಿಗೆ ತೆರಳಿದರು.

ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಗುರುವಾರ ಬಿಡುಗಡೆ ಮಾಡಿದ್ದು, ಇದರ ಬೆನ್ನಲ್ಲೆ ಸಿಎಂ ಅವರು ಟೆಂಪಲ್ ರನ್ ಶುರು ಮಾಡಿದ್ದಾರೆ. ಇದರಂತೆ ಇಂದು ಉಡುಪಿಗೆ ಭೇಟಿ ನೀಡಿದ್ದು, ಬೈಂದೂರಿನ ಅರೆಶಿರೂರು ಹೆಲಿಪ್ಯಾಡ್ ಬಳಿ ಸಿಎಂ ಎಸ್ಕಾರ್ಟ್ ಹೋದ ಬಳಿಕ ಬೆಂಕಿ ಕಾಣಿಸಿಕೊಂಡಿದೆ. ಇದರಿಂದ ಆತಂಕ ಸೃಷ್ಟಿಯಾಗಿದ್ದು. ಅದೃಷ್ಟವಶಾತ್ ಬೊಮ್ಮಾಯಿ ಸ್ವಲ್ಪದರಲ್ಲಿ ಪಾರಾಗಿದ್ದಾರೆ.

## ನಾಳೆ, ನಾಳಿದ್ದು, ನೀರು ಸರಬರಾಜಲ್ಲಿ ವ್ಯತ್ಯಯ

ಮೈಸೂರು,ಏ.13–ನಗರಕ್ಕೆ ನೀರು ಸರಬರಾಜು ಮಾಡುವ ಹೊಂಗಳ್ಳಿ 2ನೇ ಹಾಗೂ 3ನೇ ಹಂತ ಯಂತ್ರಾಗಾರಗಳಿಗೆ ವಿದ್ಯುತ್ ಸರಬರಾಜು ಮಾಡುವ ಬೆಳಗೊಳ ಸಬ್ ಸ್ಟೇಷನ್‌ನಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಏ.15 ಮತ್ತು 16ರಂದು ನಗರದ ಕೆಲವೆಡೆ ನೀರು ಸರಬರಾಜಲ್ಲಿ ವ್ಯತ್ಯಯವಾಗಲಿದೆ. ಸಿಎಸ್‌ಆರ್, ಹೆಚ್‌ಎಲ್‌ಆರ್ ಪ್ರಾಂತ್ಯಗಳಿಗೆ, ವಾರ್ಡ್ ನಂ.1ರಿಂದ 7, ವಾರ್ಡ್ ನಂ.20, 23, 38, ವಾರ್ಡ್ ನಂ.42ರಿಂದ 45, ವಾರ್ಡ್ ನಂ.47, ಇದಕ್ಕೆ ಸಂಬಂಧಪಟ್ಟ ಡಿಎಂಎ ಪ್ರದೇಶಗಳಾದ ಹೆಬ್ಬಾಳು, ಕುಂಬಾರಕೊಪ್ಪಲು, ಮಂಚೇಗೌಡನಕೊಪ್ಪಲು, ಕೆ.ಜಿ.ಕೊಪ್ಪಲ್, ಮೇಟಗಳ್ಳಿ, ಲೋಕನಾಯಕ ನಗರ, ಬೃಂದಾವನ ಬಡಾವಣೆ, ಒಂಟಿಕೊಪ್ಪಲು, ಪಡುವಾರಹಳ್ಳಿ, ವಿನಾಯಕ ನಗರ, ಮಂಡಿಮೊಹಲ್ಲಾ, ಲಷ್ಕರ್ ಮೊಹಲ್ಲಾ, ಶಾರದಾದೇವಿನಗರ, ಸರಸ್ವತಿಪುರಂ, ಬೋಗಾದಿ, ವಿಜಯನಗರ 1, 3ನೇ ಹಂತ, ಗೋಕುಲಂ 1, 2, 3ನೇ ಹಂತ ಹಾಗೂ ಹೊರವಲಯಗಳಾದ ಆರ್‌ಎಂಪಿ, ಬಿಇಎಂಎಲ್, ಯಾದವಗಿರಿ, ಬನ್ನಿಮಂಟಪ ಎ, ಬಿ, ಸಿ ಲೇಔಟ್, ಈರನಗೆರೆ, ಸಿದ್ದಿಖಿನಗರ, ಶಿವರಾತ್ರೀಶ್ವರನಗರ, ತಿಲಕ್‌ನಗರ, ಬಡೇಮಕಾನ್, ಹಲೀಂನಗರ, ದೇವರಾಜ ಮೊಹಲ್ಲಾ ಭಾಗಶಃ ಎನ್.ಆರ್.ಮೊಹಲ್ಲಾ ಭಾಗಶಃ ಪ್ರದೇಶಗಳು, ನಜರ್‌ಬಾದ್ ಮೊಹಲ್ಲಾ, ವಿದ್ಯಾರಣ್ಯಪುರಂ, ಕೃಷ್ಣಮೂರ್ತಿಪುರಂ, ಜನತಾನಗರ, ಕೆಹೆಚ್‌ಬಿ ಕಾಲೋನಿ, ಹೂಟಗಳ್ಳಿ, ವಿಜಯನಗರ 2ನೇ ಹಂತದಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

## ಎಂಇಪಿಯಿಂದ 13 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ

ಮೈಸೂರು, ಏ.13(ಜಿಎ)–ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಅಖಿಲ ಭಾರತ ಮಹಿಳಾ ಸಬಲೀಕರಣ ಪಕ್ಷವು (ಎಂಇಪಿ) ಸ್ಪರ್ಧಿಸುತ್ತಿದ್ದು, ಮೈಸೂರು ನಗರದ ಮೂರು ಸೇರಿದಂತೆ ರಾಜ್ಯದ 13 ಕ್ಷೇತ್ರಗಳ ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ ಮಾಡಲಾಗಿದೆ ಎಂದು ಪಕ್ಷದ ರಾಜ್ಯಾಧ್ಯಕ್ಷ ಮೊಹ್ಮದ್ ಇಫ್ತೇಕಾರ್ ಶರೀಫ್ ತಿಳಿಸಿದರು.



ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕೃಷ್ಣರಾಜ ಕ್ಷೇತ್ರದಿಂದ ರಾಮಚಂದ್ರರಾವ್, ಚಾಮರಾಜ ಕ್ಷೇತ್ರದಿಂದ ಸಲೀಂ ಅಹ್ಮದ್ ಮತ್ತು ನರಸಿಂಹರಾಜ ಕ್ಷೇತ್ರದಿಂದ ಖಲೀಲ್ ಉರ್ ರೆಹಮಾನ್ ಅವರನ್ನು ಕಣಕ್ಕೆ ಇಳಿಸಲಾಗಿದೆ ಎಂದರು. ಪಕ್ಷದ ರಾಜ್ಯ ಕಾರ್ಯದರ್ಶಿ ನಾಜೀಯಾ ಬೇಗಂ, ನಗರಾಧ್ಯಕ್ಷ ಸಗ್ಗೀರ್ ಅಹ್ಮದ್ ಶರೀಫ್, ನಗರ ಕಾರ್ಯದರ್ಶಿ ಮುಜಾಯಿದ್ ಬೇಗ್ ಇದ್ದರು.

## ಏ.26ರಂದು ಪೂರ್ವಭಾವಿ ಸಭೆ

ಮೈಸೂರು,ಏ.13–ನಗರದ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯು 2024ನೇ ಸಾಲಿನಲ್ಲಿ ಶತಮಾನೋತ್ಸವವನ್ನು ಆಚರಿಸುತ್ತಿದ್ದು, ಸದರಿ ಸಮಾರಂಭದ ಬಗ್ಗೆ ಚರ್ಚಿಸುವ ಸಲುವಾಗಿ ಏ.26ರಂದು ಸಂಜೆ 4 ಗಂಟೆಗೆ ಸಂಸ್ಥೆಯ ಕೌನ್ಸಿಲ್ ಹಾಲ್‌ನಲ್ಲಿ ಪೂರ್ವಭಾವಿ ಸಭೆಯನ್ನು ಏರ್ಪಡಿಸಲಾಗಿದ್ದು, ಸದರಿ ಸಭೆಗೆ ಕಾಲೇಜಲ್ಲಿ ವ್ಯಾಸಂಗ ಮಾಡಿರುವ ಹಿರಿಯ ವಿದ್ಯಾರ್ಥಿಗಳು ಭಾಗವಹಿಸಿ ತಮ್ಮ ಸಲಹೆ ಮತ್ತು ಸೂಚನೆಗಳನ್ನು ನೀಡುವಂತೆ ಸಂಸ್ಥೆಯ ನಿರ್ದೇಶಕರು ಮತ್ತು ಡೀನ್ ತಿಳಿಸಿದ್ದಾರೆ.



ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಾವಿನಹಳ್ಳಿ ಸಿದ್ದೇಗೌಡ ಮೈಸೂರಿನ ಸುತ್ತೂರು ಮಠದಲ್ಲಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರನ್ನು ಭೇಟಿ ಮಾಡಿ, ಅವರ ಆಶೀರ್ವಾದ ಪಡೆದರು. ಈ ವೇಳೆ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಕೆ.ಮರೀಗೌಡ ಇತರರಿದ್ದಾರೆ.

## ನಾಮಪತ್ರ ಸಲ್ಲಿಸಲು ಮೆರವಣಿಗೆ ಮೂಲಕ ತೆರಳಿದ ಅಬ್ದುಲ್ ಮಜೀದ್
## ಎಸ್‌ಡಿಪಿಐ–ಪೊಲೀಸರ ನಡುವೆ ಮಾತಿನ ಚಕಮಕಿ



ಮೈಸೂರು, ಏ.13(ಆರ್‌ಕೆ)–ನಾಮಪತ್ರ ಸಲ್ಲಿಸಲು ಮೆರವಣಿಗೆ ಮೂಲಕ ತೆರಳುತ್ತಿದ್ದ ಎಸ್‌ಡಿಪಿಐ ಅಭ್ಯರ್ಥಿ ಅಬ್ದುಲ್ ಮಜೀದ್ ಮತ್ತು ಕಾರ್ಯಕರ್ತರು ಪೊಲೀಸರ ವಿರುದ್ಧ ತಿರುಗಿ ಬಿದ್ದ ಕಾರಣ ಉದಯಗಿರಿಯಲ್ಲಿ ಕೆಲಕಾಲ ಉದ್ವಿಗ್ನ ವಾತಾವರಣ ಉಂಟಾಗಿತ್ತು. ನರಸಿಂಹರಾಜ ಕ್ಷೇತ್ರದಿಂದ ಎಸ್‌ಡಿಪಿಐ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಲು ಸುಮಾರು 500 ಮಂದಿಯೊಂದಿಗೆ ಅಬ್ದುಲ್ ಮಜೀದ್ ಉದಯಗಿರಿ ಮುಖ್ಯ ರಸ್ತೆಯಲ್ಲಿ ಮೆರವಣಿಗೆಯಲ್ಲಿ ತೆರಳುತ್ತಿದ್ದ ವೇಳೆ ಅವರನ್ನು ತಡೆದ ಉದಯಗಿರಿ ಠಾಣೆ ಪೊಲೀಸರು, ಅನುಮತಿ ಇಲ್ಲದೆ ಬೈಕ್ ರ್‍ಯಾಲಿ ಅಥವಾ ಮೆರವಣಿಗೆ ನಡೆಸುವುದು ಚುನಾವಣಾ ನೀತಿ ಸಂಹಿತೆ ಉಲ್ಲಂಘನೆಯಾಗುತ್ತದೆ ಎಂದು ತಿಳಿಹೇಳಿದರು.

ಈ ವೇಳೆ ಪಕ್ಷದ ಕಾರ್ಯಕರ್ತರು ಪೊಲೀಸರೊಂದಿಗೆ ಮಾತಿನ ಚಕಮಕಿ ನಡೆಸಿದರಲ್ಲದೇ, ತಡೆಯಲೆತ್ನಿಸಿದ ಪೊಲೀಸರನ್ನು ಲೆಕ್ಕಿಸದೇ ಎಸ್‌ಡಿಪಿಐ ಕಾರ್ಯಕರ್ತರು, ಬೇರೆ ಬೇರೆ ರಸ್ತೆಗಳ ಮೂಲಕ ನುಸುಳಿ ಮುಂದೆ ಸಾಗಿದರು. ಈ ಎಲ್ಲಾ ಘಟನಾವಳಿಗಳನ್ನು ವಿಡಿಯೋ ರೆಕಾರ್ಡ್ ಮಾಡಿಕೊಂಡ ಉದಯಗಿರಿ ಪೊಲೀಸರು, ವಿಡಿಯೋ ಸರ್ವೆಲನ್ಸ್ ತಂಡ ಮೂಲಕವೂ ರೆಕಾರ್ಡ್ ಮಾಡಿಸಿದ್ದು, ಪ್ರಕರಣ ದಾಖಲಿಸಲು ಚುನಾವಣಾಧಿಕಾರಿಗಳ ಅನುಮತಿ ಕೋರಿದ್ದಾರೆ ಎನ್ನಲಾಗಿದೆ.

## ಚುನಾವಣೆ: ಅನುಮತಿಯಿಲ್ಲದೆ ಭಿತ್ತಿಪತ್ರ, ಬ್ಯಾನರ್‌ಗಳ ವಿರುದ್ಧ ಕಠಿಣ ಕ್ರಮ


ಮೈಸೂರು,ಏ.13–ಚುನಾವಣಾ ಆಯೋಗದ ನಿರ್ದೇಶನದಂತೆ ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಚುನಾವಣೆಗೆ ಸಂಬಂಧಿಸಿದ ಅಥವಾ ಇನ್ನಿತರೇ ಯಾವುದೇ ರೀತಿ ಜಾಹೀರಾತು ಫಲಕ, ಹೋರ್ಡಿಂಗ್ಸ್, ಬಂಟಿಂಗ್ಸ್, ಫ್ಲೆಕ್ಸ್, ಭಿತ್ತಿಪತ್ರ, ಕಟೌಟ್, ಬ್ಯಾನರ್, ಗೋಡೆ ಬರಹ ಇವುಗಳನ್ನು ಹಾಕುವುದು ಮತ್ತು ಅಂಟಿಸುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಪಪಂನಿಂದ ಈಗಾಗಲೇ ಅನುಮತಿ ಪಡೆದಿರುವ ಅಧಿಕೃತ ಸ್ಥಳಗಳನ್ನು ಹೊರತುಪಡಿಸಿ, ಉಳಿದ ಯಾವುದೇ ಸ್ಥಳದಲ್ಲಿ ಚುನಾವಣೆಗೆ ಸಂಬಂಧಿಸಿದ ಅಥವಾ ಇನ್ನಿತರೇ ಯಾವುದೇ ರೀತಿ ಜಾಹೀರಾತು ಫಲಕ, ಹೋರ್ಡಿಂಗ್ಸ್, ಬಂಟಿಂಗ್ಸ್, ಫ್ಲೆಕ್ಸ್, ಭಿತ್ತಿ ಪತ್ರ, ಕಟೌಟ್, ಗೋಡೆ ಬರಹ, ಬ್ಯಾನರ್‌ಗಳನ್ನು ಹಾಕುವಂತಿಲ್ಲ. ಒಂದು ವೇಳೆ ಮೇಲ್ಕಂಡ ನಿಯಮಗಳನ್ನು ಉಲ್ಲಂಘಿಸಿ ಪಟ್ಟಣ ಪ್ರದೇಶದ ಯಾವುದೇ ಸ್ಥಳದಲ್ಲಿ ಜಾಹೀರಾತು ಅಳವಡಿಸುವುದು ಕಂಡು ಬಂದರೆ (ಅಧಿಕೃತ ಸ್ಥಳ ಬಿಟ್ಟು) ಅಂತಹವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

## ಇಂದು ಸ್ವಚ್ಛತಾ ಕಾರ್ಯ

**ಮೈಸೂರು:** ಡಾ.ಅಂಬೇಡ್ಕರ್ ಜಯಂತಿ ಅಂಗವಾಗಿ ಪ್ರಗತಿ ಪ್ರತಿಷ್ಠಾನದ ವತಿಯಿಂದ 'ಸ್ವಚ್ಛ ಮೈಸೂರು ಅಭಿಯಾನ'ದಡಿ ಏ.14 ಬೆಳಗ್ಗೆ 7ರಿಂದ 10ರವರೆಗೆ ಲಲಿತಮಹಲ್ ಸುತ್ತಮುತ್ತ ಸ್ವಚ್ಛತಾ ಕಾರ್ಯ ಕೈಗೊಂಡಿದ್ದು, 50–60 ಸ್ವಯಂ ಸೇವಕರು ಹಾಗೂ ಸ್ಕೌಟ್ ಅಂಡ್ ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ.

## ನಿಧನ

### ಶ್ರೀಮತಿ ಬಿ.ಪಿ.ಪದ್ಮಾವತಿ



ಮೈಸೂರು,ಏ.13–ಮೈಸೂರಿನ ಶಾರದಾದೇವಿ ನಗರದಲ್ಲಿರುವ ತಪೋವನ ಸೊಲಾಸ್ ಅಪಾರ್ಟ್‌ಮೆಂಟ್ ನಿವಾಸಿ ಶ್ರೀಮತಿ ಬಿ.ಪಿ.ಪದ್ಮಾವತಿ(83) ಅವರು ಬುಧವಾರ ರಾತ್ರಿ ನಿಧನರಾದರು. ಮೃತರು ಪತಿ ವಿ.ಆರ್.ಪ್ರಸನ್ನ, ಪುತ್ರಿ ಮೀರಾ ಶ್ರೀನಿವಾಸಕುಮಾರ್, ಪುತ್ರ ಬದರೀನಾಥ್ ಹಾಗೂ ಅಪಾರ ಬಂಧು ವರ್ಗ ಅಗಲಿದ್ದು, ಅಂತ್ಯಕ್ರಿಯೆ ಇಂದು ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ಮಹೇಂದ್ರ



**ಮೈಸೂರು:** ಹರಳಹಳ್ಳಿ ಗ್ರಾಮದ ದಿವಂಗತ ಜಯಣ್ಣ ಅವರ ಪುತ್ರ ಮಹೇಂದ್ರ (60) ಬುಧವಾರ ಮೈಸೂರಲ್ಲಿ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ನಾಳೆ (ಏ.14)ರಂದು ಹರಳಹಳ್ಳಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ಮೊದಲ ದಿನ 10 ನಾಮಪತ್ರ ಸಲ್ಲಿಕೆ

ಮಂಡ್ಯ, ಏ.13– ವಿಧಾನಸಭಾ ಚುನಾವಣೆಗೆ ನಾಮಪತ್ರ ಸಲ್ಲಿಸಲು ಮೊದಲ ದಿನವಾದ ಗುರುವಾರ 9 ಅಭ್ಯರ್ಥಿಗಳಿಂದ ಒಟ್ಟು 10 ನಾಮಪತ್ರ ಸಲ್ಲಿಕೆಯಾಗಿದೆ.

ಮದ್ದೂರಿನಿಂದ ಪಕ್ಷೇತರ ಅಭ್ಯರ್ಥಿಯಾಗಿ ಜೆ.ಬಿ.ಮಂಜುನಾಥ್ ಹಾಗೂ ಪ್ರಕಾಶ್.ಸಿ, ಮೇಲುಕೋಟೆ ಕ್ಷೇತ್ರದಿಂದ ಸರ್ವೋದಯ ಕರ್ನಾಟಕ ಪಕ್ಷದ ಅಭ್ಯರ್ಥಿಯಾಗಿ ಪಿ.ವಿ. ಸುಂದರಮ್ಮ, ಕರ್ನಾಟಕ ರಾಷ್ಟ್ರ ಸಮಿತಿ ಅಭ್ಯರ್ಥಿಯಾಗಿ ಕೆ.ಆರ್. ಮಹೇಂದ್ರ ಕುಮಾರ್, ಶ್ರೀರಂಗಪಟ್ಟಣ ಪಕ್ಷೇತರ ಅಭ್ಯರ್ಥಿಯಾಗಿ ಮೋಹನ್ ಕುಮಾರ್ ಉ.ಕಿರಂಗೂರು ಪಾಪು, ಕರ್ನಾಟಕ ರಾಷ್ಟ್ರ ಸಮಿತಿ ಅಭ್ಯರ್ಥಿಯಾಗಿ ಅರುಣ್‌ಕುಮಾರ್, ನಾಗಮಂಗಲದಿಂದ ಪಕ್ಷೇತರ ಅಭ್ಯರ್ಥಿಯಾಗಿ ಯೋಗೇಶ್, ಕರ್ನಾಟಕ ರಾಷ್ಟ್ರ ಸಮಿತಿ ಅಭ್ಯರ್ಥಿಯಾಗಿ ಜೆ.ಎಂ. ರಮೇಶ್, ಕೆ.ಆರ್.ಪೇಟೆಯಿಂದ ಕರ್ನಾಟಕ ರಾಷ್ಟ್ರ ಸಮಿತಿ ಅಭ್ಯರ್ಥಿಯಾಗಿ ಎ.ಸಿ.ಕಿಶೋರ್ ನಾಮಪತ್ರ ಸಲ್ಲಿಸಿದ್ದಾರೆ ಎಂದು ಚುನಾವಣಾಧಿಕಾರಿ ತಿಳಿಸಿದ್ದಾರೆ.

## ಅಶ್ವಥಮ್ಮ ನಿಧನ



ಮದ್ದೂರು, ಏ.13– ಪುರಸಭೆ ಮಾಜಿ ಸದಸ್ಯ ಉಮಾಪ್ರಕಾಶ್ ಅವರ ಅತ್ತೆ ಅಶ್ವಥಮ್ಮ (78) ಗುರುವಾರ ನಿಧನರಾದರು. ಮೃತರು ಪುತ್ರ ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಧ್ಯಾಹ್ನ ಶಿವಪುರದ ರುದ್ರಭೂಮಿಯಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ಮಾದೇಗೌಡ



ಮದ್ದೂರು, ಏ.13– ರಾಜ್ಯ ರೈತ ಸಂಘದ ಮುಖಂಡ ಅಜ್ಜಹಳ್ಳಿ ಗ್ರಾಮದ ಮಾದೇಗೌಡ (70) ಗುರುವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ ಹಾಗೂ ಇಬ್ಬರು ಪುತ್ರರು, ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಧ್ಯಾಹ್ನ ಗ್ರಾಮದ ರುದ್ರಭೂಮಿಯಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಯೋಗ್ಯ ವ್ಯಕ್ತಿಗೆ ಮತದಾನ ಮಾಡಿ

### ಮಂಡ್ಯ ಜಿಲ್ಲೆ ಸ್ವೀಪ್ ಯೂತ್ ಐಕಾನ್, ನಟ ನೀನಾಸಂ ಸತೀಶ್




ಮಂಡ್ಯ, ಏ.13– 2023ರ ವಿಧಾನಸಭಾ ಚುನಾವಣೆ ಘೋಷಣೆಯಾಗಿದ್ದು, ಮೇ 10 ರಂದು ಮತದಾನ ನಡೆಯಲಿದೆ. ಅಂದು ಯುವಕರು ಹಾಗೂ ಪ್ರಜ್ಞಾವಂತ ನಾಗರಿಕರು ಪ್ರಜ್ಞೆಯಿಂದ ಮತದಾನ ಮಾಡಿ ಈ ರಾಜ್ಯದ ಭವಿಷ್ಯ ಬರೆಯಬೇಕು. ಬದಲಾವಣೆ ಮಾಡುವ ಶಕ್ತಿ ನಿಮ್ಮ ಕೈಯಲ್ಲಿದೆ. ಜವಾಬ್ದಾರಿ ಅರಿತು ಕಡ್ಡಾಯವಾಗಿ ಯೋಗ್ಯ ವ್ಯಕ್ತಿಗೆ ಮತದಾನ ಮಾಡುವ ಮೂಲಕ ಇತರರಿಗೆ ಪ್ರೇರಣೆಯಾಗಬೇಕು ಎಂದು ಮಂಡ್ಯ ಜಿಲ್ಲೆ ಸ್ವೀಪ್ ಯೂತ್ ಐಕಾನ್ ನಟ ನೀನಾಸಂ ಸತೀಶ್ ಸಲಹೆ ನೀಡಿದರು.

ಜಿಲ್ಲಾಡಳಿತ, ಜಿಪಂ ಹಾಗೂ ಸ್ವೀಪ್ ಸಮಿತಿ ನಗರದ ಮಂಡ್ಯ ವಿಶ್ವವಿದ್ಯಾಲಯ ಆವರಣದಲ್ಲಿರುವ ಶಾರದಾ ಮಂದಿರದಲ್ಲಿ ಆಯೋಜಿಸಿದ್ದ ಮತದಾರರಿಗೆ ವ್ಯವಸ್ಥಿತ ಶಿಕ್ಷಣ ಮತ್ತು ಮತದಾರರ ಪಾಲ್ಗೊಳ್ಳುವಿಕೆ (ಸ್ವೀಪ್) ಕುರಿತು ಆಯೋಜಿಸಿದ್ದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಉತ್ತಮ ಸಮಾಜ ಹಾಗೂ ರಾಷ್ಟ್ರ ನಿರ್ಮಾಣಕ್ಕಾಗಿ ಪ್ರತಿಯೊಬ್ಬರೂ ಮತದಾನದಲ್ಲಿ ಕಡ್ಡಾಯವಾಗಿ ಭಾಗವಹಿಸಿ ಯೋಗ್ಯ ವ್ಯಕ್ತಿ ಆಯ್ಕೆ ಮಾಡಬೇಕಾದ ಜವಾಬ್ದಾರಿ ನಮ್ಮ ಮೇಲಿದೆ. ಮತದಾನ ಮಾಡುವುದು ಹಕ್ಕು ಹಾಗೂ ಕರ್ತವ್ಯ. ಮತದಾನದ ಮಹತ್ವದ ಬಗ್ಗೆ ಜ್ಞಾನ ಹೆಚ್ಚಿಸಿಕೊಂಡು, ಸಮಾಜಕ್ಕೆ ಏನಾದರೂ ಒಳ್ಳೆಯದು ಮಾಡುವ ನಿಟ್ಟಿನಲ್ಲಿ ಆಲೋಚನೆ ಮಾಡಬೇಕಿದೆ ಎಂದರು.

ಯುವಕರು ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಸಮಾನವಾದ ಹಕ್ಕಿದೆ. ನಮ್ಮ ಸುತ್ತಮುತ್ತಲೂ ಇರುವ ಸಮಸ್ಯೆಗಳ ಬಗ್ಗೆ ಪರಿಹಾರ ನೀಡುವ ನಿಟ್ಟಿನಲ್ಲಿ ಚಿಂತಿಸಬೇಕಿದೆ. ಜೀವನದಲ್ಲಿ ಗುರಿ ಇಟ್ಟುಕೊಳ್ಳಿ, ಉತ್ತಮ ವ್ಯಾಸಂಗ ಮಾಡುವ ಮೂಲಕ ಆ ಗುರಿ ಸಾಧಿಸಿ, ಸಮಾಜಕ್ಕೆ ನಮ್ಮಿಂದ ಏನಾದರೂ ಸಹಾಯ ಆಗಬೇಕು. ಆಗ ಮಾತ್ರ ನಮ್ಮ ಜೀವನ ಸಾರ್ಥಕವಾಗುತ್ತದೆ ಎಂದು ತಿಳಿಸಿದರು.

ಇದೇ ವೇಳೆ ನೀನಾಸಂ ಸತೀಶ್ ಚಲನಚಿತ್ರ ಗೀತೆಗಳು ಹಾಗೂ ಸಿನಿಮಾ ಡೈಲಾಗ್‌ಗಳನ್ನು ಹೇಳಿ ವಿದ್ಯಾರ್ಥಿಗಳನ್ನು ರಂಜಿಸಿದರು. ಬಳಿಕ ಮತದಾನ ಜಾಗೃತಿ ಸಹಿ ಅಭಿಯಾನದಲ್ಲಿ ಪಾಲ್ಗೊಂಡರು. ನಂತರ ಮತದಾನದ ಸೆಲ್ಫಿ ಕ್ಲಿಕ್ಕಿಸಿಕೊಂಡು ಸಂಭ್ರಮಿಸಿದರು.

ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಡಾ. ಎಚ್.ಎನ್. ಗೋಪಾಲಕೃಷ್ಣ ಮಾತನಾಡಿ, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಶೇಕಡವಾರು ಮತದಾನದಲ್ಲಿ ಮಂಡ್ಯ ಜಿಲ್ಲೆ 2ನೇ ಸ್ಥಾನದಲ್ಲಿತ್ತು. ಈ ಬಾರಿ ಜಿಲ್ಲೆ ಪ್ರಥಮ ಸ್ಥಾನ ಪಡೆಯಬೇಕು. ಇದಕ್ಕೆ ಎಲ್ಲರ ಸಹಕಾರ ಅಗತ್ಯ. ಈಗಾಗಲೇ ಮತದಾರರಲ್ಲಿ ಹಲವಾರು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ರಾಯಭಾರಿಗಳಾಗಿ ಚಲನಚಿತ್ರ ನಟ ನೀನಾಸಂ ಸತೀಶ್ ಹಾಗೂ ವಿಕಲಚೇತನ ರಾಯಭಾರಿಯಾಗಿ ಡಾ.ಚಲುವರಾಜ್ ಅವರನ್ನು ಆಯ್ಕೆ ಮಾಡಿಕೊಂಡು ಮತದಾರರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ ಎಂದರು.

ಸುಶಿಕ್ಷಿತ ಹಾಗೂ ವಿದ್ಯಾವಂತರು ಹೆಚ್ಚಿನ ಸಂಖ್ಯೆಯಲ್ಲಿರುವ ನಗರ ಪ್ರದೇಶಗಳಲ್ಲಿ ಶೇ.70 ರಷ್ಟು ಮತದಾನ ವಾಗುತ್ತಿದೆ. ಇಂತಹ ಕಡೆ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜಾಗೃತಿ ಮೂಡಿಸಲಾಗುತ್ತಿದೆ. ಈಗಾಗಲೇ ಚುನಾವಣೆ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಪ್ರಾರಂಭವಾಗಿದ್ದು, ಜಿಲ್ಲಾಡಳಿತ ಸೂಕ್ತ ವ್ಯವಸ್ಥೆ ಕಲ್ಪಿಸಿದೆ. ಪ್ರಜ್ಞಾವಂತ ನಾಗರಿಕರು ಕಡ್ಡಾಯವಾಗಿ ಮತ ಹಾಕುವ ಮೂಲಕ ಸೂಕ್ತ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕಿದೆ. ಮತಗಟ್ಟೆಗಳಲ್ಲಿ ಮೂಲ ಸೌಲಭ್ಯ ಕಲ್ಪಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಪಂ ಸಿಇಓ ಶೇಖ್ ತನ್ವೀರ್ ಆಸಿಫ್, ಮಂಡ್ಯ ವಿವಿ ಕುಲಪತಿ ಡಾ.ಪುಟ್ಟರಾಜು, ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು, ಜಿಲ್ಲಾ ವಿಶೇಷಚೇತನ ರಾಯಭಾರಿ ಡಾ.ಎಂ.ಎಸ್. ಚಲುವರಾಜು, ಮಂಡ್ಯ ವಿವಿ ಕುಲಸಚಿವ ಡಾ.ರಂಗರಾಜು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಧನಂಜಯ್, ಸಾರ್ವಜನಿಕ ಶಿಕ್ಷಣ ಇಲಾಖೆ ಸಹಾಯಕ ನಿರ್ದೇಶಕ ಎಸ್.ಟಿ. ಜವರೇಗೌಡ ಹಾಗೂ ವಾರ್ತಾ ಇಲಾಖೆ ಸಹಾಯಕ ನಿರ್ದೇಶಕಿ ನಿರ್ಮಲಾ ಹಾಜರಿದ್ದರು.

## ಗ್ರಾಮೀಣಾಭಿವೃದ್ಧಿಗೆ ಒತ್ತು ನೀಡಿದ್ದೇನೆ



ನಾಗಮಂಗಲ, ಏ.13– ಕ್ಷೇತ್ರದ ಹಳ್ಳಿಗಳು ರಸ್ತೆ, ಮೂಲ ಸೌಕರ್ಯಗಳನ್ನೇ ಕಂಡಿರಲಿಲ್ಲ. ಆದರೆ 2008ರಲ್ಲಿ ಮೊದಲ ಬಾರಿಗೆ ಶಾಸಕನಾದಾಗ ಹಾಗೂ 2018ರಲ್ಲಿ ನಾನು ಮತ್ತೆ ಶಾಸಕನಾದ ಸಂದರ್ಭ ಗ್ರಾಮಾಂತರ ಪ್ರದೇಶದಲ್ಲಿ ರಸ್ತೆ, ಕುಡಿಯುವ ನೀರು ಸೇರಿದಂತೆ ಮೂಲಸೌಕರ್ಯ ಒದಗಿಸಿದ್ದು, ಈ ನಿಟ್ಟಿನಲ್ಲಿ ತಾಲೂಕಿನ ಗ್ರಾಮಾಂತರ ಮತದಾರರು ನನ್ನ ಕೈ ಹಿಡಿಯಬೇಕೆಂದು ಶಾಸಕ ಹಾಗೂ ಜೆಡಿಎಸ್ ಅಭ್ಯರ್ಥಿ ಕೆ.ಸುರೇಶ್‌ಗೌಡ ಮನವಿ ಮಾಡಿದರು.

ತಾಲೂಕಿನ ನೆಲ್ಲಿಗೆರೆ ಪಂಚಾಯಿತಿ ವ್ಯಾಪ್ತಿಯ ವಡೇರಪುರ, ವಳಗೆರೆಹಳ್ಳಿ ಸೇರಿದಂತೆ ಹತ್ತಕ್ಕೂ ಹೆಚ್ಚು ಗ್ರಾಮಗಳಲ್ಲಿ ಬಿರುಸಿನ ಪ್ರಚಾರ ನಡೆಸಿದ ಅವರು, ಕೃಷಿಗೆ ಯೋಗ್ಯ ನೀರಿನ ಸೌಲಭ್ಯವಿಲ್ಲದೇ ಕುಡಿಯಲು ಸಹ ನೀರು ಸಿಗದೇ ಕಂಗಾಲಾಗಿದ್ದ ಈ ಭಾಗದ ಜನತೆಗೆ ಸಮರ್ಪಕ ನೀರು ಒದಗಿಸಿಕೊಟ್ಟಿದ್ದು, ಇಲ್ಲಿನ ಜನ ನನ್ನ ಪರ ನಿಂತಿದ್ದಾರೆ. ಈ ಬಾರಿಯ ಚುನಾವಣೆಯಲ್ಲೂ ಜನ ನನ್ನ ಕೈ ಹಿಡಿಯಬೇಕೆಂದು ಒತ್ತಾಯಿಸಿದರು.

ಕುಮಾರಸ್ವಾಮಿ ಅವರನ್ನು ಮತ್ತೆ ಸಿಎಂ ಮಾಡಲು ಜನ ತೀರ್ಮಾನಿಸಿದ್ದಾರೆ. ರೈತರು, ಯುವಕರು, ಸಾಲ ಮಾಡಿಕೊಳ್ಳಬಾರದೆಂಬ ನಿಟ್ಟಿನಲ್ಲಿ ಕುಮಾರಸ್ವಾಮಿ ಪಂಚರತ್ನ ಯೋಜನೆ ತಂದಿದ್ದಾರೆ. ಬೆಳೆಗೆ ಬೆಂಬಲ ಬೆಲೆ ಸಿಗಲಿದೆ. ಯುವಕರಿಗೆ ಉದ್ಯೋಗ ಕೊಡುವ ಭರವಸೆ. ಹೀಗೆ ಎಲ್ಲಾ ಉತ್ಪನ್ನಗಳಿಗೆ ಬೆಂಬಲ ಬೆಲೆ ಸಿಗಲಿದ್ದು, ಸ್ತ್ರೀ ಶಕ್ತಿ ಸಂಘಗಳಿಗೆ ಬಡ್ಡಿರಹಿತ ಸಾಲ, ಮಹಿಳೆಯರಿಗೆ, ಅಂಗವಿಕಲರಿಗೆ 2 ಸಾವಿರ ಮಾಸಿಕ ವೇತನ ಸಿಗಲಿದೆ. ಈ ಎಲ್ಲಾ ಸೌಲಭ್ಯಗಳು ಸಿಗಬೇಕೆಂದರೆ ನಾನು ಮತ್ತೆ ಶಾಸಕನಾಗಬೇಕು. ಕುಮಾರಸ್ವಾಮಿ ಮತ್ತೆ ಸಿಎಂ ಆಗಬೇಕೆಂದು ಹೇಳಿದರು.

ಜನರಿಗಾಗಿ ಜನಪರ ಯೋಜನೆಗಳನ್ನು ಜಾರಿಗೆ ತರಲು ಕುಮಾರಸ್ವಾಮಿ ಹೊರಟಿದ್ದು, ಗ್ರಾಮಗಳ ಅಭಿವೃದ್ಧಿಗೆ ರಸ್ತೆ, ಕುಡಿಯುವ ನೀರು, ಮೂಲ ಸೌಕರ್ಯ ಒದಗಿಸಿದ ನನ್ನ ಬೆಂಬಲಿಸಿ. ಇದೇ ಏ.17ರಂದು ನಾಮಪತ್ರ ಸಲ್ಲಿಕೆ ಮಾಡಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಬೆಂಬಲಿಗರು ಆಗಮಿಸಿ ಆಶೀರ್ವಾದ ಮಾಡಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮನ್‌ಮುಲ್ ನಿರ್ದೇಶಕ ನೆಲ್ಲಿಗೆರೆ ಬಾಲು, ಜೆಡಿಎಸ್ ಮುಖಂಡ ಗೌರೀಶ್ ಉಪಸ್ಥಿತರಿದ್ದರು.

### ಶ್ಯಾದನಹಳ್ಳಿ ಏತ ನೀರಾವರಿ ಮೂಲಕ ಕೆ.ಬೆಟ್ಟಹಳ್ಳಿ ಗ್ರಾಪಂ ವ್ಯಾಪ್ತಿಯ

# 3 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ

### ಅಭಿನಂದನಾ ಸಮಾರಂಭದಲ್ಲಿ ಶಾಸಕ ಸಿ.ಎಸ್.ಪುಟ್ಟರಾಜು



ಪಾಂಡವಪುರ, ಏ.13– ಶ್ಯಾದನಹಳ್ಳಿ ಏತ ನೀರಾವರಿ ಯೋಜನೆ ಮೂಲಕ ಕೆ.ಬೆಟ್ಟಹಳ್ಳಿ ಗ್ರಾಪಂ ವ್ಯಾಪ್ತಿಯ 3 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಿದ್ದೇನೆ ಎಂದು ಶಾಸಕ ಸಿ.ಎಸ್.ಪುಟ್ಟರಾಜು ತಿಳಿಸಿದರು.

ತಾಲೂಕಿನ ಕೆ.ಬೆಟ್ಟಹಳ್ಳಿ ಗ್ರಾಮದಲ್ಲಿ ಗ್ರಾಪಂ ವ್ಯಾಪ್ತಿಯ ಗ್ರಾಮಸ್ಥರಿಂದ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಕೆ.ಬೆಟ್ಟಹಳ್ಳಿ ಗ್ರಾಪಂ ನೀರಾವರಿ ವಂಚಿತವಾಗಿದ್ದನ್ನು ಮನಗಂಡು ಸಚಿವನಾಗಿದ್ದಾಗ 90 ಕೋಟಿ ರೂ. ಅನುದಾನದಲ್ಲಿ ಶ್ಯಾದನಹಳ್ಳಿ ಏತ ನೀರಾವರಿ ನಿರ್ಮಾಣ ಮಾಡಿ ಚಾಲನೆ ನೀಡಲಾಗಿದೆ. ಕಣಿವೆಕಟ್ಟೆ ಬಳಿ ನಿರ್ಮಾಣವಾಗಿರುವ ಚೆಕ್‌ಡ್ಯಾಂ ಮುಂದಿನ ದಿನಗಳಲ್ಲಿ ಮಿನಿ ಕೆಆರ್‌ಎಸ್ ಮಾದರಿ ರೂಪುಗೊಳ್ಳಲಿದೆ ಎಂದರು.

ರಾಸುಗಳ ಚರ್ಮಗಂಟು ರೋಗ ಹಿನ್ನೆಲೆಯಲ್ಲಿ ಬೇಬಿಬೆಟ್ಟದ ದನಗಳ ಜಾತ್ರೆಗೆ ಅನುಮತಿ ನೀಡಿರಲಿಲ್ಲ. ಪಾರಂಪರಿಕವಾಗಿ ನಡೆದು ಬಂದ ಜಾತ್ರೆ ನಿಲ್ಲಿಸಬೇಕಲ್ಲ ಎಂದು ಸರ್ಕಾರದೊಂದಿಗೆ ಚರ್ಚಿಸಿ ಅನುಮತಿ ಪಡೆದು ಕೇವಲ 2 ದಿನಗಳಲ್ಲಿ ಸಿದ್ಧತೆ ಕೈಗೊಂಡು ಜಾತ್ರೆಯನ್ನು ಅದ್ದೂರಿಯಾಗಿ ನಡೆಸಲಾಯಿತು. ಅಲ್ಲದೇ ಉತ್ತಮ ರಾಸುಗಳಿಗೆ ಚಿನ್ನದ ಪದಕವನ್ನು ಬಹುಮಾನ ನೀಡಲಾಯಿತು. 19 ಜೋಡಿಗಳ ಸರಳ ವಿವಾಹ ನಡೆಸಲಾಯಿತು. ಅಲ್ಲದೇ ಅಭಿಮಾನಿಗಳ ಆರಾಧ್ಯ ದೈವ ಪುನೀತ್ ರಾಜ್‌ಕುಮಾರ್ ಅವರ ನೆನಪಿನಾರ್ಥ ಪಟ್ಟಣದಲ್ಲಿ 3 ದಿನಗಳ ಕಾಲ ಪುನೀತೋತ್ಸವ ಆಚರಣೆ ಮಾಡಿದೆವು. ಕಾವೇರಿ ನದಿಯಿದ ಇಡೀ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಿದ್ದೇನೆ. ಅಲ್ಲದೇ ಕ್ಷೇತ್ರದಲ್ಲಿ ಒಂದು ಹನಿ ನೀರು ವ್ಯರ್ಥವಾಗದ ರೀತಿ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದೇನೆ. ನನ್ನ ಅಧಿಕಾರ ವಧಿಯಲ್ಲಿ ಪಾಂಡವಪುರ ಸೇರಿದಂತೆ ಇಡೀ ತಾಲೂಕನ್ನು ಮಾದರಿಯಾಗಿ ಅಭಿವೃದ್ಧಿಪಡಿಸಿದ್ದೇನೆ. ಜನರಿಗೆ ಬೇಕಾದ ಅಗತ್ಯ ಸೌಲಭ್ಯ ಕಲ್ಪಿಸಿದ್ದೇನೆ ಎಂದರು.

**ಅದ್ಧೂರಿ ಮೆರವಣಿಗೆ:** ಗ್ರಾಮಕ್ಕೆ ಆಗಮಿಸಿದ ಶಾಸಕರಿಗೆ ಸೇಬು, ಹೂ ಹಾಗೂ ವಿಶೇಷವಾಗಿ ಬಾದುಷದಿಂದ ಮಾಡಿದ ಬೃಹತ್ ಹಾರ ಹಾಕುವ ಮೂಲಕ ಅದ್ಧೂರಿಯಾಗಿ ಸ್ವಾಗತಿಸಲಾಯಿತು. ಇದೇ ವೇಳೆ ವಡ್ಡರಹಳ್ಳಿ ಗ್ರಾಮಸ್ಥರು ಚುನಾವಣಾ ಖರ್ಚಿಗಾಗಿ 50 ಸಾವಿರ ಹಾಗೂ ಸಾನಿಧ್ಯ ಎಂಬ ಪುಟ್ಟಬಾಲಕಿ ಸಿ.ಎಸ್.ಪುಟ್ಟರಾಜು ಅವರಿಗೆ 1001 ರೂ. ದೇಣಿಗೆ ನೀಡಿದಳು. ಈ ವೇಳೆ ಹುಲ್ಕೆರೆಕೊಪ್ಪಲು ಗ್ರಾಮದ ಸುರೇಶ್, ಕೆ.ಬೆಟ್ಟಹಳ್ಳಿ ಗ್ರಾಮದ ಅಶೋಕ್, ಪುಟ್ಟರಾಜು, ಮಹೇಶ್, ರೇವಣ್ಣ, ಆಟೋಕುಮಾರ್ ಸೇರಿದಂತೆ ಹಲವರು ರೈತಸಂಘ ತೊರೆದು ಜೆಡಿಎಸ್ ಸೇರ್ಪಡೆಗೊಂಡರು.

ಈ ವೇಳೆ ಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಗುರುಸ್ವಾಮಿ, ಚಲುವರಾಜು, ಟಿಎಪಿಸಿಎಂಎಸ್ ನಿರ್ದೇಶಕ ರಾಮಕೃಷ್ಣೇಗೌಡ, ತಾಪಂ ಮಾಜಿ ಸದಸ್ಯ ವಿ.ಎಸ್. ನಿಂಗೇಗೌಡ, ವೈರಮುಡಿಗೌಡ, ಚಂದ್ರಶೇಖರಯ್ಯ, ಯುವ ಮುಖಂಡ ಮಧುಸೂದನ್, ಕೆ.ಮನೋಹರ್(ಮನು), ದೀಪಕ್, ಪುಟ್ಟಸಿದ್ದೇಗೌಡ, ರವಿಕುಮಾರ್, ತಿಮ್ಮೇಗೌಡ, ಸ್ವಾಮಿ ಸೇರಿದಂತೆ ಹಲವರಿದ್ದರು.

## ಇಂದು ಡಾ.ಬಿ.ಆರ್ ಅಂಬೇಡ್ಕರ್ ಜಯಂತಿ

ಮಂಡ್ಯ, ಏ.13– ಜಿಲ್ಲಾಡಳಿತ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಹಯೋಗದೊಂದಿಗೆ ಏ.14 ರಂದು ಬೆಳಗ್ಗೆ 10 ಗಂಟೆಗೆ ಜಿಲ್ಲಾಧಿಕಾರಿ ಕಚೇರಿ ಮುಂಭಾಗದ ಉದ್ಯಾನವನದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಹಮ್ಮಿಕೊಳ್ಳಲಾಗಿದೆ. ಜಿಲ್ಲಾಧಿಕಾರಿ ಡಾ.ಹೆಚ್.ಎನ್.ಗೋಪಾಲಕೃಷ್ಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಅಪರ ಜಿಲ್ಲಾಧಿಕಾರಿ ಡಾ.ಹೆಚ್ ಎಲ್. ನಾಗರಾಜು ಅವರು ಡಾ.ಬಿ.ಆರ್. ಅಂಬೇಡ್ಕರ್ ಕುರಿತು ಉಪನ್ಯಾಸ ನೀಡಲಿದ್ದಾರೆ. ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್. ಯತೀಶ್ ಸೇರಿದಂತೆ ಎಲ್ಲಾ ಸರ್ಕಾರಿ ಅಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಮೂರನೇ ಪುಟದಿಂದ

# ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಶತಸಿದ್ಧ

ಸಿದ್ದೇಗೌಡರನ್ನು ಗೆಲ್ಲಿಸಿದರೆ, ನನ್ನನ್ನು ಗೆಲ್ಲಿಸಿದಂತೆ. ಕ್ಷೇತ್ರದ ಜನರ ಹಿತ ಕಾಯಲು ಸದಾ ನಾನು ಬದ್ಧನಾಗಿದ್ದೇನೆ ಎಂದು ಭರವಸೆ ನೀಡಿದರು.

**ಭಿನ್ನಾಭಿಪ್ರಾಯ ಬೇಡ:** ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರಲ್ಲಿ ಯಾವುದಾದರೂ ಭಿನ್ನಾಭಿ ಪ್ರಾಯವಿದ್ದರೆ ಅದನ್ನು ದೂರ ಮಾಡಬೇಕು. ಎಲ್ಲರೂ ಒಂದಾಗಿ ಕೆಲಸ ಮಾಡಬೇಕು. ಇಲ್ಲಿ ಮೂಲ, ವಲಸಿಗ ಎನ್ನುವ ಮನೋಭಾವ ದೂರ ಸರಿಸಬೇಕು. ನಿಮ್ಮೆಲ್ಲರ ಸಹೋದರ ಎಂದು ಭಾವಿಸಿ ಎಲ್ಲರೂ ಒಗ್ಗಟ್ಟು ಪ್ರದರ್ಶಿಸಬೇಕು. ಈ ಚುನಾವಣೆ ರಾಜ್ಯದ ಹಿತದೃಷ್ಟಿಯಿಂದ ಬಹಳ ಮುಖ್ಯ ಪಾತ್ರ ವಹಿಸಿದೆ. ಈ ಚುನಾವಣೆಯನ್ನು ಲಘುವಾಗಿ ಪರಿಗಣಿಸಬಾರದು. ಸಿದ್ದೇಗೌಡ ನಮ್ಮ ಅಭ್ಯರ್ಥಿ ಮಾತ್ರ, ಆದರೆ ಇಲ್ಲಿ ನಾನೇ ಸ್ಪರ್ಧೆ ಮಾಡಿದ್ದೇನೆ ಎಂದು ನೀವೆಲ್ಲ ಭಾವಿಸಬೇಕು. ಕಳೆದ ಚುನಾವಣೆಯಲ್ಲಿ ಬೇರೆ ಬೇರೆ ರಾಜಕೀಯ ಬೆಳವಣಿಗೆಗಳಿಂದಾಗಿ ಜಿ.ಟಿ.ದೇವೇಗೌಡ ಅವರು ನನ್ನನ್ನು ಸೋಲಿಸಿದರು. ಈ ಬಾರಿ ಅಂತಹ ಯಾವುದೇ ರಾಜಕೀಯ ಬೆಳವಣಿಗೆಗಳು ಆಗಿಲ್ಲ. ನಾನು 5 ವರ್ಷ ಮುಖ್ಯಮಂತ್ರಿಯಾಗಿ ಸಾಕಷ್ಟು ಒಳ್ಳೆ ಕೆಲಸಗಳನ್ನು ಮಾಡಿದ್ದರೂ ಚಾಮುಂಡೇಶ್ವರಿಯ ಜನ ನನ್ನನ್ನು ಸೋಲಿಸಿದರು ಎಂದು ಬೇಸರಿಸಿದರು.

**ಜಿಟಿಡಿ ಬಂದು ಹೋದರು:** ಕಳೆದ ಬಾರಿ ನಾವು 80 ಸ್ಥಾನಗಳನ್ನು ಗೆದ್ದಿದ್ದೆವು. ಬಿಜೆಪಿ 104, ಜೆಡಿಎಸ್ 37 ಸ್ಥಾನ ಗೆದ್ದಿತ್ತು. ನಾಡಿನ ಸಾಮರಸ್ಯ ಹಾಳು ಮಾಡುವ, ಧರ್ಮ – ಧರ್ಮಗಳನ್ನು ಎತ್ತಿಕಟ್ಟಿ ಸಮಾಜ ಒಡೆಯುವ, ಅಶಾಂತಿ ಸೃಷ್ಟಿಸುವ ಕೋಮುವಾದಿ ಪಕ್ಷ ಬಿಜೆಪಿ ಅಧಿಕಾರಕ್ಕೆ ಬರಬಾರದು ಎಂಬ ಕಾರಣಕ್ಕೆ ಜೆಡಿಎಸ್‌ಗೆ ಬೆಂಬಲ ನೀಡಿ ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡಿದ್ದೆವು. ಜಿ.ಟಿ.ದೇವೇಗೌಡರು ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಉನ್ನತ ಶಿಕ್ಷಣ ಸಚಿವರಾಗಿದ್ದರು. ಆ ನಂತರ ನನ್ನ ಬಳಿ ಬಂದು 'ನಾನು ಕಾಂಗ್ರೆಸ್ ಸೇರಿಕೊಳ್ಳಬೇಕು ಎಂದುಕೊಂಡಿದ್ದೇನೆ, ನೀವು ಟಿಕೆಟ್ ಕೊಡಿಸಬೇಕು' ಎಂದಿದ್ದರು. ಕೆಲ ಸಮಯ ನನ್ನ ಜೊತೆಯಲ್ಲೇ ಇದ್ದರು. ಕೊನೆಗೆ ಮತ್ತೆ ಜೆಡಿಎಸ್‌ಗೆ ವಾಪಸು ಹೋದರು. ಅವರೇ ಬಂದು ಅವರೇ ವಾಪಸು ಹೋಗಿದ್ದಾರೆ. ನಾನು ಅವರನ್ನು ಕರೆದಿರಲಿಲ್ಲ ಎಂದರು.

**ಜೆಡಿಎಸ್ ಅಧಿಕಾರಕ್ಕೆ ಬರಲ್ಲ:** ಹೆಚ್.ಡಿ. ಕುಮಾರಸ್ವಾಮಿ ಎಷ್ಟೇ ಪಂಚರತ್ನ ಯಾತ್ರೆ ಮಾಡಿದರೂ ಜೆಡಿಎಸ್ ಸ್ವಂತ ಬಲದ ಮೇಲೆ ಅಧಿಕಾರಕ್ಕೆ ಬರಲು ಸಾಧ್ಯವೇ ಇಲ್ಲ. ಇನ್ನೊಬ್ಬರ ಹೆಗಲ ಮೇಲೆ ಕೂತುಕೊಂಡು ಅಧಿಕಾರ ಮಾಡಬೇಕು ಎಂದು ಬಯಸುತ್ತಾರೆ. ನಾನು ಜೆಡಿಎಸ್‌ನಲ್ಲಿದ್ದಾಗ 2004ರಲ್ಲಿ 59 ಜನ ಜೆಡಿಎಸ್‌ನಿಂದ ಗೆದ್ದಿದ್ದೆವು. 2005ರಲ್ಲಿ ನನ್ನನ್ನು ಪಕ್ಷದಿಂದ ಉಚ್ಚಾಟನೆ ಮಾಡಿದಾಗ ಜಿಟಿಡಿ ನನ್ನ ಜೊತೆ ಬರಲಿಲ್ಲ. ಮಂತ್ರಿ ಮಾಡುತ್ತೇವೆ ಎಂದು ಹೇಳಿದ್ದಕ್ಕೆ ಅಲ್ಲೇ ಉಳಿದುಕೊಂಡರು. ದೇವೇಗೌಡರು ಇವರನ್ನು ಮಂತ್ರಿ ಮಾಡಿದರು. ಇವರೆಲ್ಲಾ ಅವಕಾಶ ವಾದಿಗಳು. ಈ ಬಾರಿ ಚಾಮುಂಡೇಶ್ವರಿ ಕ್ಷೇತ್ರದ ಜನತೆ ಕಾಂಗ್ರೆಸ್ ಅಭ್ಯರ್ಥಿ ಸಿದ್ದೇಗೌಡರಿಗೆ ಆಶೀರ್ವಾದ ಮಾಡಬೇಕು. ಅವಕಾಶವಾದಿಗಳನ್ನು ದೂರವಿಡಬೇಕು ಎಂದು ಮನವಿ ಮಾಡಿದರು.

**ಬಿಜೆಪಿಯಿಂದ ಕೋಮು ದಳ್ಳುರಿ:** ರಾಜ್ಯದಲ್ಲಿ ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಬಿಜೆಪಿ ಸರ್ಕಾರ ಆಡಳಿತ ನಡೆಸಿದೆ. ಆದರೆ, ರಾಜ್ಯದ ಅಭಿವೃದ್ಧಿಗೆ ಬಿಜೆಪಿ ನೀಡಿದ ಕೊಡುಗೆ ಶೂನ್ಯ. ಎರಡು ವರ್ಷ ಸಚಿವ ಸಂಪುಟ ವಿಸ್ತರಣೆ ಮಾಡಲೇ ಇಲ್ಲ. ಕೇವಲ ಕೋಮು ಭಾವನೆ ಕೆರಳಿಸುವ ಮೂಲಕ ಶಾಂತಿ ಕದಡುವ ಪ್ರಯತ್ನ ನಿರಂತರವಾಗಿ ನಡೆಸುತ್ತಾ ಬಂದಿದೆ. ಕೋಮು ಸೌಹಾರ್ದತೆ ಕದಡಿ ರಾಜಕೀಯ ಲಾಭ ಮಾಡಿಕೊಳ್ಳುವ ಸಂಚು ಬಿಜೆಪಿಯದ್ದಾಗಿದೆ. ಬಿಜೆಪಿ ಉದ್ದೇಶವೇ ಜಾತಿ, ಧರ್ಮದ ನಡುವೆ ಕಂದಕ ಉಂಟು ಮಾಡಿ ಲಾಭ ಮಾಡಿ ಕೊಳ್ಳುವುದೇ ಆಗಿದೆ. ಈ ಹಿನ್ನೆಲೆಯಲ್ಲಿ ಈ ಬಾರಿ ಬಿಜೆಪಿ ಸೋಲು ಖಚಿತ ಎಂದರು.

**ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಶತಸಿದ್ಧ:** ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಪೂರಕವಾದ ವಾತಾವರಣವಿದೆ. ನಮ್ಮ ಪಕ್ಷ ಅಧಿಕಾರಕ್ಕೆ ಬರುವುದು ಶೇ.200ರಷ್ಟು ಖಚಿತ. ಬಿಜೆಪಿ ರಾಜ್ಯವನ್ನು ಹಾಳು ಮಾಡಿದೆ. ಸ್ವಾತಂತ್ರ್ಯ ನಂತರದಿಂದ 2018ರ ಮಾರ್ಚ್‌ವರೆಗೆ ಕರ್ನಾಟಕದ ಮೇಲೆ 2ಲಕ್ಷದ 42 ಸಾವಿರ ಕೋಟಿ ರೂ. ಸಾಲವಿತ್ತು. ಕಳೆದ ಐದೇ ವರ್ಷದಲ್ಲಿ ರಾಜ್ಯದ ಸಾಲ 3 ಲಕ್ಷದ 22 ಸಾವಿರ ಕೋಟಿ ಸಾಲ ಮಾಡಿದ್ದಾರೆ. ಇಲ್ಲಿ ಜಿಟಿಡಿಯೋ, ಬಿಜೆಪಿಯ ಇನ್ಯಾರೋ ಮುಖ್ಯ ವಲ್ಲ. ರಾಜ್ಯವನ್ನು ಉಳಿಸುವುದು ಮುಖ್ಯ. ಈ ಬಿಜೆಪಿಯವರ ದುರಾಡಳಿತದಿಂದಾಗಿ ಪ್ರತೀ ವರ್ಷ 56,000 ಕೋಟಿ ಹಣವನ್ನು ಸಾಲ ಮರುಪಾವತಿ ಮಾಡಬೇಕಾದ ದುಸ್ಥಿತಿ ನಿರ್ಮಾಣವಾಗಿದೆ. ಸಾಲ ಹೀಗೆ ಮುಂದು ವರೆದರೆ ಕುಡಿಯಲು ನೀರು, ಅಕ್ಕಿ, ಸೇತುವೆ, ರಸ್ತೆ, ಮನೆ ನೀಡಲು ಸಾಧ್ಯವಾಗುವುದಿಲ್ಲ. ಬಿಜೆಪಿ ಮತ್ತು ಜೆಡಿಎಸ್ ಮತ್ತೆ ಅಧಿಕಾರಕ್ಕೆ ಬರಬೇಕಾ? ಇದನ್ನು ನಿಮ್ಮ ಆತ್ಮಸಾಕ್ಷಿಗೆ ಕೇಳಿನೋಡಿ. ರಾಜ್ಯ ಉಳಿದರೆ ನಾವು, ನೀವು ಉಳಿಯುತ್ತೇವೆ. ಬಿಜೆಪಿ ಸರ್ಕಾರ ಬಂದ ಮೇಲೆ ಪ್ರತೀ ವರ್ಷ 78,000 ದಿಂದ 80,000 ಕೋಟಿ ರೂ. ಸಾಲ ಮಾಡಿದ್ದಾರೆ. ನಮ್ಮ ಸರ್ಕಾರ ಇದ್ದಾಗ ಬಡವರಿಗೆ 7 ಕೆ.ಜಿ ಅಕ್ಕಿ ಕೊಡುತ್ತಿದ್ದೆವು. ಬಿಜೆಪಿ ಸರ್ಕಾರ 5 ಕೆ.ಜಿ ನೀಡುತ್ತಿದ್ದಾರೆ. ಈ ಸರ್ಕಾರ ಶೇ.40 ಕಮಿಷನ್, ಹಗರಣ ನಡೆಸುತ್ತಿದೆ. ಇಲ್ಲಿ ಒಂದು ಲಕ್ಷ ರೂಪಾಯಿ ಕೆಲಸಕ್ಕೆ 40,000 ಲಂಚ ಕೊಡಬೇಕು. ಕಂಟ್ರಾಕ್ಟರ್‌ಗೆ 25,000, ಜಿಎಸ್‌ಟಿಗೆ 18,000 ಕೊನೆಗೆ ಉಳಿಯೋದು 17,000 ಇದರಲ್ಲಿ ಏನು ಕೆಲಸ ಮಾಡಲು ಸಾಧ್ಯ? ಕೆಲಸ ಮಾಡಿದ್ರೂ ಗುಣಮಟ್ಟ ಇರುತ್ತಾ? ಹೀಗೆ ಮಾಡಿ ರಾಜ್ಯವನ್ನೇ ತಿಂದುಬಿಟ್ಟಿದ್ದಾರೆ. ಈಗ ರಾಜ್ಯವನ್ನು ಉಳಿಸಬೇಕಾದುದ್ದು ನಮ್ಮ ಜವಾಬ್ದಾರಿ ಎಂದು ತಿಳಿಸಿದರು.

**ಪರಿಶಿಷ್ಟ ಜಾತಿ, ಪಂಗಡದವರ ಹಿತ ಕಾಯಲು ಬದ್ಧ:** ಎಸ್‌ಸಿಪಿ – ಟಿಎಸ್‌ಪಿ ಕಾನೂನು ಜಾರಿಗೆ ತಂದು ಪರಿಶಿಷ್ಟ ಜಾತಿ ಮತ್ತು ವರ್ಗದ ಜನರ ಜನಸಂಖ್ಯೆಗೆ ಅನುಗುಣವಾಗಿ ಅನುದಾನ ಖರ್ಚಾಗುವಂತೆ ಮಾಡಿದ್ದು ನಾನು. ಇಂಥದ್ದೊಂದು ಕಾನೂನು ರೂಪಿಸಿದ್ದು ಕರ್ನಾಟಕದಲ್ಲಿ ಮೊದಲು ನಾನೇ. ಇದನ್ನು ಜನ ಅರ್ಥಮಾಡಿಕೊಳ್ಳಲ್ಲ. ನಮ್ಮ ಸರ್ಕಾರದ ಕಡೆಯ ಬಜೆಟ್‌ನಲ್ಲಿ ಈ ಯೋಜನೆಗೆ 30,000 ಕೋಟಿ ರೂ. ನೀಡಲಾಗಿತ್ತು. ಆ ನಂತರ ಬಿಜೆಪಿ ಸರ್ಕಾರ ಈ ಯೋಜನೆಗೆ ನೀಡುವ ಅನುದಾನ ಹೆಚ್ಚಳ ಮಾಡಿಲ್ಲ. ದಲಿತರಿಗೆ ಮೋಸ ಮಾಡಿದೆ. ನಾನು ಹೇಳಿದ್ದು ವಾಸ್ತವ ಲೆಕ್ಕಗಳು, ಇದನ್ನು ಯಾರೂ ಬೇಕಾದರೂ ಬಜೆಟ್ ಪುಸ್ತಕ ನೋಡಬಹುದು ಎಂದರು.

ಕಾಂಗ್ರೆಸ್ ಅಭ್ಯರ್ಥಿ ಮಾವಿನಹಳ್ಳಿ ಸಿದ್ದೇಗೌಡ ಮಾತನಾಡಿ, ಕ್ಷೇತ್ರದ ಶಾಸಕರನ್ನು ಸೋಲಿಸಿ ಹೊಸ ಮುಖ ಆರಿಸಬೇಕು. ಈ ಕ್ಷೇತ್ರದಲ್ಲಿ ಸಿದ್ದರಾಮಯ್ಯ ಅಥವಾ ಡಾ.ಯತೀಂದ್ರ ಅವರನ್ನು ಸ್ಪರ್ಧೆ ಮಾಡುವಂತೆ ಒತ್ತಡ ಹೇರಿದಾಗ ಒಪ್ಪದೆ, ಸಾಮಾನ್ಯ ರೈತನ ಮಗನಾಗಿದ ನನಗೆ ದೊಡ್ಡ ಅವಕಾಶ ಮಾಡಿಕೊಟ್ಟಿದ್ದಾರೆ. 2023 ರಲ್ಲಿ ಗೆಲುವನ್ನು ತಂದು ಕೊಟ್ಟು ಅವರಲ್ಲಿ ಇರುವ ನೋವನ್ನು ನೀಗಿಸಬೇಕು. ಕಾಂಗ್ರೆಸ್ ಅಭ್ಯರ್ಥಿಯಾಗಿ ಏ.17ರಂದು ಮಧ್ಯಾಹ್ನ 3 ಗಂಟೆಗೆ ಮೆರವಣಿಗೆ ಮೂಲಕ ತೆರಳಿ ನಾಮಪತ್ರ ಸಲ್ಲಿಸುತ್ತೇವೆ ಎಂದು ಹೇಳಿದರು.

ಇದೇ ವೇಳೆ ಎಂ.ಹೆಚ್.ರಾಜಶೇಖರ ಮೂರ್ತಿ, ದೇವರಾಜ್ ಟಿ.ಕಾಟೂರ್, ಲೋಕೇಶ್,ರಮ್ಮನಹಳ್ಳಿ ಜವರಪ್ಪ, ಹೊಸ ಹುಂಡಿ ಸ್ವಾಮಿ, ಮಾಳಿಗೆಶೆಟ್ಟಿ ಇನ್ನಿತರ ಮುಖಂಡರು ಕಾಂಗ್ರೆಸ್ ಸೇರ್ಪಡೆಯಾದರು. ಸಭೆಯಲ್ಲಿ ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಮಾತನಾಡಿದರು. ಮಾಜಿ ಸಂಸದ ಕಾಗಲವಾಡಿ ಎಂ.ಶಿವಣ್ಣ, ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ. ಬಿ.ಜೆ.ವಿಜಯ ಕುಮಾರ್, ಮುಖಂಡರಾದ ಬಸವರಾಜು, ಆಲನಹಳ್ಳಿ ಪುಟ್ಟಸ್ವಾಮಿ, ಬೀರಿಹುಂಡಿ ಬಸವಣ್ಣ, ಯರಗನಹಳ್ಳಿ ಮಾದೇಗೌಡ, ಕೆಂಪನಾಯಕ, ಕೃಷ್ಣ ಕುಮಾರ್ ಸಾಗರ್, ರಾಕೇಶ್ ಪಾಪಣ್ಣ, ಸಿ.ನರಸೇಗೌಡ, ಡಾ.ಪುಷ್ಪಾ ಅಮರ ನಾಥ್, ಪುಷ್ಪಲತಾ ಚಿಕ್ಕಣ್ಣ, ಮೋದಾ ಮಣಿ, ಕವಿತಾ ಕಾಳೆ, ಜೆ.ಜೆ.ಆನಂದ್, ಜಿ.ವಿ.ಸೀತಾರಾಮ್, ಕೂರ್ಗಳ್ಳಿ, ಮಹದೇವ, ಎಂ.ಹೆಚ್. ರಾಜಶೇಖರ ಮೂರ್ತಿ, ದೇವರಾಜ್ ಕಾಟೂರ್ ಇನ್ನಿತರರು ಹಾಜರಿದ್ದರು.

# ನನ್ನ ಶ್ರಮದಿಂದ ಟಿಕೆಟ್ ಸಿಕ್ಕಿದೆ

### ಅವಕಾಶ ಸಿಕ್ಕರೆ ವರುಣಾದಲ್ಲಿ ಸೋಮಣ್ಣ ಪರ ಪ್ರಚಾರ: ವಿಜಯೇಂದ್ರ




ಬೆಂಗಳೂರು, ಏ.13(ಕೆಎಂಶಿ)– ಪ್ರಸಕ್ತ ವಿಧಾನಸಭಾ ಚುನಾವಣೆಯಲ್ಲಿ ಟಿಕೆಟ್ ಸಿಗಲು ನನ್ನ ಶ್ರಮ ಮತ್ತು ಪಕ್ಷ ಸಂಘಟನೆಯೇ ಕಾರಣ ಎಂದಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಪುತ್ರ ಬಿ.ವೈ. ವಿಜಯೇಂದ್ರ ಅವರು ಅವಕಾಶ ಸಿಕ್ಕರೆ ವರುಣಾ ಕ್ಷೇತ್ರದಲ್ಲಿ ಸಚಿವ ವಿ.ಸೋಮಣ್ಣ ಪರ ಪ್ರಚಾರ ಸಮರಕ್ಕೆ ಇಳಿಯುವುದಾಗಿ ಇಂದಿಲ್ಲಿ ಘೋಷಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಡಿಯೂರಪ್ಪ ಅವರ ಪುತ್ರ ಎನ್ನುವ ಕಾರಣಕ್ಕೆ ನನಗೆ ಟಿಕೆಟ್ ಕೊಟ್ಟಿಲ್ಲ. ಹಾಗಿದ್ದರೆ ನನಗೆ ಕಳೆದ ಬಾರಿಯೇ ವರುಣಾ ಕ್ಷೇತ್ರದಿಂದ ಟಿಕೆಟ್ ದೊರೆಯುತ್ತಿತ್ತು ಎಂದರು. ಆದರೆ ಈ ಬಾರಿ ನನ್ನ ಸಂಘಟನಾತ್ಮಕ ಚಟುವಟಿಕೆ ನೋಡಿ ಟಿಕೆಟ್ ನೀಡಲಾಗಿದೆ. ಏಪ್ರಿಲ್ 19ರಂದು ನಾನು ಶಿಕಾರಿಪುರ ವಿಧಾನ ಸಭಾ ಕ್ಷೇತ್ರಕ್ಕೆ ನಾಮಪತ್ರ ಸಲ್ಲಿಕೆ ಮಾಡುತ್ತೇನೆ ಎಂದು ರಾಜ್ಯ ಬಿಜೆಪಿ ಉಪಾಧ್ಯಕ್ಷರೂ ಆಗಿರುವ ವಿಜಯೇಂದ್ರ ತಿಳಿಸಿದರು. ಕಳೆದ ಒಂದು ದಶಕಕ್ಕೂ ಹೆಚ್ಚು ಕಾಲದಿಂದ ಸಂಘಟನೆಯಲ್ಲಿ ತೊಡಗಿಸಿಕೊಂಡು ಪಕ್ಷದ ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದ್ದೇನೆ. ಅಷ್ಟೇ ಅಲ್ಲ, ವರಿಷ್ಠರು ವಹಿಸಿದ ಜವಾಬ್ದಾರಿಯನ್ನು ನಿಷ್ಠೆಯಿಂದ ಮಾಡಿ ತೋರಿಸಿದ್ದಕ್ಕೆ ನನಗೆ ಟಿಕೆಟ್ ನೀಡಲಾಗಿದೆ ಎಂದು ವ್ಯಾಖ್ಯಾನಿಸಿ ದರು. ಸಂಘಟನೆಯಲ್ಲಿ ನಿಷ್ಠರಾಗಿ ದುಡಿದರೆ ಅಂಥವರನ್ನು ಪಕ್ಷ ಕೈ ಬಿಡುವುದಿಲ್ಲ ಎಂಬುದಕ್ಕೆ ನಾನೇ ಸಾಕ್ಷಿ. ಇದನ್ನೇ ಮಾನದಂಡವನ್ನಾಗಿಟ್ಟು ಕೊಂಡು 52 ಹೊಸ ಮುಖಗಳಿಗೆ ಬಿಜೆಪಿ ವರಿಷ್ಠರು ಅವಕಾಶ ಮಾಡಿಕೊಟ್ಟಿದ್ದಾರೆ.

ಈಗ ಕೆಲವರಿಗೆ ಅವಕಾಶ ಸಿಕ್ಕಿಲ್ಲ. ಸಂಘಟನೆಯಲ್ಲಿ ಹೊಸಬರಿಗೆ ಕೊಡುವ ಉದ್ದೇಶದಿಂದ ಹಳಬರಿಗೆ ಕೈತಪ್ಪಿದೆ. ಮುಂದಿನ ದಿನಗಳಲ್ಲಿ ಅವರಿಗೂ ಪಕ್ಷ ಜವಾಬ್ದಾರಿ ನೀಡುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು ಪಕ್ಷದ ಅಧಿಕೃತ ಅಭ್ಯರ್ಥಿಗಳ ಪರ ಕೆಲಸ ಮಾಡಬೇಕು ಎಂದರು. ಈ ಹಿಂದೆ ನನಗೆ ಉಪ ಚುನಾವಣೆಯ ಜವಾಬ್ದಾರಿ ಕೊಟ್ಟಾಗ ಶಿರಾ ಹಾಗೂ ಕೆ.ಆರ್.ಪೇಟೆಯಲ್ಲಿ ಪಕ್ಷಕ್ಕೆ ಗೆಲುವು ಸಿಕ್ಕಿತ್ತು. ಆದರೆ ಆ ಗೆಲುವು ವಿಜಯೇಂದ್ರನಿಂದ ಸಿಕ್ಕಿದ್ದಲ್ಲ, ಕಾರ್ಯಕರ್ತರ ಸಂಘಟನೆ ಪರಿಶ್ರಮದಿಂದ ನಾವು ಅಲ್ಲಿ ಆಗ ಗೆದ್ದೆವು, ವಿಜಯೇಂದ್ರ ಅನ್ನೋದು ನೆಪ ಮಾತ್ರ. ಈ ಬಾರಿಯ ಚುನಾವಣೆಗೆ ವರಿಷ್ಠರು ಹಾಗೂ ರಾಜ್ಯದ ನಾಯಕರು ನಿರಂತರವಾಗಿ ಪ್ರಚಾರ ಮಾಡಿದ್ದಾರೆ. ಕಾರ್ಯಕರ್ತರು ರಣೋತ್ಸಾಹದಲ್ಲಿ ಇದ್ದಾರೆ. ಸಂಘಟನೆಯ ಶಕ್ತಿಯ ಆಧಾರದ ಮೇಲೆ ನಾವು ಮತ್ತೆ ಅಧಿಕಾರಕ್ಕೆ ಬರುತ್ತೇವೆ ಎಂದು ಹೇಳಿದರು.

ಕಾರ್ಯಕರ್ತರ ಅಭಿಪ್ರಾಯ ಮತ್ತು ಸರ್ವೆ ಆಧಾರದ ಮೇಲೆ ಬಿಜೆಪಿ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಲಾಗಿದೆ. ಬಿಜೆಪಿ ಟಿಕೆಟ್ ಹಂಚಿಕೆಯಲ್ಲಿ ಸಾಮಾಜಿಕ ನ್ಯಾಯವಿದೆ. ಕೇಂದ್ರದಿಂದ ಸರ್ವೆ ಮಾಡಿದ ಆಧಾರದ ಮೇಲೆ ಅವಕಾಶ ಮಾಡಿಕೊಟ್ಟಿದ್ದಾರೆ. ಬೇರೆ ಪಕ್ಷಗಳು ಕಾರ್ಯಕರ್ತರ ಅಭಿಪ್ರಾಯಕ್ಕೆ ಮನ್ನಣೆ ನೀಡಿ ಟಿಕೆಟ್ ಘೋಷಣೆ ಮಾಡಿಲ್ಲ. ಬಿಜೆಪಿಯಲ್ಲಿ ಮಾತ್ರ ಇದು ಸಾಧ್ಯ ಹಾಗಾಗಿ ನಾನು ನರೇಂದ್ರ ಮೋದಿ, ಅಮಿತ್ ಶಾ ಅವರಿಗೆ ಮತ್ತು ನಡ್ಡಾ ಅವರಿಗೆ ಧನ್ಯವಾದ ಸಲ್ಲಿಸುತ್ತೇನೆ ಎಂದು ಬಿ.ವೈ.ವಿಜಯೇಂದ್ರ ಹೇಳಿದರು.

## ಬಿಜೆಪಿ ಪರ ಪ್ರಚಾರ ಸಂಬಂಧ ನಟ ರಿಷಬ್ ಶೆಟ್ಟಿ ಜೊತೆ ಮಾತನಾಡಿಲ್ಲ



ಬೆಂಗಳೂರು, ಏ.13(ಕೆಎಂಶಿ)–ಬಿಜೆಪಿ ಪರ ಪ್ರಚಾರ ಮಾಡುವ ಕುರಿತಂತೆ ನಟ ರಿಷಬ್ ಶೆಟ್ಟಿ ಜೊತೆಗೆ ಯಾವುದೇ ಮಾತುಕತೆ ನಡೆದಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮ ಸಿದ್ಧಾಂತ ಅವರ ಸಿದ್ಧಾಂತಕ್ಕೂ ಸಾಮ್ಯತೆ ಇದೆ. ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದಲ್ಲಿ ಆಕಸ್ಮಿಕವಾಗಿ ರಿಷಬ್ ಶೆಟ್ಟಿ ಭೇಟಿಯಾಗಿದ್ದರು. ನಾನು ಬರುವ ಮೊದಲೇ ದೇವಸ್ಥಾನದಲ್ಲೇ ಇದ್ದರು. ಈ ಹಿಂದೆ ಕೂಡ ನಮ್ಮ ಸಿದ್ಧಾಂತವನ್ನು ಪ್ರತಿಪಾದನೆ ಮಾಡಿದ್ದಾರೆ. ಬಿಜೆಪಿ ನಾಯಕತ್ವದ ಬಗ್ಗೆ ರಿಷಬ್‌ಗೆ ಒಲವಿರುವ ಮಾತನಾಡಿದ್ದಾರೆ ಎಂದರು.

ವಿಧಾನಸಭೆ ಚುನಾವಣೆ ಮತದಾರರ ಸೆಳೆಯಲು ಬಿಜೆಪಿ ಪರವಾಗಿ ನಟರು ಪ್ರಚಾರಕ್ಕೆ ಬರುತ್ತಿದ್ದಾರೆ. ನಟ ಕಿಚ್ಚ ಸುದೀಪ್ ಅವರು ಮುಖ್ಯಮಂತ್ರಿ ಪರ ಹಾಗೂ ಅವರು ಸೂಚಿಸಿದ ಅಭ್ಯರ್ಥಿ ಪರವಾಗಿ ಪ್ರಚಾರ ಮಾಡುವುದಾಗಿ ಹೇಳಿದ್ದಾರೆ.ಬಿಜೆಪಿ ಪರವಾಗಿ ರಿಷಬ್ ಶೆಟ್ಟಿ ಮತ ಪ್ರಚಾರ ಮಾಡಲಿದ್ದಾರೆಯೇ ಎಂಬುದು ತೀವ್ರ ಕುತೂಹಲ ಕೆರಳಿಸಿದೆ.

## ನಾಳೆ ವಿಶ್ವ ಕಲಾ ದಿನ: ಚಿತ್ರಕಲಾ ಸ್ಪರ್ಧೆ

ಮೈಸೂರು, ಏ.13–ವಿಶ್ವ ಕಲಾ ದಿನಾಚರಣೆ ಅಂಗವಾಗಿ 9 ರಿಂದ 16 ವರ್ಷದ ಮಕ್ಕಳಿಗೆ ಪರಿಸರದ ಬಗ್ಗೆ ಚಿತ್ರಕಲಾ ಸ್ಪರ್ಧೆಯನ್ನು ಸೈನಿಕ ಅಕಾಡೆಮಿ ಮೈಸೂರು (SAM) ಹಾಗೂ ಕೆಎಮ್‌ಪಿಕೆ ಚಾರಿಟೇಬಲ್ ಟ್ರಸ್ಟ್ ಸಹಯೋಗದೊಂದಿಗೆ ಬೆಳವಾಡಿಯಲ್ಲಿರುವ ಸೈನಿಕ ಅಕಾಡೆಮಿ ಆವರಣದಲ್ಲಿ ಏ.15ರಂದು ಬೆಳಗ್ಗೆ 11.30 ಗಂಟೆಗೆ ಆಯೋಜಿಸಲಾಗಿದೆ. ಸ್ಪರ್ಧೆಯಲ್ಲಿ ಭಾಗವಹಿಸುವವರಿಗೆ ಟ್ರಸ್ಟ್ ವತಿಯಿಂದ ಪ್ರಮಾಣ ಪತ್ರ ಹಾಗೂ ಮೊದಲ ಮೂರು ವಿಜೇತರಿಗೆ ಬಹುಮಾನ ವಿತರಿಸಲಾಗುವುದು ಎಂದು ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್ ತಿಳಿಸಿದ್ದಾರೆ.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಸೈನಿಕ ಅಕಾಡೆಮಿ, ಮೈಸೂರಿನ ಸಂಸ್ಥಾಪಕರು ಹಾಗೂ ನಿವೃತ್ತ ಕಮಾಂಡೊ ಶ್ರೀಧರ್ ಸಿ.ಎಂ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾಕ್ಟರ್ ಆರ್.ಎಚ್. ಪವಿತ್ರ, ಮನೋರೋಗ ತಜ್ಞ ಡಾ. ರೇಖಾ ಮನ ಶಾಂತಿ, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಶಾಲೆಯ ಮುಖ್ಯ ಉಪನ್ಯಾಸಕರು ಹಾಗೂ ಶಿಕ್ಷಕ ವೃಂದ ಆಗಮಿಸಲಿದ್ದಾರೆ. ಚಿತ್ರಕಲೆಯಲ್ಲಿ ನೊಂದಾಯಿಸಿಕೊಳ್ಳುವವರು 9880752727 ಸಂಪರ್ಕಿಸಿ.

### ಮಾನನಷ್ಟ ಮೊಕದ್ದಮೆಯಲ್ಲಿ ತಪ್ಪಿತಸ್ಥ ಪ್ರಕರಣ

## ತಡೆಯಾಜ್ಞೆ ಕೋರಿ ರಾಹುಲ್ ಗಾಂಧಿ ಸಲ್ಲಿಸಿರುವ ಅರ್ಜಿ ವಿಚಾರಣೆ

ಸೂರತ್, ಏ.13– ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ಮಾನನಷ್ಟ ಮೊಕದ್ದಮೆ ವಿಚಾರಣೆಯನ್ನು ಗುಜರಾತ್ ರಾಜ್ಯದ ಸೂರತ್ ನಗರದ ಸೆಷನ್ಸ್ ನ್ಯಾಯಾಲಯವು ಗುರುವಾರ ಆರಂಭಿಸಿದೆ. ಮಾನನಷ್ಟ ಮೊಕದ್ದಮೆ ಪ್ರಕರಣದಲ್ಲಿ ಎರಡು ವರ್ಷಗಳ ಜೈಲು ಶಿಕ್ಷೆಗೆ ತಡೆಯಾಜ್ಞೆ ನೀಡುವಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮಾಡಿದ ಮನವಿಯ ವಿಚಾರಣೆಯನ್ನು ನ್ಯಾಯಾಲಯ ಆರಂಭಿಸಿದೆ.

ಬಿಜೆಪಿ ಶಾಸಕ ಮತ್ತು ರಾಹುಲ್ ಗಾಂಧಿ ವಿರುದ್ಧ ದೂರು ನೀಡಿದ್ದ ಪೂರ್ಣೇಶ್ ಮೋದಿ ಅವರು ಇದೇ ನ್ಯಾಯಾಲಯದಲ್ಲಿ ಈ ಹಿಂದೆ ನೀಡಿದ್ದ ಹೇಳಿಕೆಯಲ್ಲಿ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮಾನಹಾನಿಕರ ಹೇಳಿಕೆಗಳನ್ನು ಮತ್ತೆ ಮತ್ತೆ ನೀಡುತ್ತಾ ಬಂದಿದ್ದಾರೆ. ಅವರು "ಪುನರಾವರ್ತಿತ ಅಪರಾಧಿ" ಯಾಗಿದ್ದು ಅವರಿಗೆ ನೀಡಿರುವ ಎರಡು ವರ್ಷದ ಶಿಕ್ಷೆಗೆ ತಡೆಯಾಜ್ಞೆ ನೀಡದಂತೆ ಮನವಿ ಮಾಡಿದ್ದಾರೆ.

ಇಂದು ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಆರ್.ಪಿ.ಮೊಗೇರ ಅವರು ಕೋರ್ಟ್ ಸಭಾಂಗಣದಲ್ಲಿ ವಾದಿ–ಪ್ರತಿವಾದಿ ವಿಚಾರಣೆ ಪ್ರಾರಂಭಿಸಿದರು. ರಾಹುಲ್ ಗಾಂಧಿ ಅವರ ದೋಷಾರೋಪಣೆಗೆ ತಡೆಯಾಜ್ಞೆ ಕೋರಿ ಅವರ ವಕೀಲರು ಮಂಡಿಸಿದ ವಾದವನ್ನು ನ್ಯಾಯಾಲಯವು ಮೊದಲು ಆಲಿಸಿದೆ. ನಂತರ, ಶಿಕ್ಷೆಗೆ ತಡೆ ಕೋರಿ ಸಲ್ಲಿಸಿದ ಮನವಿಯ ವಿರುದ್ಧ ನಾವು ನಮ್ಮ ಆಕ್ಷೇಪಣೆಗಳು ಮತ್ತು ವಾದಗಳನ್ನು ಮಂಡಿಸುತ್ತೇವೆ ಎಂದು ಪೂರ್ಣೇಶ್ ಮೋದಿ ಅವರ ಪರ ವಕೀಲ ಕೇತನ್ ರೇಶಮ್ವಾಲಾ ಹೇಳಿದ್ದಾರೆ. ಕಳೆದ ಮಾ.23 ರಂದು ಸೂರತ್‌ನ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಏಪ್ರಿಲ್ 13, 2019 ರಂದು ಚುನಾವಣಾ ರ‍್ಯಾಲಿಯಲ್ಲಿ ರಾಹುಲ್ ಗಾಂಧಿ ಕರ್ನಾಟಕದ ಕೋಲಾರದಲ್ಲಿ ಮಾತನಾಡಿದ್ದ ವೇಳೆ "ಎಲ್ಲಾ ಕಳ್ಳರಿಗೂ ಮೋದಿ ಸಾಮಾನ್ಯ ಉಪನಾಮ ಹೇಗೆ" ಎಂದು ಪ್ರಶ್ನಿಸಿದ್ದರು.

ರಾಹುಲ್ ಗಾಂಧಿಯವರ ಹೇಳಿಕೆ ತಪ್ಪಿತಸ್ಥವೆಂದು ಪರಿಗಣಿಸಿ ಸೂರತ್ ಕೋರ್ಟ್ ಎರಡು ವರ್ಷಗಳ ಜೈಲು ಶಿಕ್ಷೆ ವಿಧಿಸಿತು. ಈ ತೀರ್ಪಿನ ವಿರುದ್ಧ ರಾಹುಲ್ ಗಾಂಧಿ ಅವರು ನ್ಯಾಯಾಧೀಶ ಮೊಗೇರ ಅವರ ಮುಂದೆ ಮೇಲ್ಮನವಿ ಸಲ್ಲಿಸಿದ್ದಾರೆ. ಈ ಮಧ್ಯೆ ಶಿಕ್ಷೆಗೆ ತಡೆ ನೀಡುವಂತೆಯೂ ಅವರು ಕೋರಿದ್ದಾರೆ.

## 71 ಸಾವಿರ ಉದ್ಯೋಗಿಗಳಿಗೆ ನೇಮಕಾತಿ ಪತ್ರ: ರೋಜ್‌ಗಾರ್ ಮೇಳ ಕುರಿತು ಪ್ರಧಾನಿ ವಿರುದ್ಧ ಮಲ್ಲಿಕಾರ್ಜುನ ಖರ್ಗೆ ವಾಗ್ದಾಳಿ

ನವದೆಹಲಿ, ಏ.13– ರಾಷ್ಟ್ರೀಯ ಉದ್ಯೋಗ ಮೇಳದಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ 71,000ಕ್ಕೂ ಹೆಚ್ಚು ಯುವಕರಿಗೆ ಪ್ರಧಾನಿ ನರೇಂದ್ರ ಮೋದಿ ನೇಮಕಾತಿ ಪತ್ರ ವಿತರಿಸಿದ್ದು, ಇದಕ್ಕೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಇದು ಕಡಿಮೆ ಪ್ರಮಾಣದ ನೇಮಕಾತಿ ಹಾಗೂ ತುಂಬ ತಡವಾಯಿತು ಎಂದು ವ್ಯಂಗ್ಯವಾಡಿದ್ದಾರೆ.

ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಲ್ಲಿ 71 ಸಾವಿರಕ್ಕೂ ಹೆಚ್ಚು ಯುವಕರು ಸರ್ಕಾರಿ ನೌಕರಿ ಪಡೆದಿದ್ದು ಅವರೆಲ್ಲರಿಗೂ ಪ್ರಧಾನಿ ಅಭಿನಂದನೆ ಸಲ್ಲಿಸಿದ್ದರು. ಎನ್‌ಡಿಎ ಮತ್ತು ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಸರ್ಕಾರಿ ಉದ್ಯೋಗ ನೀಡುವ ಪ್ರಕ್ರಿಯೆ ತ್ವರಿತ ಗತಿಯಲ್ಲಿ ನಡೆಯುತ್ತಿದೆ. ನಿನ್ನೆಯಷ್ಟೇ ಮಧ್ಯಪ್ರದೇಶದಲ್ಲಿ 22,000ಕ್ಕೂ ಹೆಚ್ಚು ಶಿಕ್ಷಕರಿಗೆ ನೇಮಕಾತಿ ಪತ್ರಗಳನ್ನು ಹಸ್ತಾಂತರಿಸಲಾಗಿದೆ ಎಂದರು.

'ಉದ್ಯೋಗ ಮೇಳ'ದಡಿ ಇತ್ತೀಚೆಗೆ ನೇಮಕಾತಿ ಪತ್ರ ವಿತರಣೆ ಕುರಿತು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಇಂದು ವ್ಯಂಗ್ಯವಾಡಿದ್ದು, 'ತುಂಬಾ ಕಡಿಮೆ, ತಡವಾಗಿ' ಇದು ಕೇವಲ 'ಸ್ಟಂಟ್' ಎಂದು ಹೇಳಿದರು.

ಮೈಸೂರು ಮಿತ್ರ





















### ಅಂಕಪಟ್ಟಿ ವಿವರ

| ತಂಡ | ಪಂದ್ಯಗಳು | ಗೆಲುವು | ಸೋಲು | ಡ್ರಾ | ಅಂಕ |
|---|---|---|---|---|---|
| ರಾಜಸ್ಥಾನ್ | 4 | 3 | 1 | 0 | 6 |
| ಲಕ್ನೋ | 4 | 3 | 1 | 0 | 6 |
| ಗುಜರಾತ್ | 4 | 3 | 1 | 0 | 6 |
| ಕೋಲ್ಕತ್ತಾ | 3 | 2 | 1 | 0 | 4 |
| ಸಿಎಸ್‌ಕೆ | 4 | 2 | 2 | 0 | 4 |
| ಪಂಜಾಬ್ | 4 | 2 | 2 | 0 | 4 |
| ಆರ್‌ಸಿಬಿ | 3 | 1 | 2 | 0 | 2 |
| ಮುಂಬೈ | 3 | 1 | 2 | 0 | 2 |
| ಎಸ್‌ಆರ್‌ಹೆಚ್ | 3 | 1 | 2 | 0 | 2 |
| ಡೆಲ್ಲಿ | 4 | 0 | 3 | 0 | 0 |



# ಪಂಜಾಬ್ ಮಣಿಸಿದ ಗುಜರಾತ್ ಟೈಟನ್ಸ್

ಮೊಹಾಲಿ, ಏ.13– ಶುಭಮನ್ ಗಿಲ್ ಅವರ ಅರ್ಧಶತಕ ಹಾಗೂ ಬೌಲರ್‌ಗಳ ಕರಾರುವಾಕ್ ಬೌಲಿಂಗ್ ದಾಳಿ ನೆರವಿನಿಂದ ಗುಜರಾತ್ ಟೈಟನ್ಸ್, ಪಂಜಾಬ್ ಕಿಂಗ್ಸ್ ಅನ್ನು 6 ವಿಕೆಟ್‌ಗಳ ಅಂತರದಿಂದ ಸೋಲಿಸಿದೆ. ಈ ಗೆಲುವಿನೊಂದಿಗೆ ಗುಜರಾತ್ ಅಂಕಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೇರಿದೆ.

ಇಲ್ಲಿನ ಪಿಸಿಎ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ ಕಿಂಗ್ಸ್ ಬಳಗ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 153 ರನ್ ಗಳಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಪ್ರಭಾಸಿಮ್ರಾನ್ ಸಿಂಗ್ ಶೂನ್ಯಕ್ಕೆ ವಿಕೆಟ್ ಒಪ್ಪಿಸಿದರು. ಇದರ ಬೆನ್ನಲ್ಲೇ ನಾಯಕ ಶಿಖರ್ ಧವನ್ 8 ರನ್‌ಗಳಿಸಿ ನಿರ್ಗಮಿಸಿದರು. ಮ್ಯಾಥ್ಯೂ ಶಾರ್ಟ್ 24 ಎಸೆತಗಳಲ್ಲಿ 1 ಸಿಕ್ಸರ್, 6 ಬೌಂಡರಿ ಒಳಗೊಂಡ 36 ರನ್ ಗಳಿಸಿ ಬೃಹತ್ ಮೊತ್ತ ಪೇರಿಸುವ ಭರವಸೆ ಮೂಡಿಸಿದರಾದರೂ ವಿಕೆಟ್ ಒಪ್ಪಿಸಿದರು. ಉಳಿದಂತೆ ಭಾನುಕ ರಾಜಪಕ್ಷ 20, ಜಿತೇಶ್ ಶರ್ಮ 25, ಸ್ಯಾಮ್ ಕರ್ರನ್ 22, ಶಾರುಖ್ ಖಾನ್ 22 ರನ್ ಗಳಿಸಿ ತಂಡದ ಗೌರವಾನ್ವಿತ ಮೊತ್ತಕ್ಕೆ ಉಪಯುಕ್ತ ಕಾಣಿಕೆ ನೀಡಿದರು. ಗುಜರಾತ್ ಟೈಟನ್ಸ್ ಪರ ಮೋಹಿತ್ ಶರ್ಮಾ 2, ರಶೀದ್ ಖಾನ್, ಅಲ್ಜಾರಿ ಜೋಸೆಫ್, ಜೋಶುವಾ ಲಿಟಲ್ ಹಾಗೂ ಮೊಹಮ್ಮದ್ ಶಮಿ ತಲಾ ಒಂದೊಂದು ವಿಕೆಟ್ ಉರುಳಿಸಿದರು.

**ಸ್ಕೋರ್ ವಿವರ**
ಪಂಜಾಬ್ ಕಿಂಗ್ಸ್
153/8
ಗುಜರಾತ್ ಟೈಟಾನ್ಸ್
154/4
(ಗುಜರಾತ್‌ಗೆ 6 ವಿಕೆಟ್ ಜಯ)

ಪಂಜಾಬ್ ಕಿಂಗ್ಸ್ ನೀಡಿದ 154ರನ್‌ಗಳ ಗುರಿ ಬೆನ್ನತ್ತಿದ ಗುಜರಾತ್ ಟೈಟನ್ಸ್ 19.5 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು ಗೆಲುವಿನ ರನ್ ಗಳಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ವೃದ್ಧಿಮಾನ್ ಸಹಾ ಹಾಗೂ ಶುಭ್‌ಮನ್ ಗಿಲ್ ಮೊದಲ ವಿಕೆಟ್‌ಗೆ 48 ರನ್ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಆದರೆ 5 ಬೌಂಡರಿ ಒಳಗೊಂಡ 30ರನ್ ಗಳಿಸಿದ ವೃದ್ಧಿಮಾನ್ ಸಹಾ ಕಗಿಸೋ ರಬಾಡಗೆ ವಿಕೆಟ್ ಒಪ್ಪಿಸಿದರು. ನಂತರ ಬಂದ ಸಾಯಿ ಸುದರ್ಶನ್ 19, ಹಾರ್ದಿಕ್ ಪಾಂಡ್ಯ 8 ರನ್ ಗಳಿಸಿ ಬಂದಷ್ಟೇ ವೇಗವಾಗಿ ನಿರ್ಗಮಿಸಿದರು. ಮತ್ತೊಂದೆಡೆ ಉತ್ತಮ ಪ್ರದರ್ಶನ ನೀಡಿದ ಶುಭಮನ್ ಗಿಲ್ 49 ಎಸೆತಗಳಲ್ಲಿ 1 ಸಿಕ್ಸರ್, 7 ಬೌಂಡರಿ ಒಳಗೊಂಡ 67 ರನ್ ಪೇರಿಸಿ ಸ್ಯಾಮ್ ಕರ್ರನ್‌ಗೆ ವಿಕೆಟ್ ನೀಡಿದರು. ಅಂತಿಮ ವಾಗಿ ಡೇವಿಡ್ ಮಿಲ್ಲರ್ ಅಜೇಯ 17 ಹಾಗೂ ರಾಹುಲ್ ತೆವಾಟಿಯಾ 5 ರನ್ ಗಳಿಸುವ ಮೂಲಕ ತಂಡವನ್ನು ಗೆಲುವಿನ ದಡ ಸೇರಿಸಿದರು. ಪಂಜಾಬ್ ಪರ ಅರ್ಷದೀಪ್ ಸಿಂಗ್, ಕಗಿಸೋ ರಬಾಡ, ಹರ್‌ಪ್ರೀತ್ ಬ್ರಾರ್ ಹಾಗೂ ಸ್ಯಾಮ್ ಕರ್ರನ್ ತಲಾ ಒಂದೊಂದು ವಿಕೆಟ್ ಪಡೆದರು. ಮೋಹಿತ್ ಶರ್ಮಾ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.






## ಪಿರಿಯಾಪಟ್ಟಣ ಕಾಂಗ್ರೆಸ್ ಅಭ್ಯರ್ಥಿ ವೆಂಕಟೇಶ್ 11 ಕೋಟಿ ಆಸ್ತಿ ಒಡೆಯ

ಮೈಸೂರು, ಏ.13– ಪಿರಿಯಾಪಟ್ಟಣ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿರುವ ಕೆ.ವೆಂಕಟೇಶ್, 1.12 ಕೋಟಿ ರೂ. ಚರಾಸ್ತಿ ಹಾಗೂ 10.64 ಕೋಟಿ ರೂ. ಮೌಲ್ಯದ ಸ್ಥಿರಾಸ್ತಿ ಹೊಂದಿದ್ದಾರೆ.



ನಾಮಪತ್ರದೊಂದಿಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಕುಟುಂಬ ಸದಸ್ಯರ ಆಸ್ತಿ ವಿವರವನ್ನೂ ನಮೂದಿಸಿದ್ದಾರೆ. ಕೆ.ವೆಂಕಟೇಶ್ ಕೈಯ್ಯಲ್ಲಿ 5.41 ಲಕ್ಷ ರೂ., ಅವರ ಪತ್ನಿ(ಗೃಹಿಣಿ) ಬಳಿ 3.75 ಲಕ್ಷ ರೂ., ಪುತ್ರ ನಿತಿನ್ ಬಳಿ 11.58 ಲಕ್ಷ ರೂ. ಹಾಗೂ ಸೊಸೆ ಅರ್ಚನಾ ನಿತಿನ್ ಬಳಿ 1.23 ಲಕ್ಷ ರೂ. ನಗದು, ವಿವಿಧ ಬ್ಯಾಂಕ್‌ಗಳಲ್ಲಿ ಸುಮಾರು 87 ಲಕ್ಷ ರೂ., ವಿಜಯ ಬ್ಯಾಂಕ್‌ನಲ್ಲಿ 50 ಸಾವಿರ ರೂ.(50x 1000) ಷೇರು ಹೊಂದಿದ್ದಾರೆ.

ತಮ್ಮ ಬಳಿ ಟೊಯೊಟಾ ಇನ್ನೋವಾ ಕಾರು(12 ಲಕ್ಷ ರೂ.), ಟ್ರ್ಯಾಕ್ಟರ್ ಮತ್ತು ಟ್ರೇಲರ್(9 ಲಕ್ಷ) ಹಾಗೂ ಮಿನಿ ಟ್ರ್ಯಾಕ್ಟರ್(8.25 ಲಕ್ಷ), ಪತ್ನಿ ಹೆಸರಿನಲ್ಲಿ ಹೋಂಡಾ ಅಮೇಜ್ ಕಾರು(4 ಲಕ್ಷ), ಪುತ್ರನ ಹೆಸರಲ್ಲಿ ಎಕ್ಸ್‌ಯುವಿ–300(6 ಲಕ್ಷ), ಮಹೀಂದ್ರ ತಾರ್(10 ಲಕ್ಷ) ಕಾರುಗಳಿವೆ. ಕುಟುಂಬದವರ ಬಳಿ ಒಟ್ಟು 54 ಲಕ್ಷ ರೂ. ಮೌಲ್ಯದ ಚಿನ್ನಾಭರಣವಿದೆ. ಮರದೂರು, ಕಿತ್ತೂರು, ಅತ್ತಿಗೋಡು, ತಡೂರಿನಲ್ಲಿ ಕೃಷಿ ಭೂಮಿ, ಮೈಸೂರಿನ ವಿವಿಧೆಡೆ ನಿವೇಶನಗಳು, ಮೈಸೂರು, ಚುಂಚನಕಟ್ಟೆಯಲ್ಲಿ ವಾಣಿಜ್ಯ ಕಟ್ಟಡಗಳಿವೆ. ವ್ಯವಸಾಯ ಹಾಗೂ ವಾಣಿಜ್ಯೋದ್ಯಮ ತಮ್ಮ ಆದಾಯದ ಮೂಲವಾಗಿದೆ ಎಂದು ವಿವರ ನೀಡಿರುವ ಅವರು, ಬ್ಯಾಂಕ್ ಹಾಗೂ ಖಾಸಗಿ ವ್ಯಕ್ತಿಗಳಿಂದ 6.42 ಕೋಟಿ ರೂ. ಸಾಲ ಪಡೆದಿರುವುದಾಗಿ ತಿಳಿಸಿದ್ದಾರೆ. ಬಿಎಸ್ಸಿ ಪದವೀಧರರಾದ 74 ವರ್ಷದ ವೆಂಕಟೇಶ್, ಸಾಮಾಜಿಕ ಜಾಲತಾಣಗಳಲ್ಲಿ ಖಾತೆ ಹೊಂದಿಲ್ಲ ಎಂದಿದ್ದಾರೆ.

## ಮನೆ ಮನೆಗೆ ತೆರಳಿ ಮತದಾನ ಜಾಗೃತಿ



ಮೈಸೂರು, ಏ.13(ಎಂಕೆ)– ಮನೆ ಮನೆಗೆ ತೆರಳಿ ಮತದಾನ ಜಾಗೃತಿ ಅಭಿಯಾನ ಮುಂದುವರೆಸಿರುವ ನಗರಪಾಲಿಕೆ ಸ್ವೀಪ್ ಸಮಿತಿ ತಂಡ, ಗುರುವಾರ ಎನ್.ಆರ್ ಕ್ಷೇತ್ರದ ವಿವಿಧೆಡೆ ಮತದಾನ ಜಾಗೃತಿ ಮೂಡಿಸಲಾಯಿತು.

ನಗರ ಪಾಲಿಕೆ ವಲಯ–8ರ ಆಯುಕ್ತ ಶಿವಕುಮಾರ್ ನೇತೃತ್ವದ ತಂಡ ಜಲಪುರಿ ಪೊಲೀಸ್ ಕ್ವಾಟ್ರಸ್‌ನ ಮತಗಟ್ಟೆ ಸಂಖ್ಯೆ–142, 143ರ ವ್ಯಾಪ್ತಿಯ ಮನೆ ಮನೆಗೆ ತೆರಳಿ 'ಮತದಾನಕ್ಕಿಂತ ಇನ್ನೊಂದಿಲ್ಲ, ನಾನು ಕಡ್ಡಾಯವಾಗಿ ಮತದಾನ ಮಾಡುತ್ತೇನೆ' ಎನ್ನುವ ಧ್ಯೆಯವಾಕ್ಯದೊಂದಿಗೆ ಮತದಾರರಲ್ಲಿ ಅರಿವು ಮೂಡಿಸಲಾಯಿತು. ಈ ವೇಳೆ ಮತದಾನ ಮಾಡುವುದರಿಂದಾಗುವ ಅನುಕೂಲಗಳು, ಮತದಾನ ನಮ್ಮೆಲ್ಲರ ಜವಾಬ್ದಾರಿ ಎಂಬ ಪ್ರಮುಖ ಅಂಶಗಳನ್ನು ತಿಳಿಸುವ ಮೂಲಕ ಮತದಾನದ ಮಹತ್ವ ತಿಳಿಸಿಕೊಡಲಾಯಿತು.

**ಮತದಾನ ಹೆಚ್ಚಿಸುವ ಗುರಿ:** ಕಡಿಮೆ ಮತದಾನವಾಗಿರುವ ಮತಗಟ್ಟೆಗಳನ್ನು ಗುರ್ತಿಸಿ ಜಾಗೃತಿ ಮೂಡಿಸಲಾಗುತ್ತಿದೆ. ಜಾಗೃತಿ ಅಭಿಯಾನವೂ ಮೈಸೂರು ನಗರ ವ್ಯಾಪ್ತಿಯ ಮೂರು ವಿಧಾನಸಭಾ ಕ್ಷೇತ್ರಗಳಲ್ಲಿ ನಡೆಯಲಿದೆ. ಈ ಮೂಲಕ ಮತದಾನ ಪ್ರಮಾಣ ಹೆಚ್ಚಿಸುವುದು ಗುರಿಯಾಗಿದೆ ಎಂದು ಜಿಲ್ಲಾ ಸ್ವೀಪ್ ಸಮಿತಿ ನೋಡಲ್ ಅಧಿಕಾರಿ ರಂಜಿತ್ ಕುಮಾರ್ ತಿಳಿಸಿದರು.

## ಹಲಸೂರು ಗೇಟ್ ಪೊಲೀಸ್ ಠಾಣೆ ಮುಂದೆ ಕೆಟ್ಟು ನಿಂತ ಕೋಟಿ ಹಣವಿದ್ದ ಆಟೋ !

ಬೆಂಗಳೂರು, ಏ.13– ಆಟೋದಲ್ಲಿ ಸಾಗಿಸುತ್ತಿದ್ದ ದಾಖಲೆ ಇಲ್ಲದ ಕೋಟಿ ರೂ. ಕಂತೆ ಕಂತೆ ಹಣವನ್ನು ಹಲಸೂರು ಗೇಟ್ ಪೊಲೀಸರು ವಶಪಡಿಸಿಕೊಂಡಿದ್ದಾರೆ.



ಸುರೇಶ್, ಪ್ರವೀಣ್ ಎಂಬುವರು ಆಟೋದಲ್ಲಿ ಕೋಟಿ ರೂ.ಗಳನ್ನು ವಿಜಯನಗರದಿಂದ ಜಯನಗರಕ್ಕೆ ಸಾಗಿಸುತ್ತಿದ್ದರು. ಈ ವೇಳೆ ಆಟೋ ಹಲಸೂರು ಗೇಟ್ ಪೊಲೀಸ್ ಠಾಣೆ ಬಳಿ ಕೆಟ್ಟು ನಿಂತಿದೆ. ಪೊಲೀಸರನ್ನು ನೋಡಿದ ಇಬ್ಬರು ಆರೋಪಿಗಳು ಅನುಮಾನಾಸ್ಪದವಾಗಿ ವರ್ತಿಸುತ್ತಿದ್ದರು. ಹೀಗಾಗಿ ಪೊಲೀಸರಿಗೆ ಅನುಮಾನ ಬಂದು ಆಟೋ ಬಳಿಗೆ ಬಂದು ಪರಿಶೀಲನೆ ನಡೆಸಿದ್ದಾರೆ. ಈ ವೇಳೆ 2 ಬ್ಯಾಗ್‌ಗಳಲ್ಲಿ 1 ಕೋಟಿ ರೂ. ಹಣ ಪತ್ತೆಯಾಗಿದೆ ನಂತರ ಹಣದ ಬಗ್ಗೆ ಪೊಲೀಸರು ಆದಾಯ ತೆರಿಗೆ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಸದ್ಯ ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆದಿರುವ ಹಲಸೂರು ಗೇಟ್ ಪೊಲೀಸರು ಹಣದ ಬಗ್ಗೆ ಮಾಹಿತಿ ಕಲೆ ಹಾಕುತ್ತಿದ್ದಾರೆ.

## ಕ್ಯಾಂಡಲ್ ಲೈಟ್ ಬೆಳಗಿಸಿ ಹುಣಸೂರಲ್ಲಿ ಮತದಾನ ಜಾಗೃತಿ



ಹುಣಸೂರು, ಏ.13– ಹುಣಸೂರು ತಾಪಂ ಹಾಗೂ ತಾಲೂಕು ಸ್ವೀಪ್ ಸಮಿತಿ ವತಿಯಿಂದ ಕ್ಯಾಂಡಲ್ ಲೈಟ್ ಜಾಥಾ ಮೂಲಕ ಮತದಾನ ಜಾಗೃತಿ ಮೂಡಿಸಲಾಯಿತು.

ತಾಪಂ ಕಚೇರಿ ಎದುರಿನಿಂದ ಆರಂಭವಾದ ಜಾಥಾ ಸಂವಿಧಾನ ವೃತ್ತದವರೆಗೂ ಸಾಗಿತು. ಈ ವೇಳೆ ಮೇ 10 ರಂದು ನಡೆಯುವ ವಿಧಾನಸಭಾ ಚುನಾವಣೆಯಲ್ಲಿ ಪ್ರತಿಯೊಬ್ಬರೂ ತಪ್ಪದೇ ಮತದಾನ ಮಾಡುವಂತೆ ವಿವಿಧ ಘೋಷಣೆಗಳನ್ನು ಕೂಗುವ ಮೂಲಕ ಅರಿವು ಮೂಡಿಸಲಾಯಿತು. ಬಳಿಕ ಸಂವಿಧಾನ ವೃತ್ತದ ಬಳಿ ಮಾನವ ಸರಪಳಿ ನಿರ್ಮಿಸಿ ಸಾರ್ವಜನಿಕರ ಗಮನ ಸೆಳೆಯಲಾಯಿತು.

ಇದೇ ವೇಳೆ ಪ್ರಜಾಪ್ರಭುತ್ವದಲ್ಲಿ ದೃಢ ವಿಶ್ವಾಸವುಳ್ಳ ಭಾರತದ ಪೌರರಾದ ನಾವು, ನಮ್ಮ ದೇಶದ ಪ್ರಜಾಸತ್ತಾತ್ಮಕ ಸಂಪ್ರದಾಯಗಳು ಮತ್ತು ಮುಕ್ತ ನ್ಯಾಯ ಸಮ್ಮತ ಮತ್ತು ಶಾಂತಿಯುತ ಚುನಾವಣೆಗಳ ಘನತೆಯನ್ನು ಎತ್ತಿ ಹಿಡಿಯುತ್ತೇವೆಂದು ಮತ್ತು ಪ್ರತಿಯೊಂದು ಚುನಾವಣೆಯಲ್ಲಿ ನಿರ್ಭೀತರಾಗಿ ಮತ್ತು ಧರ್ಮ, ಜನಾಂಗ, ಜಾತಿ–ಮತ ಎನ್ನದೇ ಮತ ಚಲಾಯಿಸುತ್ತೇವೆಂದು ಪ್ರತಿಜ್ಞೆ ಸ್ವೀಕರಿಸುತ್ತೇವೆ ಎಂದು ಪ್ರತಿಜ್ಞಾ ವಿಧಿಯನ್ನು ಸ್ವೀಕರಿಸಲಾಯಿತು.

ಜಾಗೃತಿ ಜಾಥಾದಲ್ಲಿ ಸಹಾಯಕ ಚುನಾವಣಾಧಿಕಾರಿ ಹಾಗೂ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಬಿ.ಕೆ.ಮನು, ನರೇಗಾ ಸಹಾಯಕ ನಿರ್ದೇಶಕ ಹೆಚ್.ಡಿ.ಲೋಕೇಶ್, ನಗರಸಭೆ ಇಂಜಿನಿಯರ್ ರೂಪ, ಹಿರಿಯ ಆರೋಗ್ಯಾಧಿಕಾರಿ ಸತೀಶ್, ಸೆಕ್ಟರ್ ಅಧಿಕಾರಿ ರಾಮಣ್ಣ, ತಾಲ್ಲೂಕು ಯೋಜನಾಧಿಕಾರಿ ರಾಜೇಶ್ ಸೇರಿದಂತೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸಿಬ್ಬಂದಿಗಳು ಭಾಗವಹಿಸಿದ್ದರು.

## ಆಪ್ ಅಭ್ಯರ್ಥಿ ಬಳಿ ಐದು ಕೋಟಿ ಆಸ್ತಿ

ಮೈಸೂರು, ಏ.13– ಮೈಸೂರಿನ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಆಮ್ ಆದ್ಮಿ ಪಕ್ಷ(ಎಎಪಿ)ದ ಅಭ್ಯರ್ಥಿ ಧರ್ಮಶ್ರೀ, ಕೋಟಿಗೂ ಹೆಚ್ಚು ಮೌಲ್ಯದ ಚಿನ್ನಾಭರಣ ಹೊಂದಿರುವುದಾಗಿ ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ತಿಳಿಸಿದ್ದಾರೆ. ತಮ್ಮ ಕೈಯ್ಯಲ್ಲಿ 50 ಸಾವಿರ ರೂ. ಹಾಗೂ ಪತಿ ಲಕ್ಷ್ಮೀಕಾಂತ್ ತಿವಾರಿ ಬಳಿ 25 ಸಾವಿರ ರೂ, ವಿವಿಧ ಬ್ಯಾಂಕ್‌ಗಳಲ್ಲಿ 5.57 ಲಕ್ಷ ರೂ., ನಾಲ್ಕು ಕಾರು ಹಾಗೂ ನಾಲ್ಕು ದ್ವಿಚಕ್ರ ವಾಹನಗಳು, 1.43 ಕೋಟಿ ಮೌಲ್ಯದ(2,368.8 ಗ್ರಾಂ), ಚಿನ್ನಾಭರಣ, ಕೃಷಿಭೂಮಿ ಸೇರಿ 1.87 ಕೋಟಿ ಚರಾಸ್ತಿ ಹಾಗೂ 4.02 ಕೋಟಿ ಸ್ಥಿರಾಸ್ತಿಯನ್ನು ಹೊಂದಿದ್ದಾರೆ. ವೃತ್ತಿ ಹಾಗೂ ವ್ಯಾಪಾರ ತಮ್ಮ ಆದಾಯದ ಮೂಲಗಳಾಗಿವೆ. 1.67 ಕೋಟಿ ರೂ. ಸಾಲವಿದೆ ಎಂದು ಮಾಹಿತಿ ನೀಡಿದ್ದಾರೆ. ಕಾನೂನು ಪದವೀಧರೆಯಾದ 35 ವರ್ಷದ ಧರ್ಮಶ್ರೀ, ರಾಜೀವ್‌ನಗರ 2ನೇ ಹಂತದ ನಿವಾಸಿ.

## ಉತ್ತರಪ್ರದೇಶ: ಗ್ಯಾಂಗ್‌ಸ್ಟರ್ ಅತಿಕ್ ಅಹ್ಮದ್ ಪುತ್ರ ಅಸದ್ ಎನ್‌ಕೌಂಟರ್‌ನಲ್ಲಿ ಹತ್ಯೆ



ಲಖನೌ, ಏ.13– ಉಮೇಶ್ ಪಾಲ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ದರೋಡೆಕೋರ–ರಾಜಕಾರಣಿ ಅತಿಕ್ ಅಹ್ಮದ್ ನ ಪುತ್ರ ಅಸದ್ ಹಾಗೂ ಆತನ ಸಹಾಯಕ ಗುಲಾಮ್‌ನನ್ನು ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಲಾಗಿದೆ.

ಝಾನ್ಸಿಯಲ್ಲಿ ಉತ್ತರ ಪ್ರದೇಶದ ವಿಶೇಷ ಕಾರ್ಯಪಡೆ ಎನ್‌ಕೌಂಟರ್ ನಡೆಸಿದ್ದು, ಎನ್‌ಕೌಂಟರ್‌ನಲ್ಲಿ ಅಸದ್ ಹಾಗೂ ಆತನ ಸಹಾಯಕನನ್ನು ಹತ್ಯೆ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ. ಹತ್ಯೆಯಾದ ಅಸದ್‌ನಿಂದ ಕೆಲವು ಅತ್ಯಾಧುನಿಕ ವಿದೇಶಿ ನಿರ್ಮಿತ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಎಸ್‌ಟಿಎಫ್ ಮೂಲಗಳು ಮಾಹಿತಿ ನೀಡಿವೆ. ಅಸದ್ ಅಹ್ಮದ್ ಅವರ ತಲೆಗೆ ಈ ಹಿಂದೆ ಪೊಲೀಸರು 5 ಲಕ್ಷ ರೂ ಇನಾಮು ಘೋಷಿಸಿದ್ದರು.

ಗ್ಯಾಂಗ್‌ಸ್ಟರ್ ಅತಿಕ್ ಅಹ್ಮದ್ ಅವರ ಸಹೋದರಿ ಆಯೆಷಾ ನೂರಿ ಅವರ ಮಗಳೊಂದಿಗೆ ಹತ್ಯೆಯಾದ ಅಸದ್ ಮದುವೆ ನಿಶ್ಚಯವಾಗಿತ್ತು ಎಂದು ಮಾಧ್ಯಮಗಳು ವರದಿ ಮಾಡಿವೆ. ನಿನ್ನೆಯಷ್ಟೇ ಹೇಳಿಕೆ ನೀಡಿದ್ದ ಅತೀಕ್ ಅಹ್ಮದ್, ಗುಜರಾತ್‌ನ ಸಬರಮತಿ ಕೇಂದ್ರ ಕಾರಾಗೃಹದಲ್ಲಿ ತನಗೆ ಕಿರುಕುಳ ನೀಡಲಾಗುತ್ತಿದೆ ಎಂದು ಆರೋಪಿಸಿದ್ದ. ಸರ್ಕಾರ ನನ್ನನ್ನು ನಾಶ ಮಾಡಿದೆ. ತನ್ನ ಕುಟುಂಬ ನಾಶ ಮಾಡಿದೆ ಎಂದು ಹೇಳಿದ್ದ. 2006ರ ಉಮೇಶ್ ಪಾಲ್ ಅಪಹರಣ ಪ್ರಕರಣದಲ್ಲಿ ಮಾರ್ಚ್ 28ರಂದು ಅಲ್ಲಿನ ನ್ಯಾಯಾಲಯ ಅಹ್ಮದ್ ಮತ್ತು ಇತರ ಇಬ್ಬರಿಗೆ ಜೀವಾವಧಿ ಶಿಕ್ಷೆ ವಿಧಿಸಿತ್ತು.

## ಇಬ್ಬರ ಬಂಧಿಸಿ ಲಕ್ಷ ರೂ ಮೌಲ್ಯದ ಗಾಂಜಾ ವಶ

ಮೈಸೂರು, ಏ.13(ಎಂಕೆ)– ಗಾಂಜಾ ಮಾರಾಟ ಮಾಡಲು ಯತ್ನಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಿರುವ ಸಿಸಿಬಿ ಪೊಲೀಸರು, ಬಂಧಿತರಿಂದ 1 ಲಕ್ಷ ರೂ.ಮೌಲ್ಯದ 3 ಕೆಜಿ 570 ಗ್ರಾಂ ತೂಕದ ಗಾಂಜಾ ವಶಪಡಿಸಿಕೊಂಡಿದ್ದಾರೆ.

ಮೈಸೂರು ನಗರ ಮಂಡಿ ಪೊಲೀಸ್ ಠಾಣೆ ವ್ಯಾಪ್ತಿಯ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ನರ್ಸ್ ಕ್ವಾಟ್ರಸ್ ಆವರಣದಲ್ಲಿ ಏ.4 ರಂದು ಗಾಂಜಾ ಮಾರಾಟ ಮಾಡಲು ಯತ್ನಿಸುತ್ತಿದ್ದ ವೇಳೆ ಇಬ್ಬರೂ ಆರೋಪಿಗಳು ಪೊಲೀಸರು ಕೈಗೆ ಸಿಕ್ಕಿಬಿದ್ದಿದ್ದಾರೆ. ಈ ಸಂಬಂಧ ಮಂಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಮೈಸೂರಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ಕಲ್ಪಿಸದ ಪ್ರಮುಖ ಪಕ್ಷಗಳು

● ಗಣೇಶ್.ಎ

ಮೈಸೂರು, ಏ.13–ಆಡು ಮುಟ್ಟದ ಸೊಪ್ಪಿಲ್ಲ ಮಹಿಳೆಯರು ಇಲ್ಲದ ಕ್ಷೇತ್ರವೇ ಇಲ್ಲ. ಆದರೆ, ಮೈಸೂರು ಜಿಲ್ಲೆಯ ರಾಜಕೀಯ ವಿಷಯದಲ್ಲಿ ಈ ಮಾತು ಸುಳ್ಳಾಗಿದೆ.

ಮೈಸೂರು ಜಿಲ್ಲೆಯ 11 ವಿಧಾನಸಭಾ ಕ್ಷೇತ್ರದಲ್ಲಿ ಪ್ರಮುಖ ರಾಜಕೀಯ ಪಕ್ಷಗಳು ಮಹಿಳೆಯರಿಗೆ ಈ ಬಾರಿ ಸ್ಪರ್ಧೆಗೆ ಎಲ್ಲಿಯೂ ಅವಕಾಶ ಮಾಡಿಕೊಟ್ಟಿಲ್ಲ. ಆದರೆ, ಆಮ್ ಆದ್ಮಿ ಮೂವರು ಮತ್ತು ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷ ಓರ್ವ ಅಭ್ಯರ್ಥಿ ಚುನಾವಣಾ ಕಣಕ್ಕೆ ಇಳಿಯಲು ಅವಕಾಶ ಕಲ್ಪಿಸಿದೆ.

ಮನೆಯಲ್ಲಿ ಅಡುಗೆ ಮಾಡುವುದರಿಂದ ಹಿಡಿದು ಅಂತರಿಕ್ಷದಲ್ಲಿ ಸಂಶೋಧನೆ ನಡೆಸುವವರೆಗೆ ಎಲ್ಲಾ ಕ್ಷೇತ್ರಗಳಲ್ಲಿಯೂ ತಮ್ಮ ಛಾಪನ್ನು ಮೂಡಿಸಿದ್ದು, ದೇಶದ ಅತ್ಯುನ್ನತ ಸ್ಥಾನ ರಾಷ್ಟ್ರಪತಿ, ಪ್ರಧಾನಿ, ಸಂಸದೆ, ಶಾಸಕಿ, ಜಿಲ್ಲಾ ಪಂಚಾಯತ್ ಸದಸ್ಯೆ ಮತ್ತು ಅಧ್ಯಕ್ಷೆ ಹಾಗೂ ನಗರ ಪಾಲಿಕೆ ಸದಸ್ಯೆ ಸೇರಿದಂತೆ ಎಲ್ಲಾ ಪ್ರಮುಖ ಹುದ್ದೆಗಳನ್ನು ಅಲಂಕರಿಸುವ ಮಹಿಳೆಯರಿಗೆ ಚುನಾವಣೆ ವಿಷಯ ಬಂದಾಗ ರಾಷ್ಟ್ರೀಯ ಪಕ್ಷಗಳು ಮನ್ನಣೆ ನೀಡುತ್ತಿಲ್ಲ.

ಮೈಸೂರು ಜಿಲ್ಲೆಯ ಚಾಮುಂಡೇಶ್ವರಿ, ವರುಣಾ, ನರಸಿಂಹರಾಜ, ಚಾಮರಾಜ, ಕೃಷ್ಣರಾಜ, ಹುಣಸೂರು, ಪಿರಿಯಾಪಟ್ಟಣ, ತಿ.ನರಸೀಪುರ, ನಂಜನಗೂಡು, ಹೆಚ್.ಡಿ. ಕೋಟೆ ಮತ್ತು ಕೆ.ಆರ್. ನಗರ ಸೇರಿದಂತೆ 11 ವಿಧಾನಸಭಾ ಕ್ಷೇತ್ರಗಳನ್ನೊಳಗೊಂಡಿದ್ದು, ಈಗಾಗಲೇ ಮೊದಲ ಪಟ್ಟಿ ಬಿಡುಗಡೆ ಮಾಡಿರುವ ಬಿಜೆಪಿ, ಜೆಡಿಎಸ್, ಕಾಂಗ್ರೆಸ್ ಯಾವ ಕ್ಷೇತ್ರದಲ್ಲಿಯೂ ಕನಿಷ್ಠ ಓರ್ವ ಮಹಿಳಾ ಅಭ್ಯರ್ಥಿಗೂ ಅವಕಾಶ ನೀಡಿಲ್ಲ.





ಚಂದ್ರಪ್ರಭಾ ಅರಸ್ ಮುಖ್ತಾರುನ್ನಿಸಾ

**ಮಹಿಳೆಯರಿಗೆ ಪಟ್ಟವಿಲ್ಲ:** ಮೊದಲ ಪಟ್ಟಿಯಲ್ಲಿ ಕಾಂಗ್ರೆಸ್ ಚಾಮುಂಡೇಶ್ವರಿಯಿಂದ ಸಿದ್ದೇಗೌಡ, ವರುಣಾ ಸಿದ್ದರಾಮಯ್ಯ, ನಂಜನಗೂಡು ದರ್ಶನ್ ಧ್ರುವನಾರಾಯಣ್, ತಿ.ನರಸೀಪುರ ಡಾ.ಹೆಚ್.ಸಿ.ಮಹದೇವಪ್ಪ, ಹೆಚ್.ಡಿ.ಕೋಟೆ ಅನಿಲ್ ಚಿಕ್ಕಮಾದು, ಕೆ.ಆರ್.ನಗರ ರವಿಶಂಕರ್, ನರಸಿಂಹರಾಜ ತನ್ವೀರ್ ಸೇಠ್, ಪಿರಿಯಾಪಟ್ಟಣ ಕೆ.ವೆಂಕಟೇಶ್ ಮತ್ತು ಹುಣಸೂರು ವಿಧಾನಸಭಾ ಕ್ಷೇತ್ರದಿಂದ ಹೆಚ್.ಪಿ.ಮಂಜುನಾಥ್‌ಗೆ ಟಿಕೆಟ್ ನೀಡಿದ್ದು, ಚಾಮರಾಜ ಮತ್ತು ಕೆ.ಆರ್. ಕ್ಷೇತ್ರದ ಅಭ್ಯರ್ಥಿಗಳನ್ನು ಎರಡನೇ ಪಟ್ಟಿಯಲ್ಲಿ ಘೋಷಿಸುವ ನಿರೀಕ್ಷೆ ಇದೆ. ಆದರೆ, ಈ ಪಟ್ಟಿಯಲ್ಲಿಯೂ ಮಹಿಳೆಯರಿಗೆ ಅವಕಾಶ ನೀಡುವ ಸಾಧ್ಯತೆ ತೀರಾ ಕಡಿಮೆ.

ಇತ್ತ ಜೆಡಿಎಸ್ ಪಕ್ಷವೂ ಮೊದಲ ಪಟ್ಟಿ ಬಿಡುಗಡೆ ಮಾಡಿದ್ದು, ಚಾಮುಂಡೇಶ್ವರಿ ಜಿ.ಟಿ.ದೇವೇಗೌಡ, ಹುಣಸೂರು ಹರೀಶ್ ಗೌಡ, ತಿ.ನರಸೀಪುರ ಅಶ್ವಿನ್ ಕುಮಾರ್, ವರುಣಾ ಅಭಿಷೇಕ್, ಕೃಷ್ಣರಾಜ ಕೆ.ವಿ.ಮಲ್ಲೇಶ್, ಪಿರಿಯಾಪಟ್ಟಣ ಕೆ.ಮಹದೇವ್ರ ಅವರಿಗೆ ಟಿಕೆಟ್ ಘೋಷಣೆ ಮಾಡಿದ್ದು, ಇಲ್ಲಿಯೂ ಮಹಿಳೆಯರಿಗೆ ಅವಕಾಶವಿಲ್ಲ.

**ಬಿಜೆಪಿಯಲ್ಲೂ ಇಲ್ಲ :** ಬಿಜೆಪಿ ಅಭ್ಯರ್ಥಿಗಳ ಎರಡು ಪಟ್ಟಿ ಬಿಡುಗಡೆಯಾಗಿದ್ದು, ಅದರಲ್ಲಿಯೂ ಮೈಸೂರು ಜಿಲ್ಲೆಯಲ್ಲಿ ಮಹಿಳಾ ಅಭ್ಯರ್ಥಿಗಳಿಗೆ ಅವಕಾಶ ನೀಡಿಲ್ಲ. ಚಾಮುಂಡೇಶ್ವರಿಯಿಂದ ಕವೀಶ್ ಗೌಡ, ನಂಜನಗೂಡು ಹರ್ಷವರ್ಧನ್, ವರುಣಾ ವಿ.ಸೋಮಣ್ಣ, ನರಸಿಂಹರಾಜ ಸಂದೇಶ್ ಸ್ವಾಮಿ, ತಿ.ನರಸೀಪುರ ಡಾ.ರೇವಣ್ಣ, ಚಾಮರಾಜ ಎಲ್.ನಾಗೇಂದ್ರ ಹುಣಸೂರು ದೇವನಹಳ್ಳಿ ಸೋಮಶೇಖರ್ ಅವರಿಗೆ ಟಿಕೆಟ್ ನೀಡಿದ್ದು, ಮಹಿಳೆಯರಿಗೆ ಮನ್ನಣೆ ನೀಡಿಲ್ಲ.

**ಜಿಲ್ಲೆಯಲ್ಲಿ ಮಹಿಳಾ ಪ್ರಾತಿನಿಧ್ಯ :** ಜಿಲ್ಲೆಯಲ್ಲಿ ಹುಣಸೂರು ಕ್ಷೇತ್ರದಿಂದ ದೇವರಾಜ ಅರಸು ಅವರ ಪುತ್ರಿ ಚಂದ್ರಪ್ರಭಾ ಅರಸು, ಅವರ ಸಹೋದರಿ ಭಾರತಿ ಅರಸ್ ಮತ್ತು ನರಸಿಂಹರಾಜ ಕ್ಷೇತ್ರದಿಂದ ಮುಖ್ತಾರುನ್ನಿಸಾ ಅವರು ಸ್ಪರ್ಧಿಸಿದ್ದರು. ಬಿಟ್ಟರೆ ಬೇರೆ ಯಾವ ಮಹಿಳಾ ಅಭ್ಯರ್ಥಿಗಳು ಈವರೆಗೂ ಸ್ಪರ್ಧಿಸಿಲ್ಲ. 1985ರಲ್ಲಿ ನರಸಿಂಹರಾಜ ಕ್ಷೇತ್ರದಿಂದ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಮುಖ್ತಾರುನ್ನಿಸ್ಸಾ ಅವರು ಬಿಜೆಪಿಯ ಮಾರುತಿ ರಾವ್ ಪವಾರ್ ವಿರುದ್ಧ 11388 ಮತಗಳನ್ನು ಪಡೆಯುವ ಮೂಲಕ ಜಯ ಗಳಿಸಿದ್ದರು. ಚಂದ್ರಪ್ರಭಾ ಅರಸು ಅವರು ಹುಣಸೂರು ಕ್ಷೇತ್ರದಿಂದ ಮೂರು ಬಾರಿ ಸ್ಪರ್ಧಿಸಿದ್ದು 1983ರಲ್ಲಿ ಹೆಚ್. ಎನ್.ಪ್ರೇಮ್ ಕುಮಾರ್ ವಿರುದ್ಧ 15363 ಮತಗಳ ಗೆಲುವು, 1985ರಲ್ಲಿ ಹೆಚ್.ಎಲ್. ತಿಮ್ಮೇಗೌಡ ವಿರುದ್ಧ 31116 ಮತಗಳ ಅಂತರದಿಂದ ಸೋಲು ಅನುಭವಿಸಿದ್ದರು. ಮತ್ತೆ 1989ರಲ್ಲಿ ಕರಿಯಪ್ಪ ಗೌಡ ಅವರ ವಿರುದ್ಧ 18349 ಮತಗಳನ್ನು ಗಳಿಸಿ ಜಯಶಾಲಿಯಾಗಿದ್ದರು.



ಜನರಿಗೆ ಮಹಿಳಾ ಅಭ್ಯರ್ಥಿಗಳು ಬೇಕಿದೆ. ಮನೆ ಮನೆ ಪ್ರಚಾರಕ್ಕೆ ತೆರಳಿದಾಗ ಮತದಾರರು ಮಹಿಳೆಯರ ಬೆಂಬಲಿಸುವ ಭರವಸೆ ನೀಡಿದ್ದಾರೆ. ಈ ವಿಷಯದಲ್ಲಿ ರಾಷ್ಟ್ರೀಯ ಪಕ್ಷಗಳ ಮನಸ್ಥಿತಿಯೂ ಬದಲಾಗಬೇಕು.

**ಮಾಳವಿಕ ಗುಬ್ಬಿವಾಣಿ,** ಎಎಪಿ ಅಭ್ಯರ್ಥಿ



ನಮ್ಮದು ಪುರುಷ ಪ್ರಧಾನ ರಾಜಕಾರಣವಾಗಿರುವುದರಿಂದ ಮಹಿಳೆಗೆ ಸೂಕ್ತ ಅವಕಾಶ ದೊರೆಯುತ್ತಿಲ್ಲ. ಮಹಿಳೆಯರಿಗೆ ರಾಜಕೀಯ ಕ್ಷೇತ್ರದಲ್ಲಿ ಮನ್ನಣೆ ನೀಡುವಲ್ಲಿ ರಾಜಕೀಯ ಪಕ್ಷಗಳ ನಾಯಕರು, ಮತದಾರರು ದೊಡ್ಡ ಮನಸ್ಸು ಮಾಡಬೇಕಿದೆ.

**-ಪ್ರೇಮಾ ಶಂಕರೇಗೌಡ,** ಜೆಡಿಎಸ್ ಟಿಕೆಟ್ ಆಕಾಂಕ್ಷಿ







ಸುಮಲತಾ ಎಸ್ ಪಿ.ಎಸ್. ಸಂಧ್ಯಾ ಧರ್ಮಶ್ರೀ ಸಿಂಗ್

**ಆರು ಮಹಿಳಾ ಮಣಿಗಳು ಕಣದಲ್ಲಿ :** ಎಲ್ಲಾ ಪಕ್ಷಗಳ ಟಿಕೆಟ್ ಆಕಾಂಕ್ಷಿಗಳ ಪಟ್ಟಿಯಲ್ಲಿ ಪುರುಷ ಅಭ್ಯರ್ಥಿಗಳ ಹೆಸರುಗಳು ಮುಂಚೂಣಿಯಲ್ಲಿದ್ದು, ಪ್ರಾದೇಶಿಕ ಪಕ್ಷವಾದ ಆಮ್ ಆದ್ಮಿಯೂ ಮೈಸೂರಿನ 11 ಕ್ಷೇತ್ರದಲ್ಲಿ ಮೂರು ಕ್ಷೇತ್ರದಲ್ಲಿ ಮಹಿಳೆಯರಿಗೆ ಟಿಕೆಟ್ ನೀಡಿದೆ. ಅದರಲ್ಲಿ ಕಳೆದ ಬಾರಿ ಚಾಮರಾಜ ಕ್ಷೇತ್ರದಿಂದ ಸ್ಪರ್ಧಿಸಿದ್ದ ಮಾಳವಿಕ ಗುಬ್ಬಿ ಮತ್ತೆ ಅದೇ ಕ್ಷೇತ್ರದಿಂದ ಟಿಕೆಟ್ ನೀಡಲಾಗಿದೆ. ನರಸಿಂಹರಾಜ ಕ್ಷೇತ್ರದಿಂದ ಧರ್ಮಶ್ರೀ ಸಿಂಗ್‌ಗೆ ಹಾಗೂ ಕೃಷ್ಣರಾಜ ಕ್ಷೇತ್ರದಿಂದ ಜಯಶ್ರೀ ಅವರಿಗೆ ಟಿಕೆಟ್ ನೀಡಲಾಗಿದೆ. ಹಾಗೇ ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷವೂ ಇಬ್ಬರನ್ನು ಮೈಸೂರಿನಲ್ಲಿ ಕಣಕ್ಕೆ ಇಳಿಸಿದ್ದು, ಚಾಮರಾಜ ಕ್ಷೇತ್ರದಿಂದ ಜಿ.ಎಸ್.ಸೀಮಾ ಹಾಗೂ ಕೃಷ್ಣರಾಜ ಕ್ಷೇತ್ರದಿಂದ ಪಿ.ಎಸ್.ಸಂಧ್ಯಾ ಅವರಿಗೆ ಟಿಕೆಟ್ ಘೋಷಣೆ ಮಾಡಿದೆ. ಹಾಗೇ ಇದೇ ಕ್ಷೇತ್ರದಿಂದ ಉತ್ತಮ ಪ್ರಜಾಕೀಯ ಪಕ್ಷದ ವತಿಯಿಂದ ಸುಮಲತಾ ಎಂಬ ಅಭ್ಯರ್ಥಿಗೆ ಅವಕಾಶ ನೀಡಿದ್ದಾರೆ. ಈ ಬಾರಿ ಆರು ಮಹಿಳೆಯರು ಪುರುಷರ ವಿರುದ್ಧ ಚುನಾವಣಾ ಕಣದಲ್ಲಿ ಸೆಣಸಲಿದ್ದು, ಮತ್ತಷ್ಟು ಮಹಿಳೆಯರು ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವ ನಿರೀಕ್ಷೆಗಳಿವೆ.

ಮೈಸೂರು ಮಿತ್ರ ಶುಕ್ರವಾರ 14 ಏಪ್ರಿಲ್ 2023

## ಬಿಜೆಪಿ ಮೊದಲ ಪಟ್ಟಿಯಲ್ಲೇ ಅವಕಾಶ ಹಿನ್ನೆಲೆ

# ತಲಕಾವೇರಿಗೆ ವಿಶೇಷ ಪೂಜೆ ಸಲ್ಲಿಸಿದ ಶಾಸಕ ಬೋಪಯ್ಯ



ಮಡಿಕೇರಿ, ಏ.13– ಬಿಜೆಪಿ ಹೈ ಕಮಾಂಡ್ ಮೊದಲ ಪಟ್ಟಿಯಲ್ಲೇ ವಿರಾಜಪೇಟೆ ವಿಧಾನ ಸಭಾ ಕ್ಷೇತ್ರಕ್ಕೆ ಅಭ್ಯರ್ಥಿಯನ್ನಾಗಿ ಪ್ರಕಟಿಸಿದ ಹಿನ್ನೆಲೆಯಲ್ಲಿ ಶಾಸಕ ಕೆ.ಜಿ.ಬೋಪಯ್ಯ, ಪಕ್ಷ ಪ್ರಮುಖರೊಂದಿಗೆ ತಲಕಾವೇರಿಗೆ ತೆರಳಿ ವಿಶೇಷ ಪೂಜೆ ಸಲ್ಲಿಸಿದರು.

ಮೊದಲಿಗೆ ಸಂಪ್ರದಾಯದಂತೆ ತ್ರಿವೇಣಿ ಸಂಗಮಕ್ಕೆ ತೆರಳಿದ ಶಾಸಕರು ಅಲ್ಲಿ ಪೂಜೆ ಸಲ್ಲಿಸಿ ಬಳಿಕ ಭಾಗ ಮಂಡಲದ ಶ್ರೀ ಭಗಂಡೇಶ್ವರ ಸನ್ನಿಧಾನಕ್ಕೆ ತೆರಳಿ ಪೂಜೆ ಸಲ್ಲಿಸಿ ಪ್ರಾರ್ಥಿಸಿದರು. ನಂತರ ತಲಕಾವೇರಿಗೆ ತೆರಳಿ ಕಾವೇರಿ ಮಾತೆಯ ತೀರ್ಥ ಕುಂಡಿಕೆ ಬಳಿ ವಿಶೇಷ ಪೂಜೆ ಸಲ್ಲಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಬೋಪಯ್ಯ, ಯಾವುದೇ ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡುವ ಮುನ್ನ ದೇವರಲ್ಲಿ ಪ್ರಾರ್ಥಿಸಿ, ಆಶೀರ್ವಾದವನ್ನು ಪಡೆಯ ಬೇಕು. ಮೊದಲ ಪಟ್ಟಿಯಲ್ಲಿಯೇ ಕೊಡಗಿನ ಎರಡೂ ಕ್ಷೇತ್ರಗಳಿಗೆ ಹಾಲಿ ಶಾಸಕರನ್ನೇ ವರಿಷ್ಠರು ಅಭ್ಯರ್ಥಿಯ ನ್ನಾಗಿ ಘೋಷಿಸಿದ್ದಾರೆ. ಆ ಹಿನ್ನೆಲೆಯಲ್ಲಿ ತಲಕಾವೇರಿ ಯಲ್ಲಿ ಪೂಜೆ ಸಲ್ಲಿಸಿದ್ದೇನೆ. ಇಂದಿನಿಂದ ಚುನಾವಣಾ ಪ್ರಚಾರ ಕಾರ್ಯವೂ ನಡೆಸಲಾಗುತ್ತದೆ ಎಂದು ಹೇಳಿದರು.

ಈ ಸಂದರ್ಭ ಶಾಸಕ ಬೋಪಯ್ಯ ಅವರ ಪತ್ನಿ ಕುಂತಿ ಬೋಪಯ್ಯ, ಪಕ್ಷ ಪ್ರಮುಖರಾದ ಗಿರೀಶ್ ಗಣಪತಿ, ಪಟ್ರಪಂಡ ರಘು ನಾಣಯ್ಯ, ಮಾಚಿಮಾಡ ರವೀಂದ್ರ, ಸುವಿನ್ ಗಣಪತಿ, ಜಿಪಂ ಮಾಜಿ ಸದಸ್ಯ ಸಿ.ಕೆ. ಬೋಪಣ್ಣ, ತಳೂರು ಕಿಶೋರ್, ಕಾಂಗೀರ ಸತೀಶ್, ಕಾಳನ ರವಿ, ವಿರಾಜಪೇಟೆ ಮತ್ತು ಭಾಗಮಂಡಲ ವ್ಯಾಪ್ತಿಯ ಪಕ್ಷ ಪ್ರಮುಖರು ಹಾಗೂ ಕಾರ್ಯಕರ್ತರು ಹಾಜರಿದ್ದರು.

## ಮೊದಲ ದಿನ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾದ ಅಭ್ಯರ್ಥಿ ನಾಮಪತ್ರ ಸಲ್ಲಿಕೆ



ಮಡಿಕೇರಿ, ಏ.13– ವಿಧಾನಸಭಾ ಚುನಾವಣೆಗೆ ನಾಮಪತ್ರ ಸಲ್ಲಿಸಲು ಇಂದು ಮೊದಲ ದಿನವಾಗಿದ್ದು, ಮಡಿಕೇರಿ ವಿಧಾನಸಭಾ ಕ್ಷೇತ್ರಕ್ಕೆ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾದ ಅಭ್ಯರ್ಥಿಯಾಗಿ ಅಮಿನ್ ಮೊಯಿಸಿನ್ ನಾಮಪತ್ರ ಸಲ್ಲಿಸಿದರು.

ನಗರದ ಎ.ವಿ. ಶಾಲೆ ಬಳಿಯಿಂದ ಜಿಲ್ಲಾಡಳಿತ ಭವನದ ಪ್ರವೇಶ ದ್ವಾರದ ವರೆಗೆ ಮೆರವಣಿಗೆಯಲ್ಲಿ ಆಗಮಿಸಿದ ಅಭ್ಯರ್ಥಿ ಅಮಿನ್ ಮೊಯಿಸಿನ್ ಮತ್ತು ಪಕ್ಷದ ಕಾರ್ಯಕರ್ತರು, ಗೆಲುವಿನ ಘೋಷಣೆಗಳನ್ನು ಮೊಳಗಿಸಿದರು. ಈ ಬಾರಿ ನಮ್ಮ ಪಕ್ಷದ ಅಭ್ಯರ್ಥಿ ವಿಜಯ ಸಾಧಿಸುತ್ತಾರೆ ಎಂದು ಪಕ್ಷದ ಕಾರ್ಯ ಕರ್ತರು ವಿಶ್ವಾಸ ವ್ಯಕ್ತಪಡಿಸಿದರು.

ನಂತರ ಮಡಿಕೇರಿ ಕ್ಷೇತ್ರದ ಚುನಾ ವಣಾ ಅಧಿಕಾರಿ ಯತೀಶ್ ಉಲ್ಲಾಳ ಅವರನ್ನು ಭೇಟಿ ಮಾಡಿ ದ್ವಿಪ್ರತಿಯಲ್ಲಿ ನಾಮಪತ್ರ ಸಲ್ಲಿಸಿದರು.

ಕೊನೆಯವರೆಗೂ ಸ್ಪರ್ಧಾ ಕಣದಲ್ಲಿ ಉಳಿಯುವುದಾಗಿ ಮಾಧ್ಯಮಗಳಿಗೆ ತಿಳಿಸಿದ ಅಮಿನ್ ಮೊಯಿಸಿನ್, ನಾಮ ಪತ್ರ ಹಿಂಪಡೆಯುವ ಸಾಧ್ಯತೆಗಳನ್ನು ಅಲ್ಲಗಳೆದರು. ಮಡಿಕೇರಿ ಸೇರಿದಂತೆ ರಾಜ್ಯದ ಒಟ್ಟು 19 ಕ್ಷೇತ್ರಗಳಲ್ಲಿ ಎಸ್‌ಡಿಪಿಐ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಆ ಎಲ್ಲಾ ಅಭ್ಯರ್ಥಿಗಳು ಇಂದು ನಾಮಪತ್ರ ಸಲ್ಲಿಸಿದ್ದಾರೆ. ಶೀಘ್ರದಲ್ಲೇ ಪಕ್ಷ 3ನೇ ಪಟ್ಟಿ ಬಿಡುಗಡೆ ಮಾಡಲಿದ್ದು, ಮತ್ತಷ್ಟು ಅಭ್ಯರ್ಥಿಗಳೂ ಸ್ಪರ್ಧಿಸಲಿದ್ದಾರೆ. ಈ ಕುರಿತು ಪಕ್ಷದ ರಾಜ್ಯ ಸಮಿತಿ ನಿರ್ಧಾರ ತೆಗೆದುಕೊಳ್ಳುತ್ತದೆ ಎಂದು ಹೇಳಿದರು.

ನಾಮಪತ್ರ ಸಲ್ಲಿಕೆಯ ಸಂದರ್ಭ ಪಕ್ಷ ಪ್ರಮುಖರಾದ ಅಬ್ದುಲ್ ಅಡ್ಕಾರ್, ನಾಗರತ್ನ, ಬಶೀರ್, ಉಸ್ಮಾನ್ ಸುಂಟಿಕೊಪ್ಪ ಉಪಸ್ಥಿತರಿದ್ದರು.

## ಏ.16, ಬೈಕ್ ಜಾಥಾದ ಮೂಲಕ ಮತದಾನ ಜಾಗೃತಿ ಅಭಿಯಾನ

ಮಡಿಕೇರಿ, ಏ.13– ಕೊಡಗು ಜಿಲ್ಲಾ ಮತದಾರರ ಶಿಕ್ಷಣ ಮತ್ತು ಸಹಭಾಗಿತ್ವ ಸಮಿತಿ ವತಿಯಿಂದ, ಮತದಾನದ ಜಾಗೃತಿ ಸಾರುವ ನಿಟ್ಟಿನಲ್ಲಿ ನಗರದ ಚೇಂಬರ್ ಆಫ್ ಕಾಮರ್ಸ್ ಮಡಿಕೇರಿ, ಸ್ವಾಮಿ ವಿವೇಕಾನಂದ ಯೂಥ್ ಮೂವ್‌ಮೆಂಟ್ ಇವರ ಸಹಯೋಗದೊಂದಿಗೆ, ಮುಂಬರುವ ವಿಧಾನಸಭಾ ಚುನಾವಣೆ ಯ ಮತದಾನ ಜಾಗೃತಿ ಅಭಿಯಾನವನ್ನು ಬೈಕ್ ಜಾಥಾದ ಮೂಲಕ ಆಯೋಜಿಸಲಾಗಿದೆ.

ಬೈಕ್ ಜಾಥಾವು ಏ.16 ರಂದು ಬೆಳಗ್ಗೆ 10 ಗಂಟೆಗೆ ನಗರದ ಬನ್ನಿಮಂಟಪ ದಿಂದ ಪ್ರಾರಂಭಗೊಂಡು ರಾಜಾಸೀಟು ಉದ್ಯಾನವನದಲ್ಲಿ ಕೊನೆಗೊಳ್ಳಲಿದೆ. ಈ ಮತದಾನ ಜಾಗೃತಿ ಬೈಕ್ ಜಾಥಾದಲ್ಲಿ ವರ್ತಕರು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮಾಜಿ ಅಧ್ಯಕ್ಷ ಎಂ.ಬಿ. ಜಯಂತ್ ನಿಧನ

ಕುಶಾಲನಗರ, ಏ.13– ಸಮೀಪದ ಕೂಡುಮಂಗಳೂರು ಗ್ರಾಮದ ನಿವಾಸಿ ತಾಲೂಕು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಮಾಜಿ ಅಧ್ಯಕ್ಷ ಎಂ.ಬಿ. ಜಯಂತ್ (76)ಗುರುವಾರ ನಿಧನರಾದರು.



ಮೃತರು ಮೂವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಇಂದು ಸಂಜೆ ಗ್ರಾಮದ ಹಿಂದೂ ರುದ್ರಭೂಮಿಯಲ್ಲಿ ನಡೆಯಿತು. ಎಂ.ಬಿ.ಜಯಂತ್ ಅವರು ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಜೈಲ್ ಬರೋ ಆಂದೋಲನದಡಿ ಜೈಲಿಗೆ ಹೋದವರಲ್ಲಿ ಒಬ್ಬರಾಗಿದ್ದರು. ಕೂಡುಮಂಗಳೂರು ಗ್ರಾಮ ಪಂಚಾಯಿತಿ ಮಾಜಿ ಸದಸ್ಯರಾಗಿ, ಕೂಡುಮಂಗಳೂರು ರಾಮೇಶ್ವರ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರಾಗಿ ಹಾಗೂ ಸದ್ಗುರು ಅಪ್ಪಯ್ಯ ಸ್ವಾಮಿ ಪ್ರೌಢಶಾಲೆಯಲ್ಲಿ ಅನೇಕ ವರ್ಷಗಳಿಂದ ಖಜಾಂಚಿಯಾಗಿ ಕಾರ್ಯನಿರ್ವಹಿಸಿದ್ದರು.

**ಅಂತಿಮದರ್ಶನ :** ಶಾಸಕ ಎಂ.ಪಿ.ಅಪ್ಪಚ್ಚುರಂಜನ್, ಬಿಜೆಪಿ ಜಿಲ್ಲಾ ಘಟಕದ ಮಾಜಿ ಅಧ್ಯಕ್ಷ ಬಿ.ಬಿ.ಭಾರತೀಶ್, ತಾಲೂಕು ಘಟಕದ ಅಧ್ಯಕ್ಷ ಮನುರೈ, ಜೆಡಿಎಸ್ ಮುಖಂಡ ನಾಪಂಡ ಮುತ್ತಪ್ಪ ಸೇರಿದಂತೆ ಅನೇಕ ಗಣ್ಯರು ಭೇಟಿ ನೀಡಿ ಅಂತಿಮ ದರ್ಶನ ಪಡೆದು ಕುಟುಂಬ ವರ್ಗಕ್ಕೆ ಸಾಂತ್ವನ ಹೇಳಿದರು.

## ಶ್ರೀ ಭಗವತಿ ದೇವಾಲಯದಲ್ಲಿ ಇಂದಿನಿಂದ ವಾರ್ಷಿಕ ಉತ್ಸವ

ನಾಪೋಕ್ಲು, ಏ.13– ಸಮೀಪದ ನೆಲಜಿ ಶ್ರೀ ಭಗವತಿ (ಪೋವದಿಯಮ್ಮೆ) ದೇವಾಲಯದಲ್ಲಿ ವಾರ್ಷಿಕ ಉತ್ಸವವು ಏ.14 ಮತ್ತು 15 ರಂದು ನಡೆಯಲಿದೆ. 14 ರಂದು ಎತ್ತು ಪೋರಾಟ, ಆಂಗೋಲ ಪೊಂಗೋಲ ಸೇವೆ, ವಿವಿಧ ಪೂಜಾ ಸೇವೆಗಳು, ಪ್ರಸಾದ ವಿತರಣೆ ಮತ್ತು ದೇವರ ನೃತ್ಯ ಬಲಿ ಇರುವುದು.

ಏ.15ರಂದು ಸಂಜೆ ಶ್ರೀ ದೇವಿಯ ಸನ್ನಿಧಿಯಲ್ಲಿ ಪೀಲಿ ಆಟ್, ದೇವಿಯ ನೃತ್ಯ ಬಲಿ ಹಾಗೂ ಪೂಜಾ ಸೇವೆಗಳು ಇರುವುದು. ಆದುದರಿಂದ ಶ್ರೀ ದೇವಿಯ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬಂದು, ಉತ್ಸವದಲ್ಲಿ ಪಾಲ್ಗೊಂಡು, ತೀರ್ಥ ಪ್ರಸಾದ ವನ್ನು ಸ್ವೀಕರಿಸಿ, ಶ್ರೀ ದೇವಿಯ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ. ನೆಲಜಿ ದೇವಾಲಯಗಳ ತಕ್ಕ ಮುಖ್ಯಸ್ಥರು ಹಾಗೂ ಆಡಳಿತ ಮಂಡಳಿಯ ಸದಸ್ಯರುಗಳು ಕೇಳಿಕೊಂಡಿದ್ದಾರೆ.

## ಆದಿ ಶ್ರೀ ಪನ್ನಂಗಾಲತ್ತಮ್ಮೆ ದೇವಿಯ ವಾರ್ಷಿಕ ಉತ್ಸವ





ನಾಪೋಕ್ಲು, ಏ.13– ಸಮೀಪದ ಕಕ್ಕಬ್ಬೆ–ಯವಕಪಾಡಿ ಗ್ರಾಮದ ಪೌರಾಣಿಕ ಹಿನ್ನೆಲೆಯ ಆದಿ ಶ್ರೀ ಪನ್ನಂಗಾಲತ್ತಮ್ಮೆ ದೇವಿಯ ವಾರ್ಷಿಕ ಉತ್ಸವವು ಶ್ರದ್ಧಾಭಕ್ತಿಯಿಂದ ನಡೆಯಿತು.


ಪಾಡಿ ಶ್ರೀ ಇಗ್ಗುತ್ತಪ್ಪ ದೇವಾಲಯದ ಸಮೀಪವಿರುವ ಅಮ್ಮಂಗೇರಿಯಲ್ಲಿ ಶ್ರೀ ದೇವಿಯ ದೇವತಾ ಕೆಲಸಕ್ಕೆ ನಿಯೋಜಿಸಲ್ಪಟ್ಟ ಕಣಿಯ ಜನಾಂಗದವರು ಶುದ್ಧ, ಶ್ರದ್ಧಾಭಕ್ತಿ ಯಿಂದ ಓಲೆ ಯಲ್ಲಿ ತಯಾರಿಸಿದ ಎರಡು ಕೊಡೆಗಳನ್ನು ದೈವ ದರ್ಶನ ಹಾಗೂ ಎತ್ತೇರಾಟ, ತಕ್ಕ ಮುಖ್ಯಸ್ಥರು, ಭಕ್ತಾದಿ ಗಳೊಂದಿಗೆ ಪನ್ನಂಗಾಲತ್ತಮ್ಮೆ ದೇವ ಸ್ಥಾನಕ್ಕೆ ಮಧ್ಯಾಹ್ನ ತರಲಾಯಿತು..

ಈ ಕೊಡೆಯಲ್ಲಿ ಪನ್ನಂಗಾಲ ತಮ್ಮೆ ನೆಲೆಸಿರುವಳೆಂದೂ, ಅಣ್ಣನ ಮನೆಯಿಂದ ಅವಳನ್ನು ತನ್ನ ಮನೆಗೆ ಕರೆತರಲಾಗುವ ಪದ್ಧತಿ ಇದೆಂಬ ನಂಬಿಕೆ ಗ್ರಾಮಸ್ಥರಲ್ಲಿ ಮತ್ತು ಭಕ್ತರಲ್ಲಿದೆ. ಅಣ್ಣ ಇಗ್ಗುತ್ತಪ್ಪನನ್ನು ಬಿಟ್ಟು ಹೋಗಲು ಮನಸ್ಸಿಲ್ಲದ ತಂಗಿಯು ಮಾರ್ಗ ಮಧ್ಯೆ ಸಿಗುವ ಭತ್ತದ ಗದ್ದೆಯಿಂದ ಹಿಂತಿರುಗಿ ಹೋಗಲು ಯತ್ನಿಸುವ ದೃಶ್ಯ ಭಕ್ತಿಭಾವದಿಂದ ಕೂಡಿರುವುದೊಂದಿಗೆ ಭಕ್ತರನ್ನು ರೋಮಾಂಚನಗೊಳಿಸುತ್ತದೆ.

ಹಿಂತಿರುಗಲು ಪ್ರಯತ್ನಿಸುವ ಕೊಡೆ ಯನ್ನು ತಡೆ ಹಿಡಿಯಲು ಎರಡು ಜನ ಕೊಡೆಗೆ ಜೋಡಿಸಿದ ಬಿದಿರನ್ನು ನೆಲಕ್ಕೆ ಒತ್ತಿ ಹಿಡಿದಿದ್ದರೂ ಆ ಕೊಡೆಯು ಗರ್‍ರನೆ ಸುತ್ತುವುದು ಮತ್ತು ಮೇಲಕ್ಕೆ ಎಳೆಯಲು ಪ್ರಯತ್ನಿಸುವುದು ಶ್ರೀ ಪನ್ನಂಗಾಲತಮ್ಮೆ ದೇವಿಯ ಕಾರಣಿಕ ಎನ್ನುವುದು ಭಕ್ತರ ನಂಬಿಕೆ. ಈ ಹಬ್ಬದ ಆರಂಭದಿಂದಲೂ ದೇವಿಯ ಅಣ್ಣವಾದ ಪಾಡಿ ಶ್ರೀ ಇಗ್ಗುತ್ತಪ್ಪ ದೇವಾಲಯದಿಂದ ತೀರ್ಥ ಪ್ರಸಾದ ತರುವ ಸಂಪ್ರದಾಯ ವಿದ್ದು ಹಬ್ಬ ನಡೆಯುವ ದಿನ ಅಣ್ಣ ದುಃಖಿತಪ್ಪನಾಗಿರುವ ಸನ್ನಿವೇಶ ಎಂಬಂತೆ ಪಾಡಿ ಇಗ್ಗುತ್ತಪ್ಪ ದೇವರ ಆದಿ ಸ್ಥಳ ಮಲ್ಮ ಬೆಟ್ಟ ಮೋಡಗಳಿಂದ ಆವೃತ್ತವಾಗಿರುತ್ತದೆ. ಇಲ್ಲಿ ಎರಡು ವರ್ಷ ಕ್ಕೊಮ್ಮೆ ದೊಡ್ಡ ಹಬ್ಬ ನಡೆಯುತ್ತಿದ್ದು, ಈ ವರ್ಷ ದೊಡ್ಡ ಹಬ್ಬವಾಗಿರುವದರಿಂದ ಅಪ ರೂಪದ ಕ್ಷಣವನ್ನು ವೀಕ್ಷಿಸಿ ಪುನೀತ ರಾಗಲು ಜನ ಸಾಗರವೇ ಇಲ್ಲಿ ನೆರೆದಿತ್ತು.

## ಇತಿಹಾಸ ಪ್ರಸಿದ್ಧ ಶ್ರೀ ಭದ್ರಕಾಳೇಶ್ವರಿ ದೇವಿಯ ಉತ್ಸವ ಆರಂಭ, ಏ.16ರಂದು ದೊಡ್ಡಹಬ್ಬ

ಮಡಿಕೇರಿ, ಏ.13– ಪ್ರತಿ ಎರಡು ವರ್ಷಗಳಿಗೊಮ್ಮೆ ನಡೆಸಿಕೊಂಡು ಬರುವ ಕೆದಕಲ್ ಗ್ರಾಮದ ಇತಿಹಾಸ ಪ್ರಸಿದ್ಧ ಶ್ರೀ ಭದ್ರಕಾಳೇಶ್ವರಿ ದೇವಿಯ ಉತ್ಸವ ಆರಂಭಗೊಂಡಿದ್ದು, ಏ.16 ರಂದು ದೊಡ್ಡಹಬ್ಬ ನಡೆಯಲಿದೆ.



ಅಂದು ಬೆಳಿಗ್ಗೆ 8.30 ಗಂಟೆಗೆ ನಾಡು ಹತ್ತುವು ದರಿಂದ ಪ್ರಾರಂಭಗೊಂಡು ಕೊಂಬಾಟ್, ಚೌರಿಯಾಟ್, ಬಿಲ್ಲಾಆಟ್ ನಂತರ ದೇವರಿಗೆ ಭಂಡಾರ, ಹರಕೆ ಹಾಕುವುದು, ಭಕ್ತಾದಿಗಳಿಗೆ ದೇವರ ಪ್ರಸಾದ ವಿನಿಯೋಗ, ಬಾಳೆಸೂರೆ ಎಸೆಯುವುದು, ಕಾಳೆ ಓಡಿಸುವುದು, ತೆಂಗಿನಕಾಯಿ ಗುಂಡು ಹೊಡೆಯುವುದು ಹಾಗೂ ದೇವಿಯ ಇತರೆ ಕೈಂಕರ್ಯ ನಡೆಯಲಿದೆ. ಏ.17ರಂದು ಚಿಕ್ಕಹಬ್ಬ ನಡೆಯಲಿದ್ದು, ಮಧ್ಯಾಹ್ನ 2 ಗಂಟೆಗೆ ಮೂರು ತರಹದ ಕುಣಿತ, ಭಂಡಾರ ಹಾಕುವುದು ಮತ್ತು ಕೊಂಬು ಅರ್ಪಿಸುವುದು. ಏ.18ರಂದು ಭಂಡಾರ ಹಾಕುವುದು, ತಪ್ಪು ಹಣ ಒಪ್ಪಿಸುವುದು, ಶುದ್ಧ ಕಲಶ ಹಾಗೂ ಮಹಾ ಪೂಜೆಯೊಂದಿಗೆ ಉತ್ಸವ ಮುಕ್ತಾಯವಾಗಲಿದೆ ಎಂದು ಅಧ್ಯಕ್ಷ ಮುಕ್ಕಾಟಿರ ಅಶ್ವಿನ್ ಹಾಗೂ ತಕ್ಕ ಮುಖ್ಯಸ್ಥರು ಮತ್ತು ದೇವಸ್ಥಾನ ಆಡಳಿತ ಮಂಡಳಿ ಪದಾಧಿಕಾರಿಗಳು ತಿಳಿಸಿದ್ದಾರೆ.

## ಸಿಎನ್‌ಸಿಯಿಂದ ಕೊಡವ ಹೊಸ ವರ್ಷಾಚರಣೆ

### ಇಂದಿನಿಂದ ವಿವಿಧ ಕಾರ್ಯಕ್ರಮಗಳು

ಮಡಿಕೇರಿ, ಏ.13– ಕೊಡವ ನ್ಯಾಷ ನಲ್ ಕೌನ್ಸಿಲ್ ವತಿಯಿಂದ ಕೊಡವ ಹೊಸ ವರ್ಷಾಚರಣೆ ಎಡ್ಮ್ಯಾರ್ ಪ್ರಯುಕ್ತ ಏ.14 ಮತ್ತು 15ರಂದು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದಾಗಿ ಸಿಎನ್‌ಸಿ ಅಧ್ಯಕ್ಷ ಎನ್.ಯು. ನಾಚಪ್ಪ ತಿಳಿಸಿದ್ದಾರೆ.



ಹೊಸ ವರ್ಷವನ್ನು ಕಳೆದ 28 ವರ್ಷ ಗಳಿಂದ ಸಿಎನ್‌ಸಿ ಸಂಘಟನೆ ಸಾರ್ವಜನಿಕ ಕಾರ್ಯಕ್ರಮವಾಗಿ ನಡೆಸಿಕೊಂಡು ಬರು ತ್ತಿದೆ. 29ನೇ ಆಚರಣೆಯಾಗಿ ಏ.14ರಂದು ಸಂಜೆ ಗೋಣಿಕೊಪ್ಪಲಿನಲ್ಲಿ ಪಂಜಿನ ಮೆರವಣಿಗೆ ನಡೆಸಲಾಗುವುದು. ಆ ಮೂಲಕ ಕೊಡವ ಬುಡಕಟ್ಟು ಜನಾಂಗದ ಪರವಾದ ಹಕ್ಕೊತ್ತಾಯಗಳನ್ನು ಮಂಡಿಸ ಲಾಗುವುದು ಎಂದು ಹೇಳಿದ್ದಾರೆ.

ಏ.15ರಂದು ಬೆಳಿಗ್ಗೆ ಬೆಟ್ಟತ್ತೂರು ಗ್ರಾಮದ ಕೂಪದಿರ ಮೋಹನ್ ಅವರ ಗದ್ದೆಯಲ್ಲಿ ಉಳುಮೆ ಕಾರ್ಯ ಮಾಡಿ ಭೂದೇವಿಗೆ ನಮಿಸಲಾಗುವುದು. ದೇವಟ್ ಪರಂಬುವಿನ ಕೊಡವ ನರಮೇಧದ ಸ್ಮಾರಕದಲ್ಲಿ ಪುಷ್ಪ ನಮನ ಸಲ್ಲಿಸಿ ನಾಲ್ನಾಡ್ ಅರಮನೆ ಮತ್ತು ಮಡಿಕೇರಿ ಕೋಟೆ ಆವರಣದಲ್ಲಿ ಹತ್ಯೆಗೀಡಾದ ಕೊಡವರ ಪರವಾಗಿ ಪ್ರಾರ್ಥಿಸಲಾಗುವುದು. ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಜನ್ಮದಿನವನ್ನು ಕೂಡ ಆಚರಿಸಲಾ ಗುವುದು ಎಂದು ನಾಚಪ್ಪ ತಿಳಿಸಿದ್ದಾರೆ.

# ಬೆಂಬಲಿಗರ ಸಭೆಯಲ್ಲಿ ಬಿಜೆಪಿ ಟಿಕೆಟ್ ವಂಚಿತೆ ನಾಗಶ್ರೀ ಪ್ರತಾಪ್ ಕಣ್ಣೀರು

## ಅಧಿಕಾರ ಬಯಸಿ ರಾಜಕೀಯಕ್ಕೆ ಬಂದಿಲ್ಲ, ಬೆಂಬಲಿಗರು, ಹಿತೈಷಿಗಳ ಹಿತ ಮುಖ್ಯ

▸ ಬಂಡಾಯವಾಗಿ ಸ್ಪರ್ಧಿಸುವಂತೆ ಒತ್ತಾಯ ▸ ಎರಡು ದಿನದಲ್ಲಿ ನಿರ್ಧಾರ ತಿಳಿಸುವೆ





> ನನಗೆ ಅಧಿಕಾರ ಇರಲಿ, ಇಲ್ಲದಿರಲಿ. ನಾನು ನಿಮ್ಮ ಜೊತೆ ಇರುತ್ತೇನೆ. ನಿಮ್ಮೆಲ್ಲರ ಕಷ್ಟ–ಸುಖಗಳಲ್ಲಿ ಭಾಗಿಯಾಗುತ್ತೇನೆ. ನಿಮ್ಮೆಲ್ಲರ ಬೆಂಬಲ ನನಗೆ ಇದೇ ರೀತಿಯಾಗಿ ಮುಂದುವರಿಯಲಿ.
>
> -ನಾಗಶ್ರೀ ಪ್ರತಾಪ್, ಬಿಜೆಪಿ ಟಿಕೆಟ್ ವಂಚಿತೆ

**ಚಾಮರಾಜನಗರ, ಏ.13– ಚಾಮ ರಾಜನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಪಕ್ಷದ ಪ್ರಬಲ ಟಿಕೆಟ್ ಆಕಾಂಕ್ಷಿ, ಮಾಜಿ ಜಿಪಂ ಅಧ್ಯಕ್ಷೆ ನಾಗಶ್ರೀ ಪ್ರತಾಪ್ ಅವರು ಕಣ್ಣೀರು ಹಾಕಿದ್ದಾರೆ.**

ನಗರದ ಭ್ರಮರಾಂಬ ಕಲ್ಯಾಣ ಮಂಟಪ ದಲ್ಲಿ ಗುರುವಾರ ನಡೆದ ತಮ್ಮ ಬೆಂಬಲಿ ಗರ ಹಾಗೂ ಹಿತೈಷಿಗಳ ಸಭೆಯಲ್ಲಿ ತಮಗೆ ವ್ಯಕ್ತವಾದ ಅಪಾರ ಬೆಂಬಲವನ್ನು ಕಂಡು ಕಣ್ಣೀರು ಹಾಕುತ್ತಾ, ನಾನು ರಾಜಕೀಯಕ್ಕೆ ಅಧಿಕಾರ ಬಯಸಿ ಬಂದಿಲ್ಲ. ನನಗೆ ನನ್ನ ಹಿತಕ್ಕಿಂತ ನನ್ನ ಬೆಂಬಲಿಗರು, ಹಿತೈಷಿಗಳ ಹಿತ ಮುಖ್ಯ ಎಂದರು.

ಪಕ್ಷೇತರವಾಗಿ ಸ್ಪರ್ಧಿಸುವಂತೆ ತಮ್ಮ ಬೆಂಬಲಿಗರು ಸಭೆಯಲ್ಲಿ ಒತ್ತಾಯ ಮಾಡಿದಾಗ, ನನಗೆ ಎರಡು ದಿನಗಳ ಕಾಲಾವಕಾಶ ನೀಡಿ, ನನ್ನ ನಿರ್ಧಾರ ವನ್ನು ತಿಳಿಸುತ್ತೇನೆ ಎಂದು ಹೇಳುತ್ತಿದ್ದಂತೆಯೇ ಗಳಗಳನೆ ಅಳಲು ಆರಂಭಿಸಿದರು. ಇದನ್ನು ಕಂಡ ಬೆಂಬಲಿಗರು, ಹಿತೈಷಿಗಳು ಬಿಜೆಪಿ ವರಿಷ್ಠರ ವಿರುದ್ಧ ಆಕ್ರೋಶ ವ್ಯಕ್ತಪಡಿ ಸಿದರಲ್ಲದೆ, ತಮ್ಮ ಮೆಚ್ಚಿನ ನಾಯಕಿ ಪರ ಘೋಷಣೆಗಳನ್ನು ಕೂಗಿದರು.

ನಮ್ಮ ಕುಟುಂಬ ರಾಜಕಾರಣಿಗಳ ಕುಟುಂಬ ಆಗಿದ್ದರೂ ಸಹ ನಾನು ರಾಜ ಕೀಯದಿಂದ ದೂರ ಉಳಿದಿದ್ದೆ. ನಮ್ಮ ತಂದೆ ಸಿ. ಗುರುಸ್ವಾಮಿ ಹಾಗೂ ಬೆಂಬಲಿ ಗರ ಒತ್ತಾಯದ ಮೇರೆಗೆ ರಾಜಕೀಯಕ್ಕೆ ಬಂದಿದ್ದೇನೆ. ನನಗೆ ಅಧಿಕಾರ ಮುಖ್ಯ ಅಲ್ಲ. ನನ್ನನ್ನು ನಂಬಿರುವ ಹಿತೈಷಿಗಳು, ಬೆಂಬಲಿಗರ ಹಿತ ಮುಖ್ಯವಾಗಿದೆ ಎಂದರು.

ನನಗೆ ಈಗ ಟಿಕೆಟ್ ತಪ್ಪಿರುವುದರಿಂದ ಯಾರೊಬ್ಬರನ್ನು ಹಾಗೂ ಪಕ್ಷವನ್ನು ದೂಷಿಸುವುದು ಬೇಡ. ಎಲ್ಲಾ ರೀತಿಯ ಸಾಧಕ– ಬಾಧಕಗಳನ್ನು ನೋಡಿಕೊಂಡು ಈ ಬಗ್ಗೆ ಚರ್ಚಿಸಿ ಎಲ್ಲರ ಹಿತದೃಷ್ಟಿ ಯಿಂದ ಒಳ್ಳೆಯ ತೀರ್ಮಾನ ಕೈಗೊಳ್ಳುವ ಅವಶ್ಯಕತೆ ಇದೆ. ಹೀಗಾಗಿ, ನನಗೆ ಎರಡು ದಿನಗಳ ಕಾಲಾವಕಾಶ ನೀಡುವಂತೆ ನಾಗಶ್ರೀ ಪ್ರತಾಪ್ ತಮ್ಮ ಬೆಂಬಲಿಗರಲ್ಲಿ ಮನವಿ ಮಾಡಿದರು. ಈ ಮನವಿಗೆ ಸಭೆಯಲ್ಲಿ ಪಾಲ್ಗೊಂಡಿದ್ದ ನೂರಾರು ಬೆಂಬಲಿಗರು ಹಾಗೂ ಹಿತೈಷಿಗಳು ಸಮ್ಮತಿಸಿದರು.

**ಸ್ಪರ್ಧಿಸಲು ಒತ್ತಾಯ:** ಇದಕ್ಕೂ ಮೊದಲು ಸಭೆಯಲ್ಲಿ ಮಾತನಾಡಿದ ನಾಗಶ್ರೀ ಅವರ ಅನೇಕ ಬೆಂಬಲಿಗರು ಟಿಕೆಟ್ ಸಿಗದಿದ್ದಕ್ಕೆ ಬೇಸರಗೊಳ್ಳಬೇಡಿ, ನಿಮ್ಮ ಜೊತೆ ನಾವಿದ್ದೇವೆ. ಸಭೆಗೆ ಬರುವುದಕ್ಕೆ ಆಗದ ಇನ್ನೂ ಸಾವಿರಾರು ಬೆಂಬಲಿಗರು ಇದ್ದಾರೆ. ನೀವು ಪಕ್ಷೇತರರಾಗಿ ಸ್ಪರ್ಧಿಸಿ ಖರ್ಚನ್ನು ನಾವೆಲ್ಲರೂ ಭರಿಸುತ್ತೇವೆ. ನಿಮ್ಮ ಶಕ್ತಿ ಯನ್ನು ತೋರ್ಪಡಿಸಬೇಕು ಎಂದರು.

ಮತ್ತೆ ಕೆಲವರು ದುಡುಕಿನ ನಿರ್ಧಾರ ಕೈಗೊಳ್ಳುವುದು ಬೇಡ. ಇನ್ನೂ ಕಾಲ ಮಿಂಚಿಲ್ಲ. ಪಕ್ಷದ ವರಿಷ್ಠರ ಬಳಿಗೆ ಹೋಗಿ ಟಿಕೆಟ್ ಕೇಳೋಣ, ನಂತರ ನಿರ್ಧಾರ ಕೈಗೊಳ್ಳೋಣ ಎಂದರು.

ಕೆಲವರು ದುಡುಕಿನ ನಿರ್ಧಾರ ಕೈಗೊಳ್ಳು ವುದು ಸರಿಯಲ್ಲ. ಈ ಬಗ್ಗೆ ಎಲ್ಲಾ ರೀತಿಯ ಸಾಧಕ– ಬಾಧಕಗಳನ್ನು ಚರ್ಚಿಸಿ ಒಳ್ಳೆಯ ನಿರ್ಧಾರ ಕೈಗೊಳ್ಳಿ. ನೀವು ತೆಗೆದುಕೊಳ್ಳುವ ನಿರ್ಧಾರಕ್ಕೆ ನಾವೆಲ್ಲರೂ ಬದ್ಧರಾಗಿರುತ್ತೇವೆ ಎಂದರು. ಇದಕ್ಕೆ ಸಭೆಯಲ್ಲಿ ಪಾಲ್ಗೊಂಡಿದ್ದವರು ಚಪ್ಪಾಳೆ ತಟ್ಟುವ ಮೂಲಕ ಸಮ್ಮತಿ ಸೂಚಿಸಿದರು.

## ನಾಗಶ್ರೀ ಪ್ರತಾಪ್ ನಿವಾಸಕ್ಕೆ ಸೋಮಣ್ಣ ಭೇಟಿ

### ಟಿಕೆಟ್ ಪಡೆಯಲು ಅದೃಷ್ಟ, ಹಣೆಬರಹ ಚೆನ್ನಾಗಿರಬೇಕು: ಸೋಮಣ್ಣ



ಚಾಮರಾಜನಗರ, ಏ.13– ಚಾಮ ರಾಜನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಟಿಕೆಟ್ ವಂಚಿತೆ ಜಿ. ನಾಗಶ್ರೀ ಪ್ರತಾಪ್ ಅವರ ಮನೆಗೆ ಬಿಜೆಪಿ ಅಭ್ಯರ್ಥಿ ಸಚಿವ ವಿ. ಸೋಮಣ್ಣ ಅವರು ಗುರುವಾರ ಸಂಜೆ ಭೇಟಿ ನೀಡಿದರು.

ನಗರದ ಕರಿನಂಜನಪುರ ರಸ್ತೆಯಲ್ಲಿ ರುವ ನಾಗಶ್ರೀ ಅವರ ಮನೆಗೆ ಭೇಟಿ ನೀಡಿದ್ದ ಸೋಮಣ್ಣ ಸುಮಾರು ಅರ್ಧ ಗಂಟೆಗಳ ಕಾಲ ಇದ್ದರು. ಈ ವೇಳೆ ಮಾತನಾಡಿದ ಮೈಸೂರು ವಿಭಾಗದ ಚುನಾವಣಾ ಉಸ್ತುವಾರಿ ವೈ.ವಿ. ರವಿಶಂಕರ್ ಟಿಕೆಟ್ ಸಿಗದಿದ್ದಕ್ಕೆ ತಾಳ್ಮೆ ಕಳೆದುಕೊಳ್ಳಬೇಡಿ. ಪಕ್ಷ ನಿಮ್ಮನ್ನು ಮುಂದಿನ ದಿನಗಳಲ್ಲಿ ಪರಿಗಣಿಸಲಿದೆ ಎಂದು ಮನವಿ ಮಾಡಿದರು.

ಈ ವೇಳೆ ನಾಗಶ್ರೀ ಅವರು ಎರಡು ದಿನಗಳಲ್ಲಿ ನನ್ನ ನಿರ್ಧಾರ ತಿಳಿಸುವು ದಾಗಿ ಹೇಳಿದರು. ಈ ಹಂತದಲ್ಲಿ ಮಾತ ನಾಡಿದ ಸೋಮಣ್ಣ, ಟಿಕೆಟ್ ಪಡೆಯಲು ಅದೃಷ್ಟ, ಹಣೆಬರಹ ಚೆನ್ನಾಗಿರಬೇಕು. ನಾನು ನೂರಾರು ಜನರನ್ನು ರಾಜಕೀಯ ದಲ್ಲಿ ಬೆಳೆಸಿದ್ದೇನೆ. ಆ ನಿಮಿಷಕ್ಕಾಗಿ ಅವರು ನನ್ನನ್ನು ಗುರುತಿಸಿ ಎರಡು ಕ್ಷೇತ್ರದಲ್ಲಿ ಟಿಕೆಟ್ ನೀಡಿದ್ದಾರೆ. ಚಾಮರಾಜನಗರ ಜಿಲ್ಲೆಗೆ ನಾನು ಬಂದು 26 ವರ್ಷವಾಯಿತು. ಜಿಲ್ಲೆಯ ಅಭಿವೃದ್ಧಿ ಮುಖ್ಯ ನನ್ನ ಸಾಮರ್ಥ್ಯ ನೋಡಿ ಪಕ್ಷ ನನಗೆ ಟಿಕೆಟ್ ನೀಡಿದೆ. ಒಳ್ಳೆಯ ದಾಗಬೇಕಾದರೆ ಬನ್ನಿ. ನಾನು ಏನು ಮಾಡಬೇಕು ಅದನ್ನು ಮಾಡಿದ್ದೀನಿ. ನನ್ನಿಂದ ಯಾರಿಗೂ ಅನಾನುಕೂಲ, ಅಪಚಾರ ಆಗಿಲ್ಲ. ಜನರ ಬಳಿಗೆ ಹೋಗೋಣ ಪಾರ್ಟಿ ಆದೇಶ ಪಾಲಿಸೋಣ. ತೀರ್ಮಾನ ನಿಮಗೆ ಬಿಟ್ಟಿದ್ದು ಎಂದು ಹೇಳಿ ಮನೆಯಿಂದ ಹೊರಟರು.

ನಂತರ ಈ ಬಗ್ಗೆ ಸುದ್ದಿಗಾರ ರೊಂದಿಗೆ ಪ್ರತಿಕ್ರಿಯೆ ನೀಡಲು ಸೋಮಣ್ಣ ನಿರಾಕರಿಸಿದರು. ಇದೇ ರೀತಿ ನಾಗಶ್ರೀ ಪ್ರತಾಪ್ ಅವರೂ ಕೂಡ ಯಾವುದೇ ಪ್ರತಿಕ್ರಿಯೆಯನ್ನು ನೀಡಲು ನಿರಾಕರಿಸಿ, ಮನೆಯೊಳಗೆ ತೆರಳಿದರು. ಜಿಲ್ಲೆಯ ಚುನಾವಣಾ ಉಸ್ತುವಾರಿ ಕೋಟೆ ಎಂ. ಶಿವಣ್ಣ ಪಕ್ಷದ ಜಿಲ್ಲಾ ಅಧ್ಯಕ್ಷ ನಾರಾಯಣ್ ಪ್ರಸಾದ್, ಮುಖಂಡರಾದ ಎಂ. ರಾಮ ಚಂದ್ರ ಚಾಮುಲ್ ನಿರ್ದೇಶಕ ಎಚ್.ಎಸ್. ಬಸವರಾಜು, ಅರಕಲವಾಡಿ ಮಹೇಶ್, ಅಶೋಕ್, ಸಮಿತ್ ಕುಮಾರ್, ಅರಕಲ ವಾಡಿ ರವಿಕುಮಾರ್, ಎಣಗುಂಬ ಗುರು ಸ್ವಾಮಿ, ಶಿವಪುರ ಸುರೇಶ್, ಕೊತ್ತಲವಾಡಿ ನಾಗಪ್ಪ ಇತರರು ಉಪಸ್ಥಿತರಿದ್ದರು.

## ಗುಂಡ್ಲುಪೇಟೆ ಕಾಂಗ್ರೆಸ್ ಅಭ್ಯರ್ಥಿ ನಾಮಪತ್ರ ಸಲ್ಲಿಕೆ

ಗುಂಡ್ಲುಪೇಟೆ, ಏ.13– ಇಲ್ಲಿನ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಹೆಚ್.ಎಂ.ಗಣೇಶ್ ಪ್ರಸಾದ್ ತಮ್ಮ ಸಹಸ್ರಾರು ಬೆಂಬಲಿಗರ ಜತೆಗೂಡಿ ನಾಮಪತ್ರ ಸಲ್ಲಿಸಿದರು.



ಗುರುವಾರ ಬೆಳಗ್ಗೆ ಹಾಲಹಳ್ಳಿ ಸಮೀಪದ ತೋಟದಲ್ಲಿರುವ ಅವರ ತಂದೆ ಮಾಜಿ ಸಚಿವ ದಿ.ಮಹದೇವಪ್ರಸಾದ್ ಅವರ ಸಮಾಧಿಗೆ ನಮಿಸಿದ ನಂತರ ತಾಲೂಕಿನ ಸ್ಕಂದಗಿರಿ ಪಾರ್ವತಿಬೆಟ್ಟಕ್ಕೆ ಪತ್ನಿ ವಿದ್ಯಾ ಗಣೇಶ್ ಜತೆಗೂಡಿ ಪಾರ್ವತಾಂಬೆ ಮತ್ತು ಸೋಮೇಶ್ವರ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿದರು.

ನಂತರ ನಾಮಪತ್ರ ಸಲ್ಲಿಕೆಗೆ ತಾಲೂಕಿನ ನಾನಾ ಗ್ರಾಮಗಳಿಂದ ಆಗಮಿಸಿದ್ದ ಸಹ ಸ್ರಾರು ಕಾಂಗ್ರೆಸ್ ಕಾರ್ಯಕರ್ತರು, ಅಭಿಮಾನಿ ಗಳು ಗಣೇಶಪ್ರಸಾದ್ ಅವರಿಗೆ ಜೈಕಾರ ಕೂಗಿದರು. ಭಾರೀ ಜನಸ್ತೋಮದಿಂದ ರಾಷ್ಟ್ರೀಯ ಹೆದ್ದಾರಿ ಕೆಲಕಾಲ ಬಂದ್ ಆಗಿತ್ತು. ಪಕ್ಷದ ಕಚೇರಿಯಿಂದ ತೆರೆದ ಜೀಪ್ ಮೇಲೆ ನಿಂತು ಅಪಾರ ಬೆಂಬಲಿಗರ ಜತೆ ಮೆರವಣಿಗೆ ಮೂಲಕ ತಾಲೂಕು ಕಚೇರಿಗೆ ಆಗಮಿಸಿದರು.

ತಾಲೂಕು ಕಚೇರಿಯ ಸಭಾಂಗಣ ದಲ್ಲಿರುವ ಚುನಾವಣಾಧಿಕಾರಿ ಕಚೇರಿಗೆ ತೆರಳಿ ಚುನಾವಣಾಧಿಕಾರಿ ಬಿ.ಮಲ್ಲಿಕಾರ್ಜುನ ಅವರಿಗೆ ತಮ್ಮ ನಾಮಪತ್ರ ಸಲ್ಲಿಸಿದರು. ನಂತರ ಪಕ್ಷದ ಕಚೇರಿಯಲ್ಲಿ ಕಾರ್ಯ ಕರ್ತರನ್ನು ಉದ್ದೇಶಿಸಿ ಮಾತನಾಡಿದ ಅವರು ಭ್ರಷ್ಟಾಚಾರ ಮುಕ್ತ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರವನ್ನು ಮಾಡುವುದು ನನ್ನ ಗುರಿ. ಯಾವುದೇ ಕಾರಣಕ್ಕೂ ಈ ಕ್ಷೇತ್ರ ಅಭಿವೃದ್ಧಿ ಕುಂಠಿತವಾಗಲು ಬಿಡುವುದಿಲ್ಲ. ಮಾದರಿ ಕ್ಷೇತ್ರವನ್ನಾಗಿಸಲು ಪಣ ತೊಟ್ಟಿದ್ದೇನೆ. ದಯಮಾಡಿ ಮತ ನೀಡುವುದರೊಂದಿಗೆ ಕ್ಷೇತ್ರದ ಜನತೆ ನನಗೆ ಆಶೀರ್ವಾದ ಮಾಡಿ ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಶಾಸಕ ಯತೀಂದ್ರ ಸಿದ್ದರಾಮಯ್ಯ, ಚಾಮುಲ್ ನಿರ್ದೇಶಕ ಹೆಚ್.ಎಸ್.ನಂಜುಂಡಪ್ರಸಾದ್, ಮಹ ದೇವಪ್ರಸಾದ್ ಸಹೋದರಿ ಪ್ರೇಮಾ, ಮಾಜಿ ಸಂಸದ ಎ.ಸಿದ್ದರಾಜು, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ಮುನಿರಾಜು, ಕಾಡಾ ಮಾಜಿ ಅಧ್ಯಕ್ಷ ಹಂಗಳ ನಂಜಪ್ಪ ಇತರರು ಇದ್ದರು.

## 2 ತಲೆ ಹಾವು ಸಾಗಣೆ: ಆರೋಪಿ ಬಂಧನ

ಕೊಳ್ಳೇಗಾಲ, ಏ.13– ಮಣ್ಣು ಮುಕ್ಕ ಎಂಬ ಹೆಸರಿನ ಎರಡು ತಲೆಗ ಳುಳ್ಳ ಹಾವೊಂದನ್ನ ಅಕ್ರಮವಾಗಿ ಮಾರಾಟ ಮಾಡಿ ಹಣ ಗಳಿಸುವ ಉದ್ದೇಶದಿಂದ ಮಾರಾಟಕ್ಕೆ ತೆಗೆದುಕೊಂಡು ತೆರಳುತ್ತಿದ್ದ ಆರೋಪಿಯೋರ್ವನನ್ನು ಸಿಐಡಿ ಅರಣ್ಯ ಸಂಚಾರಿ ದಳದ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಡಿ ಜೆ ಹಳ್ಳಿ, ಬೆಂಗಳೂರು ಉತ್ತರದ ಚಂದ್ರಮೌಳೇಶ್ವರ ಬಂಧಿತ ಆರೋಪಿ. ಈತ ಹನೂರು ತಾಲೂಕಿನ ಹುಲುಸು ಗುಡ್ಡೆ ಬೋರೆಯ ಸಮೀಪ ಮಾರಾಟ ಮಾಡಲು ಕೊಂಡೊಯ್ಯುತ್ತಿದ್ದ ಎನ್ನಲಾಗಿದೆ. ಖಚಿತ ಮಾಹಿತಿ ಹಿನ್ನೆಲೆ ಅರಣ್ಯ ಸಂಚಾರಿ ದಳದ ಪೊಲೀಸರು ಕಾರ್ಯಾಚರಣೆ ನಡೆಸಿ ಆರೋಪಿ ಯನ್ನು ಬಂಧಿಸಿ ಬಂಧಿತನಿಂದ ಜೀವಂತ ಹಾವು, ಮೊಬೈಲ್ ಸೇರಿ ದಂತೆ ಇನ್ನಿತರೆ ವಸ್ತುಗಳನ್ನು ವಶಕ್ಕೆ ಪಡೆದು ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿ ಪ್ರಕರಣ ದಾಖಲಿಸಿ ಮುಂದಿನ ಕ್ರಮಕೈಗೊಂಡಿದ್ದಾರೆ.

## ಮೊದಲ ದಿನ ಇಬ್ಬರು ನಾಮಪತ್ರ ಸಲ್ಲಿಕೆ

ಚಾಮರಾಜನಗರ, ಏ.13– ವಿಧಾನಸಭಾ ಚುನಾವಣೆಗೆ ನಾಮಪತ್ರ ಸಲ್ಲಿಸಲು ಮೊದಲ ದಿನವಾದ ಇಂದು ಜಿಲ್ಲೆಯಲ್ಲಿ ಒಟ್ಟು ಇಬ್ಬರು ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ.

ಚಾಮರಾಜನಗರ ವಿಧಾನಸಭಾ ಕ್ಷೇತ್ರದಿಂದ ಸಮಾಜವಾದಿ ಜನತಾ ಪಾರ್ಟಿ (ಕರ್ನಾಟಕ)ಯಿಂದ ಜಿ.ಎಂ. ಗಾಡ್ಕರ್ ಅವರು ನಾಮಪತ್ರ ಸಲ್ಲಿಸಿದ್ದಾರೆ. ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದಿಂದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದಿಂದ ಹೆಚ್.ಎಂ. ಗಣೇಶ್ ಪ್ರಸಾದ್ ಅವರು ಮೂರು ನಾಮಪತ್ರ ಸಲ್ಲಿಸಿದ್ದಾರೆ. ಒಟ್ಟಾರೆ ಇಬ್ಬರು ಅಭ್ಯರ್ಥಿಗಳಿಂದ ನಾಲ್ಕು ನಾಮಪತ್ರಗಳು ಸಲ್ಲಿಕೆಯಾಗಿವೆ. ಹನೂರು ಹಾಗೂ ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದಿಂದ ಯಾವುದೇ ನಾಮಪತ್ರ ಇಂದು ಸಲ್ಲಿಕೆಯಾಗಿಲ್ಲ ಎಂದು ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.

## ಬಿಎಸ್ಪಿ ಬಗ್ಗೆ ಶಾಸಕರಿಂದ ಅಪಪ್ರಚಾರ: ಅಭ್ಯರ್ಥಿ ಕಮಲ್ ದೂರು

ಕೊಳ್ಳೇಗಾಲ, ಏ.13– ಕೊಳ್ಳೇಗಾಲ ಶಾಸಕ ಮತ್ತು ಬಿಜೆಪಿ ಅಭ್ಯರ್ಥಿಯಾಗಿರುವ ಶಾಸಕ ಎನ್. ಮಹೇಶ್ ಅವರು ಬಿಎಸ್ಪಿ, ಬಿಜೆಪಿ ಜೊತೆ ವಿಲೀನವಾಗಿದೆ ಎಂಬಿತ್ಯಾದಿ ಸುಳ್ಳು ಆರೋಪಗಳನ್ನು ಮಾಡುತ್ತಿದ್ದು, ಈ ಸಂಬಂಧ ಕ್ರಮ ಕೈಗೊಳ್ಳಿ ಎಂದು ಚುನಾವಣಾಧಿಕಾರಿ ಗೀತಾ ಹುಡೇದ್ ಅವರಿಗೆ ಲಿಖಿತ ದೂರು ಸಲ್ಲಿಸಿದ್ದಾರೆ.

ಶಾಸಕರು ನಮ್ಮ ಪಕ್ಷದ ಬಗ್ಗೆ ಇಲ್ಲಸಲ್ಲದ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ದಾಖಲೆಯುಳ್ಳ ವಿಡಿಯೋ ವೊಂದನ್ನು ಲಿಖಿತ ದೂರಿನೊಂದಿಗೆ, ಸಲ್ಲಿಸಿದ್ದು ಸೂಕ್ತ ಕ್ರಮಕೈಗೊಳ್ಳುವಂತೆ ಮನವಿ ಮಾಡಿದ್ದಾರೆ.



**ಚಾಮರಾಜನಗರ ವಿಧಾನಸಭಾ ಕ್ಷೇತ್ರದಿಂದ ಸಮಾಜವಾದಿ ಜನತಾ ಪಾರ್ಟಿಯ ಅಭ್ಯರ್ಥಿಯಾಗಿ ಜಿ.ಎಂ. ಗಾಡ್ಕರ್ ತಮ್ಮ ಉಮೇದುವಾರಿಕೆಯನ್ನು ತಹಸೀಲ್ದಾರ್ ಕಚೇರಿಯಲ್ಲಿ ಚುನಾವಣಾಧಿಕಾರಿ ಯೋಗಾನಂದ ಅವರಿಗೆ ಸಲ್ಲಿಸಿದರು. ಸಮಾಜವಾದಿ ಜನತಾ ಪಾರ್ಟಿಯ ರಾಜ್ಯ ಉಪಾಧ್ಯಕ್ಷ ಮಹದೇವಶೆಟ್ಟಿ, ರಾಜ್ಯ ಪ್ರಧಾನ ಕಾರ್ಯ ದರ್ಶಿ ರಂಗಸ್ವಾಮಿ, ಜಿಲ್ಲಾಧ್ಯಕ್ಷ ಪರಶಿವ ಮೂರ್ತಿ, ಮುಖಂಡ ಮಲ್ಲೇಶ್ ಹಾಜರಿದ್ದರು.**

ಮೈಸೂರು ಮಿತ್ರ
ಶುಕ್ರವಾರ 14 ಏಪ್ರಿಲ್ 2023

ಮೂರನೇ ಪುಟದಿಂದ

## 221 ಮಂದಿ ನಾಮಪತ್ರ ಸಲ್ಲಿಕೆ

ಕೇವಲ ಏಳು ದಿನಗಳ ಕಾಲಾವಕಾಶವಿದ್ದು, ಇದರಲ್ಲಿ ಎರಡು ದಿನಗಳ ಸಾರ್ವತ್ರಿಕ ರಜೆ ಇದ್ದು, ಆ ದಿನಗಳಲ್ಲಿ ನಾಮಪತ್ರ ಸಲ್ಲಿಸಲು ಅವಕಾಶವಿರುವುದಿಲ್ಲ.

ಮೇ 10 ರಂದು ಬೆಳಗ್ಗೆ 7 ರಿಂದ ಸಂಜೆ 6 ರವರೆಗೆ ಮತದಾನ ನಡೆಯಲಿದ್ದು, ಮತ ಎಣಿಕೆ ಕಾರ್ಯ ಮೇ 13 ರಂದು ನಡೆದು ಅಂದೇ ಫಲಿತಾಂಶ ಪ್ರಕಟವಾಗಲಿದೆ.

ಕೇಂದ್ರ ಚುನಾವಣಾ ಆಯೋಗದ ಕಾರ್ಯದರ್ಶಿ ಬಿ.ಸಿ.ಪಾತ್ರಾ ಅವರು ಇಂದು ಚುನಾವಣೆಗೆ ಸಂಬಂಧಿಸಿದಂತೆ ಅಧಿಸೂಚನೆ ಹೊರಡಿಸಿರುವುದಲ್ಲದೆ, ನಾಮಪತ್ರ ಸಲ್ಲಿಕೆ ಮಾಡುವವರಿಗೆ ಕೆಲವು ಷರತ್ತುಗಳನ್ನು ವಿಧಿಸಿದ್ದಾರೆ. ನಾಮಪತ್ರ ಸಲ್ಲಿಸುವಾಗ ಅಭ್ಯರ್ಥಿ ಸೇರಿದಂತೆ ಒಟ್ಟು ಐದು ಜನರಿಗೆ ಮಾತ್ರ ಚುನಾವಣಾಧಿಕಾರಿಗಳ ಕಛೇರಿ ಪ್ರವೇಶಿಸಲು ಅವಕಾಶ ನೀಡಲಾಗಿದೆ. ನಾಮಪತ್ರ ಸಲ್ಲಿಸುವ ಕಚೇರಿಯಿಂದ ನೂರು ಮೀಟರ್ ಹೊರಗೆ ಅಭ್ಯರ್ಥಿಗಳು ತಮ್ಮ ವಾಹನವನ್ನು ನಿಲ್ಲಿಸುವುದಲ್ಲದೆ ಆಯೋಗದ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.

## 16 ಮಂದಿ ನಾಮಪತ್ರ ಸಲ್ಲಿಕೆ

ಕರ್ನಾಟಕ ರಾಷ್ಟ್ರ ಸಮಿತಿಯ ಸುಂದರ ಪ್ರೇಮ್ ಕುಮಾರ್, ಜಾತ್ಯಾತೀತ ಜನತಾ ದಳ ಆಕಾಂಕ್ಷಿ ಅಯೂಬ್ ಖಾನ್, ಆಮ್ ಆದ್ಮಿ ಪಾರ್ಟಿ (ಎಎಪಿ)ಯ ಧರ್ಮಶ್ರೀ, ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾದ ಕೆ.ಹೆಚ್.ಅಬ್ದುಲ್ ಮಜೀದ್, ಇಂಡಿಯನ್ ನ್ಯೂ ಕಾಂಗ್ರೆಸ್ ಪಾರ್ಟಿಯ ಅಯೂಬ್ ಖಾನ್ ಹಾಗೂ ವರುಣಾ ಕ್ಷೇತ್ರದಿಂದ ಕರ್ನಾಟಕ ರಾಷ್ಟ್ರ ಸಮಿತಿಯ ಎಂ.ರವಿಕುಮಾರ್ ವಿಧಾನಸಭಾ ಚುನಾವಣೆಗೆ ಸ್ಪರ್ಧೆ ಬಯಸಿ ತಮ್ಮ ಉಮೇದುವಾರಿಕೆ ಸಲ್ಲಿಸಿದ್ದಾರೆ.

ಮೈಸೂರು ಜಿಲ್ಲೆಯ ನಂಜನಗೂಡು, ಚಾಮರಾಜ ಹಾಗೂ ಟಿ.ನರಸೀಪುರ ಕ್ಷೇತ್ರದಿಂದ ಮೊದಲ ದಿನ ಯಾವುದೇ ನಾಮಪತ್ರಗಳು ಸಲ್ಲಿಕೆಯಾಗಿಲ್ಲ ಎಂದು ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ನಾಮಪತ್ರ ಸಲ್ಲಿಕೆ ವೇಳೆ ಆಯಾ ಕ್ಷೇತ್ರಗಳ ಚುನಾವಣಾಧಿಕಾರಿ ಹಾಗೂ ಸಹಾಯಕ ಚುನಾವಣಾಧಿಕಾರಿಗಳು ಹಾಜರಿದ್ದು, ಅಭ್ಯರ್ಥಿ ಆಕಾಂಕ್ಷಿಗಳು ಸೇರಿ ಒಟ್ಟು 5 ಮಂದಿ ಮಾತ್ರ ಚುನಾವಣಾಧಿಕಾರಿ ಕಚೇರಿಗೆ ಪ್ರವೇಶಿಸುವಂತೆ ನಿರ್ಬಂಧ ವಿಧಿಸಿ, ನಾಮಪತ್ರ ಸ್ವೀಕರಿಸಿದರು. ಮೊದಲ ದಿನವಾದ ಇಂದು ಕಾಂಗ್ರೆಸ್‌ನ ಡಿ.ವೆಂಕಟೇಶ್ ಹೊರತುಪಡಿಸಿ ಉಳಿದಂತೆ ಯಾವುದೇ ಕ್ಷೇತ್ರದಿಂದ ಪ್ರಮುಖ ರಾಜಕೀಯ ಪಕ್ಷಗಳ ಅಭ್ಯರ್ಥಿಗಳು, ಟಿಕೆಟ್ ಆಕಾಂಕ್ಷಿಗಳು ಉಮೇದುವಾರಿಕೆ ಸಲ್ಲಿಸಿಲ್ಲ. ಅಧಿಕೃತವಾಗಿ ಟಿಕೆಟ್ ಘೋಷಣೆಯಾಗಿರುವ ಅಭ್ಯರ್ಥಿಗಳೂ ಇಂದು ನಾಮಪತ್ರ ಸಲ್ಲಿಸಿಲ್ಲ. ಕೆಲವರಿಗೆ ಪಕ್ಷದ ಟಿಕೆಟ್ ಖಚಿತವಾಗದ ಕಾರಣ ಗೊಂದಲದಲ್ಲಿದ್ದಾರೆ. ನಾಳೆ (ಏ.14) ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಪ್ರಯುಕ್ತ ರಜೆ ಇರುವುದರಿಂದ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಇರುವುದಿಲ್ಲ. ಏಪ್ರಿಲ್ 20 ನಾಮಪತ್ರ ಸಲ್ಲಿಕೆಗೆ ಕಡೇ ದಿನವಾಗಿದೆ. ಏಪ್ರಿಲ್ 21 ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಏಪ್ರಿಲ್ 24ರಂದು ನಾಮಪತ್ರ ವಾಪಸ್ ಪಡೆಯಲು ಕಡೇ ದಿನವಾಗಿದೆ. ಅಂದು ಮಧ್ಯಾಹ್ನ ಚುನಾವಣಾ ಕಣದಲ್ಲಿ ಅಂತಿಮವಾಗಿ ಉಳಿದಿರುವ ಅಭ್ಯರ್ಥಿಗಳ ಪಟ್ಟಿ ಪ್ರಕಟವಾಗಲಿದೆ.

ಮೇ 10ರಂದು ಬೆಳಗ್ಗೆ 7 ರಿಂದ ಸಂಜೆ 6 ಗಂಟೆವರೆಗೆ ಮತದಾನ ನಡೆಯಲಿದ್ದು, ಮೇ 13ರಂದು ಬೆಳಗ್ಗೆ 8 ಗಂಟೆಗೆ ಮೈಸೂರಿನ ವಾಲ್ಮೀಕಿ ರಸ್ತೆಯಲ್ಲಿರುವ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜು ಕೇಂದ್ರದಲ್ಲಿ ಮತ ಎಣಿಕೆ ನಡೆಯಲಿದ್ದು, ಮಧ್ಯಾಹ್ನದ ವೇಳೆಗೆ ಫಲಿತಾಂಶ ಪ್ರಕಟವಾಗುವ ನಿರೀಕ್ಷೆ ಇದೆ. ಎಲ್ಲಾ 11 ಚುನಾವಣಾಧಿಕಾರಿ ಕಚೇರಿಗಳ ಬಳಿ ನಾಮಪತ್ರ ಸಲ್ಲಿಕೆ ವೇಳೆ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಿ ಭದ್ರತೆ ಮಾಡಲಾಗಿತ್ತು. ಜಿಲ್ಲಾ ಚುನಾವಣಾಧಿಕಾರಿಗಳು ಜಿಲ್ಲೆಯ ಕೆಲ ಆರ್‌ಓ ಕಚೇರಿಗಳಿಗೆ ಭೇಟಿ ನೀಡಿ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಪರಿಶೀಲಿಸಿದರು.

## ಬಿಜೆಪಿ ಅಭ್ಯರ್ಥಿ ಸೋಮಣ್ಣ ಘೋಷಣೆ

ಶ್ರಮ, ಅನುಭವಗಳನ್ನು ಗುರುತಿಸಿ ಎರಡೂ ಕಡೆ ಸ್ಪರ್ಧಿಸಲು ಅವಕಾಶ ನೀಡಿದ್ದಾರೆ. ತಮ್ಮ ವಿರುದ್ಧ ಯಾರು ನಿಲ್ಲುತ್ತಾರೆ ಎಂಬುದು ಗೌಣ. ಎರಡೂ ಕಡೆ ಸಮನಾಗಿ ಸಮಯ ಮೀಸಲಿಟ್ಟು ಪ್ರಚಾರ ಮಾಡಲಿದ್ದೇನೆ. ಎರಡು ಕ್ಷೇತ್ರದಲ್ಲೂ ಗೆಲ್ಲುವ ವಿಶ್ವಾಸ ಇದೆ ಎಂದರು. ನಮ್ಮ ರಾಷ್ಟ್ರೀಯ ನಾಯಕರು ಅನೇಕ ಕಡೆ ಸಾಮಾನ್ಯರಿಗೂ ವಿಧಾನಸಭೆಗೆ ಹೋಗಲು ಅವಕಾಶ ನೀಡಿದ್ದಾರೆ. ನನಗೆ ವರುಣ ಮತ್ತು ಚಾಮರಾಜನಗರ ಎರಡು ಕ್ಷೇತ್ರದಿಂದ ಟಿಕೆಟ್ ನೀಡಿರುವುದು ಖುಷಿಯಾಗಿದೆ. ಈ ಹಿಂದೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವನಾಗಿ ಕೆಲಸ ಮಾಡಿದ್ದೇನೆ. ಆಗ ಎಲ್ಲ ಜನರ ವಿಶ್ವಾಸ ಗಳಿಸಿದ್ದೇನೆ. ದಸರಾ ಸಂದರ್ಭದಲ್ಲಿ, ಕೋವಿಡ್ ಮೊದಲ ಅಲೆಯಲ್ಲೂ ಉತ್ತಮ ಕೆಲಸ ಮಾಡಿದ್ದೇನೆ. ಕ್ಷೇತ್ರದ ಮತದಾರರು ನಮ್ಮ ಪಕ್ಷದ ಕಾರ್ಯಕರ್ತರು, ಮುಖಂಡರ ಸಹಕಾರ ಕೋರುತ್ತೇನೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಅಪಾರ ಅಭಿವೃದ್ಧಿ ಕೆಲಸಗಳನ್ನು ಮಾಡಿವೆ. ಈ ಹಿಂದಿನ ಸರ್ಕಾರಗಳು ಮಾಡಲು ಆಗದಷ್ಟು ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ. ಈ ಎಲ್ಲಾ ಅಭಿವೃದ್ಧಿ ಕೆಲಸಗಳು ನನಗೆ ನೆರವಾಗಲಿವೆ ಎಂದು ತಿಳಿಸಿದರು.

**ವಿಜಯೇಂದ್ರ ಬಂದರೆ ಕ್ಷೇತ್ರ ಬಿಟ್ಟುಕೊಡುತ್ತೇನೆ:** ಯಡಿಯೂರಪ್ಪ ಅವರ ಪುತ್ರ ಬಿ.ವೈ.ವಿಜಯೇಂದ್ರ ನನ್ನ ಕಿರಿಯ ಸಹೋದರನ ಸಮಾನ. ಅವರು ವರುಣಾ ಕ್ಷೇತ್ರಕ್ಕೆ ಬರುವುದಾದರೆ ಪ್ರೀತಿಯಿಂದ ಕ್ಷೇತ್ರ ಬಿಟ್ಟುಕೊಡುತ್ತೇನೆ. ಒಂದು ವೇಳೆ ಅವರಿಗೆ ಟಿಕೆಟ್ ಆಗಿದ್ದರೂ ಅವರ ಪರ ಪ್ರಚಾರ ಮಾಡುತ್ತಿದ್ದೆ. ನನಗೆ ಟಿಕೆಟ್ ಘೋಷಣೆಯಾದ ಕೂಡಲೇ ಬಿ.ಎಸ್.ಯಡಿಯೂರಪ್ಪ ಅವರನ್ನು ಭೇಟಿಯಾಗಿ ಆಶೀರ್ವಾದ ಪಡೆದು ಬಂದಿದ್ದೇನೆ. ಸಿಹಿ ತಿನಿಸಿ ಗೆದ್ದು ಬಾ ಎಂದು ಹರಸಿದ್ದಾರೆ. ಬಿ.ಎಸ್.ಯಡಿಯೂರಪ್ಪ ಅವರು ವರುಣಾದಲ್ಲಿ ತಮ್ಮ ಪರ ಪ್ರಚಾರಕ್ಕೂ ಬರುತ್ತಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಂಸದ ಪ್ರತಾಪ್ ಸಿಂಹ, ನಗರಾಧ್ಯಕ್ಷ ಶ್ರೀವತ್ಸ, ಗ್ರಾಮಾಂತರ ಅಧ್ಯಕ್ಷೆ ಮಂಗಳಾ ಸೋಮಶೇಖರ್, ಡಾ.ಕೆ.ವಸಂತ ಕುಮಾರ್ ಇನ್ನಿತರರು ಇದ್ದರು.

## ದೇವೇಗೌಡರ ಕೊರಳಿಗೆ ಮುತ್ತಿನ ಹಾರ

ಆಶೀರ್ವದಿಸಬೇಕು ಎಂದು ಕೋರಿದರು. ಇದೇ ವೇಳೆ ಕಾಮನಕೆರೆಹುಂಡಿ ಗ್ರಾಮದ ಗ್ರಾಪಂ ಮಾಜಿ ಅಧ್ಯಕ್ಷ ಹೆಚ್.ಡಿ.ಜಯರಾಮ್, ಯಜಮಾನ್ ಜಯರಾಮ್, ಲಾಯರ್ ಜಯರಾಮ್, ಎಂಪಿಸಿಎಸ್ ನಿರ್ದೇಶಕ ಡಿ.ರಾಮು, ಪ್ರೊ.ನಾಗರಾಜು, ಕೆಆರ್ ಮಿಲ್ ಕಾಲೋನಿ ಗ್ರಾಪಂ ಸದಸ್ಯ ಪಾಂಡುರಂಗ, ಧನ್‌ಪಾಲ್, ದೇವರಾಜು, ಕುಂಬ್ರೇಶ್, ಜಿ.ಲೋಕೇಶ್, ಡೇವಿಡ್, ಮೈಕಲ್, ಅಫ್ರೋಜ್ ಪಾಷಾ, ಸಮಿ ಉಲ್ಲಾ, ಜಬಿಉಲ್ಲಾ, ಇಮ್ರಾನ್ ಹುಸೇನ್, ನಾಗನಹಳ್ಳಿ ಗ್ರಾಮದ ಗ್ರಾಪಂ ಮಾಜಿ ಅಧ್ಯಕ್ಷ ಎನ್.ಜೆ.ಬಸವರಾಜು, ಏಕಲವ್ಯ ನಗರ ವೆಂಕಟೇಶ್, ಲೋಕೇಶ್, ರಾಮಲಿಂಗು, ಮಂಜುನಾಥ್, ಸಿದ್ದಲಿಂಗಪುರ ಶಂಕರ್, ಮಹದೇವು, ಬೆಲವತ್ತದ ಗ್ರಾಪಂ ಸದಸ್ಯರಾದ ಕೆ.ಎಂ.ರಾಘವೇಂದ್ರ, ವಿನುತಾ ರಾಘವೇಂದ್ರ, ಸಿ.ಪ್ರಕಾಶ್, ಗಂಗಾಧರ್, ಗ್ರಾಪಂ ಮಾಜಿ ಅಧ್ಯಕ್ಷೆ ಸೀತಮ್ಮ, ಮಾಜಿ ಸದಸ್ಯರಾದ ಜ್ಯೋತಿ, ಸಾತಗಳ್ಳಿ-ಬಿ ವಲಯದ ಶಿವಮ್ಮ, ಸುಮಾ ರತ್ನಾಕರ್, ಲಕ್ಷ್ಮೀ ವೆಂಕಟೇಶ್, ಸುಷ್ಮಾ, ಪಲ್ಲವಿ, ರಾಘವೇಂದ್ರ ಸೇರಿದಂತೆ ನೂರಾರು ಮುಖಂಡರು, ಕಾಂಗ್ರೆಸ್ ಕಾರ್ಯಕರ್ತರು ಜಿ.ಟಿ.ದೇವೇಗೌಡರ ಸಮ್ಮುಖದಲ್ಲಿ ಜೆಡಿಎಸ್ ಸೇರಿದರು.

ಈ ಸಂದರ್ಭದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ರಾಜಣ್ಣ, ಜಿಪಂ ಮಾಜಿ ಸದಸ್ಯ ದಿನೇಶ್, ಕಾಮನಕೆರೆಹುಂಡಿ ರಾಮೇಗೌಡ್ರು, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಕೃಷ್ಣ, ವಿಜಯೇಂದ್ರ, ಗೋಪಾಲ್, ನಾರಾಯಣಪ್ಪ, ವಕೀಲ ಮಾದೇಶ್, ಶಿವರಾಜ್, ಪ್ರಕಾಶ್, ಪುರುಷೋತ್ತಮ, ಮರಿಸ್ವಾಮಿ, ಯೋಗೇಶ್, ಗಿರೀಶ್ ಸಿದ್ದಲಿಂಗಪುರದ ಅರ್ಕೇಶ್, ಮಂಜು, ನಾಗನಹಳ್ಳಿ ಗ್ರಾಪಂ ಅಧ್ಯಕ್ಷ ಭಾಸ್ಕರ್, ಯಾದವೇಂದ್ರ, ರಾಮಚಂದ್ರ, ಜನಾರ್ಧನ್, ಕುಮಾರ್, ಧರಣಿ, ಹರೀಶ್, ರಮ್ಮನಹಳ್ಳಿ ಶಿವನಂಜಯ್ಯ, ನಾಗರಾಜ್, ಮಂಜು, ಕೆಸರೆ ಗ್ರಾಪಂನ ಮಾದೇಶ್, ಲಲಿತಮ್ಮ, ಜ್ಯೋತಿ, ಕೆಆರ್ ಮಿಲ್ ಗ್ರಾಮದ ಆಶಾ, ಅರ್ಪಿತಾ, ಅನಿಲ್, ಬೆಲವತ್ತದ ಹನುಮಂತ್, ಪ್ರೇಮಮ್ಮ, ವಿಶ್ವನಾಥ್, ಹಂಚ್ಯಾದ ತಮ್ಮಯ್ಯಣ್ಣ, ರಾಮಚಂದ್ರ, ಆಲನಹಳ್ಳಿ ಗ್ರಾಮದ ವೆಂಕಟೇಶ್, ಗೋವಿಂದ್, ನಾಗರಾಜ್, ಕುಮಾರ್, ಬೆಲವತ್ತ ಕುಮಾರ್, ಕೆಸರೆ ರೇವಣ್ಣ, ಯರಗನಹಳ್ಳಿ ರಾಮು ಮತ್ತಿತರರು ಉಪಸ್ಥಿತರಿದ್ದರು.

## ಕಾರಿನ ಮೇಲೆ ಗುಂಡಿನ ದಾಳಿ

ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣದಲ್ಲಿ ಕೊಡಗಿನ ಕೆಲವರು ಶಾಮೀಲಾಗಿರುವುದು ಪತ್ತೆಯಾಗಿದೆ. ಪಿಎಫ್‌ಐ ಸಂಘಟನೆ ಕಾರ್ಯಕರ್ತರಿಗೆ ಜಿಲ್ಲೆಯಲ್ಲಿ ತರಬೇತಿ ನೀಡಿರುವುದು ಕಂಡು ಬಂದಿದೆ. ಯಾರೇ ಆದರೂ ಕಾನೂನಿಗೆ ಬದ್ಧರಾಗಿ ನಡೆಯಬೇಕು. ಇಲ್ಲವಾದಲ್ಲಿ ಇಂತಹ ದುಷ್ಟ ಶಕ್ತಿಗಳನ್ನು ಸದೆ ಬಡಿಯಬೇಕಾಗುತ್ತದೆ ಎಂದು ಎಚ್ಚರಿಸಿದರು. ಈ ಘಟನೆ ಕುರಿತು ತನಿಖೆ ನಡೆಸಬೇಕು. ಕೃತ್ಯದಲ್ಲಿ ಪಾಲ್ಗೊಂಡವರು ಎಷ್ಟೇ ಪ್ರಭಾವಿಗಳಾದರೂ ಕಠಿಣ ಕಾನೂನು ಕ್ರಮ ಜರುಗಿಸಬೇಕು. ಈ ಕುರಿತು ಪೊಲೀಸ್ ಉನ್ನತ ಅಧಿಕಾರಿಗಳ ಜೊತೆ ಚರ್ಚಿಸುತ್ತೇನೆ. ಇಂತಹ ಘಟನೆಗಳು ಮರುಕಳಿಸದಂತೆ ತಡೆಯುವ ಕೆಲಸವೂ ಆಗಬೇಕು ಎಂದು ಹೇಳಿದರು.

**ಕಲಾಪ ಬಹಿಷ್ಕಾರ:** ವಿಶ್ವ ಹಿಂದೂ ಪರಿಷತ್‌ನ ಕೊಡಗು ಜಿಲ್ಲಾಧ್ಯಕ್ಷ ಹಾಗೂ ವಕೀಲ ಪಿ.ಕೃಷ್ಣಮೂರ್ತಿ ಅವರ ಕಾರಿನ ಮೇಲೆ ನಡೆದ ಗುಂಡಿನ ದಾಳಿ ಪ್ರಕರಣವನ್ನು ಮಡಿಕೇರಿ ವಕೀಲರ ಸಂಘ ತೀವ್ರವಾಗಿ ಖಂಡಿಸಿದೆ. ಗುಂಡು ಹಾರಿಸಿದ ದುಷ್ಕರ್ಮಿಯನ್ನು ತಕ್ಷಣ ಬಂಧಿಸಬೇಕೆಂದು ಒತ್ತಾಯಿಸಿ ನ್ಯಾಯಾಲಯದ ಕಲಾಪದಿಂದ ಹೊರಗುಳಿದು ಕೋರ್ಟ್ ಎದುರು ಕೆಲಕಾಲ ಪ್ರತಿಭಟನೆ ನಡೆಸಿದರು. ನಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳನ್ನು ಭೇಟಿಯಾದ ಸಂಘದ ಪ್ರಮುಖರು ಸೂಕ್ತ ತನಿಖೆಗಾಗಿ ಒತ್ತಾಯಿಸಿ, ತಕ್ಷಣವೇ ದುಷ್ಕರ್ಮಿ ಬಂಧಿಸುವಂತೆ ಆಗ್ರಹಿಸಿದರು.

**ವಿಶ್ವ ಹಿಂದೂ ಪರಿಷತ್ ಖಂಡನೆ:** ವಿಶ್ವ ಹಿಂದೂ ಪರಿಷತ್ ಜಿಲ್ಲಾಧ್ಯಕ್ಷ ಪಿ.ಕೃಷ್ಣಮೂರ್ತಿ ಅವರ ಮೇಲೆ ನಡೆದ ಗುಂಡಿನ ದಾಳಿಯನ್ನು ವಿಹೆಚ್‌ಪಿಯ ಜಿಲ್ಲಾ ಘಟಕ ಖಂಡಿಸಿದೆ. ಚೆಟ್ಟಳ್ಳಿ ಸಮೀಪ ಅಬ್ಯಾಲ ಎಂಬಲ್ಲಿ ಕೃಷ್ಣಮೂರ್ತಿಯವರು ಕಾರಿನಲ್ಲಿ ತೆರಳುತ್ತಿದ್ದಾಗ ದುಷ್ಕರ್ಮಿಗಳು ಗುಂಡು ಹಾರಿಸಿ, ಅವರ ಹತ್ಯೆಗೆ ಯತ್ನಿಸಿದ್ದಾರೆ. ಆದರೆ ಅದೃಷ್ಟವಶಾತ್ ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ವೃತ್ತಿಪರ ಅಥವಾ ಸಂಘಟನೆಯ ದ್ವೇಷ ಯಾವುದೇ ಇದ್ದರು ಪ್ರಕರಣವನ್ನು ತೀವ್ರವಾಗಿ ಖಂಡಿಸುತ್ತೇವೆ. ಗುಂಡು ಹಾರಿಸಿದವರನ್ನು ಶೀಘ್ರ ಬಂಧಿಸಬೇಕು ಮತ್ತು ಕೃಷ್ಣಮೂರ್ತಿ ಅವರಿಗೆ ಪೊಲೀಸರು ಸೂಕ್ತ ಭದ್ರತೆಯನ್ನು ನೀಡಬೇಕು ಎಂದು ವಿಹೆಚ್‌ಪಿ ಒತ್ತಾಯಿಸಿದೆ. ದುಷ್ಕರ್ಮಿಗಳ ಬಂಧನವಾಗದಿದ್ದಲ್ಲಿ ಜಿಲ್ಲೆಯಾದ್ಯಂತ ಪ್ರತಿಭಟನೆ ಹಮ್ಮಿಕೊಳ್ಳುವುದಾಗಿ ಎಚ್ಚರಿಕೆ ನೀಡಿದೆ.

# ಎದುರಾಳಿ ಯಾರು ಅಂಥಾ ನಾನು ನೋಡಲ್ಲ; ಮತದಾರರ ಮೇಲೆ ವಿಶ್ವಾಸವಿಟ್ಟಿದ್ದೇನೆ

● ವಿಪಕ್ಷ ನಾಯಕ ಸಿದ್ದರಾಮಯ್ಯ ಖಡಕ್ ನುಡಿ ● ನನ್ನೂರು ಸೇರಿರುವುದರಿಂದ ವರುಣಾದಲ್ಲಿ ಕೊನೆ ಬಾರಿ ಸ್ಪರ್ಧೆಗೆ ನಿರ್ಧರಿಸಿದೆ ● ಸುತ್ತೂರು ಶ್ರೀಗಳ ಆಶೀರ್ವಾದ ಪಡೆದ ನಂತರ ಮಾಜಿ ಸಿಎಂ ಪ್ರತಿಕ್ರಿಯೆ

ಮೈಸೂರು, ಏ.13(ಎಂಕೆ)– ಎದುರಾಳಿ ಯಾರು ಅಂಥಾ ನಾನು ನೋಡಲ್ಲ. ಮತದಾರರ ಮೇಲೆ ನಾನು ವಿಶ್ವಾಸ ಇಟ್ಟಿದ್ದೇನೆ. ಸಿದ್ದರಾಮಯ್ಯ ಅವರನ್ನು ಗೆಲ್ಲಿಸಬೇಕೆಂದು ಮತದಾರರು, ಕಾರ್ಯಕರ್ತರು ತೀರ್ಮಾನ ಮಾಡಿದ್ದಾರೆ. ಸೋಮಣ್ಣನಾದ್ರೂ ಬರಲಿ ಯಾರಾದರೂ ಬರಲಿ ನಾನು ವರುಣಾದಲ್ಲಿ ಗೆದ್ದೇ ಗೆಲ್ಲುತ್ತೇನೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರಿನ ಸುತ್ತೂರು ಶಾಖಾ ಮಠಕ್ಕೆ ಗುರುವಾರ ಭೇಟಿ ನೀಡಿ, ಸುತ್ತೂರು ಶ್ರೀಗಳ ಆಶೀರ್ವಾದ ಪಡೆದ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ವರುಣಾ ಕ್ಷೇತ್ರದಲ್ಲಿ ನಮ್ಮ ಹುಡುಗ (ಯತೀಂದ್ರ ಸಿದ್ದರಾಮಯ್ಯ) ತಿಂಗಳ ಹಿಂದೆಯೇ ಪ್ರಚಾರ ಶುರುಮಾಡಿದ್ದಾನೆ. ಅವನು ಈಗ(ಸೋಮಣ್ಣ) ಬಂದಿದ್ದಾನೆ. ಬರಲಿ ಪ್ರಚಾರ ಮಾಡಲಿ. ಯಾರು ನಿಲ್ಲುತ್ತಾರೆ ಎಂಬುದು ಮುಖ್ಯವಲ್ಲ. ಜನರು ಆಶೀರ್ವಾದ ಮಾಡುವುದು ಮುಖ್ಯ ಎಂದರು.

ರಾಹು ಕೇತುಗಳು ಈಗಲೂ ಇದ್ದಾರಾ? ಎಂಬ ಪ್ರಶ್ನೆಗೆ ನಾನು ಅದರ ಬಗ್ಗೆ ಮಾತನಾಡಲ್ಲ. ಶ್ರೀನಿವಾಸಪ್ರಸಾದ್ ಬಿಜೆಪಿ ಮುಖಂಡ. ಸೋಮಣ್ಣ ಅವರನ್ನು ಭೇಟಿ ಮಾಡುವುದರಲ್ಲಿ ತಪ್ಪೇನಿದೆ. ವರುಣಾ ಕ್ಷೇತ್ರದಲ್ಲಿ ಹಣದ ಹೊಳೆಯನ್ನೇ ಹರಿಸಲಿ, ಏನನ್ನಾದರೂ ಮಾಡಲಿ ನಾನು ಅದರ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ ಎಂದು ಹೇಳಿದ ಸಿದ್ದರಾಮಯ್ಯ, ಕೋಲಾರದಿಂದ ಸ್ಪರ್ಧೆ ಬಗ್ಗೆ ಹೈಕಮಾಂಡ್ ತೀರ್ಮಾನ ಮಾಡಬೇಕು. ಸ್ಪರ್ಧೆ ಮಾಡಲು



ಅವಕಾಶ ನೀಡಿದರೆ ಮಾಡುತ್ತೇನೆ, ಇಲ್ಲ ಅಂದ್ರೇ ವರುಣಾದಲ್ಲೇ ಸ್ಪರ್ಧಿಸುತ್ತೇನೆ ಎಂದು ಹೇಳಿದರು.

**ನನ್ನ ಕಂಡರೇ ಭಯ!:** ಪ್ರತೀ ಬಾರಿ ಸಿದ್ದರಾಮಯ್ಯನವರೇ ಯಾಕೆ ಟಾರ್ಗೆಟ್ ಆಗುತ್ತಾರೆ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಅವರಿಗೆ ನನ್ನ ಕಂಡರೆ ಭಯ. ಅದಕೋಸ್ಕರನೇ ನನ್ನನ್ನೇ ಟಾರ್ಗೆಟ್ ಮಾಡುತ್ತಾರೆ. ಯಾವಾಗಲೂ ಜಾಸ್ತಿ ಭಯ ಇದ್ದರೆ ಎನಿಮಿಗಳು(ವಿರೋಧಿಗಳು) ಜಾಸ್ತಿ ಇರುತ್ತಾರೆ ಅಲ್ವಾ... ವೈಯಕ್ತಿಕವಾಗಿ ಸೋಮಣ್ಣನ ಬಗ್ಗೆ ಏನೂ ಇಲ್ಲ. 2006ರಲ್ಲಿ ಸೋಮಣ್ಣ ನನ್ನ ಪರವಾಗಿ ಪ್ರಚಾರ ಮಾಡಿದ್ದ. ಆದರೆ ಈಗ ರಾಜಕೀಯವಾಗಿ ಪ್ರತಿಸ್ಪರ್ಧಿಯಾಗಿ ನಿಂತಿರುವುದರಿಂದ ಸೋಲಿಸಬೇಕು ಎಂಬುದು ನಮ್ಮ ಕಾರ್ಯಕರ್ತರ, ಮುಖಂಡರ ಉದ್ದೇಶವಾಗಿದೆ. ಈಗಾಗಲೇ ಯತೀಂದ್ರ ಹಳ್ಳಿ ಹಳ್ಳಿಗೆ ಹೋಗಿ ಮತಯಾಚನೆ ಮಾಡುತ್ತಿದ್ದಾರೆ ಎಂದರು.

**80 ಕ್ಷೇತ್ರಗಳಲ್ಲಿ ಪ್ರವಾಸ:** ಈಗಾಗಲೇ 60 ವಿಧಾನಸಭಾ ಕ್ಷೇತ್ರಗಳಿಗೆ ಭೇಟಿ ನೀಡಿದ್ದೇನೆ. ಇನ್ನೂ ಉಳಿದಿರುವ ದಿನಗಳಲ್ಲಿ ಸುಮಾರು 20 ದಿನಗಳು ಸಿಗಬಹುದು. ಒಂದು ದಿನಕ್ಕೆ ನಾಲ್ಕು ವಿಧಾನಸಭಾ ಕ್ಷೇತ್ರವೆಂದರೂ 80 ಕ್ಷೇತ್ರಗಳಲ್ಲಿ ಪ್ರಚಾರ ಮಾಡುತ್ತೇನೆ ಎಂದು ತಿಳಿಸಿದರು. ಇದೇ ವೇಳೆ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಸಿದ್ದೇಗೌಡ ಸುತ್ತೂರು ಶ್ರೀಗಳ ಆಶೀರ್ವಾದ ಪಡೆದರು. ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಕಾಂಗ್ರೆಸ್ ಮುಖಂಡರಾದ ಕೆ.ಮರೀಗೌಡ, ಕೆ.ಹರೀಶ್ ಗೌಡ, ಎಂ.ಪ್ರದೀಪ್‌ಕುಮಾರ್, ನವೀನ್‌ಕುಮಾರ್, ಯರಗನಹಳ್ಳಿ ಮಾದೇಗೌಡ ಮತ್ತಿತರರಿದ್ದರು.

**ಸುತ್ತೂರು ಶ್ರೀಗಳ ಜೊತೆ ರಹಸ್ಯ ಮಾತುಕತೆ:** ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ ಜೊತೆ ಸಿದ್ದರಾಮಯ್ಯ ಪ್ರತ್ಯೇಕವಾಗಿ ಮಾತುಕತೆ ನಡೆಸಿದರು. ಎಲ್ಲರನ್ನೂ ದೂರವಿಟ್ಟು ಶ್ರೀಗಳ ಜೊತೆ 15 ನಿಮಿಷಕ್ಕೂ ಹೆಚ್ಚು ಸಮಯ ಮಾತುಕತೆ ನಡೆಸಿದರು.

### ಏ.19 ರಂದು ನಾಮಪತ್ರ ಸಲ್ಲಿಕೆ...

ಏ.19ರಂದು ವರುಣಾದಲ್ಲಿ ನಾಮಪತ್ರ ಸಲ್ಲಿಸುತ್ತೇನೆ. ಅಲ್ಲದೆ ಒಂದು ದಿನ ಕ್ಷೇತ್ರದಲ್ಲಿ ಪ್ರಚಾರ ನಡೆಸಲಿದ್ದೇನೆ. ಎಲ್ಲಾ ಶಕ್ತಿಗಳು ಒಂದಾದರೂ ಜನ ನನಗೆ ಆಶೀರ್ವಾದ ಮಾಡುತ್ತಾರೆ ಎಂಬ ನಂಬಿಕೆ ಇದೆ. 2008ರಲ್ಲಿ 30 ಸಾವಿರ ಮತಗಳಿಂದ ಗೆಲ್ಲಿಸಿದ್ದಾರೆ. 2013ರಲ್ಲೂ ಗೆಲ್ಲಿಸಿದ್ದಾರೆ. ವಿರೋಧ ಪಕ್ಷದ ನಾಯಕನಾಗಿದ್ದು ಇಲ್ಲಿಂದಲೇ. ಮತ್ತೆ ನಮ್ಮೂರು ಕೂಡ ಇರೋದು ಇಲ್ಲೆ. ಸಿಎಂ ಆದದ್ದು ಇಲ್ಲಿಂದಲೇ. ಆದ್ದರಿಂದ ವರುಣಾ ಕ್ಷೇತ್ರದ ಜನ ನನ್ನ ಕೈ ಹಿಡಿಯುತ್ತಾರೆ ಎಂಬ ವಿಶ್ವಾಸವಿದೆ.

– ಸಿದ್ದರಾಮಯ್ಯ, ಮಾಜಿ ಸಿಎಂ

## 140ಕ್ಕೂ ಅಧಿಕ ಕ್ಷೇತ್ರದಲ್ಲಿ ಬಿಜೆಪಿ ಗೆಲುವು

### ಸಚಿವ ಎಸ್.ಟಿ.ಸೋಮಶೇಖರ್ ವಿಶ್ವಾಸ



ಮೈಸೂರು, ಏ.13(ಎಂಕೆ)– ನಮ್ಮಲ್ಲಿ ಅಳೆದು ತೂಗಿ ನೋಡಿ ಟಿಕೆಟ್ ಹಂಚಿಕೆ ಮಾಡಿದ್ದು, ಈ ಬಾರಿ 140ಕ್ಕೂ ಹೆಚ್ಚಿನ ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು ಸಾಧಿಸಲಿದೆ ಎಂದು ಸಚಿವ ಎಸ್.ಟಿ. ಸೋಮಶೇಖರ್ ಹೇಳಿದರು.

ಮೈಸೂರಿನ ಸುತ್ತೂರು ಶಾಖಾ ಮಠಕ್ಕೆ ಗುರುವಾರ ಭೇಟಿ ನೀಡಿದ ಸುತ್ತೂರು ಶ್ರೀಗಳ ಆಶೀರ್ವಾದ ಪಡೆದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನಾನು ಇಂದು ನಾಮಪತ್ರ ಸಲ್ಲಿಸಿದ್ದೇನೆ. ಹೀಗಾಗಿ ಸುತ್ತೂರು ಶ್ರೀಗಳ ಆಶೀರ್ವಾದ ಪಡೆದುಕೊಳ್ಳಲು ಸ್ವಾಮೀಜಿ ಯವರ ಬಳಿಗೆ ಬಂದಿದ್ದೇನೆ. ಹಾಗೆಯೇ ಚಾಮುಂಡಿ ಬೆಟ್ಟಕ್ಕೂ ತೆರಳಿ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸಿದ್ದೇನೆ ಎಂದರು.

ಬಿಜೆಪಿ ಟಿಕೆಟ್ ಘೋಷಣೆಯಾದ ಬಳಿಕ ಕೆಲ ಬಿಜೆಪಿ ನಾಯಕರ ಅಸಮಾ ಧಾನ ಕುರಿತು ಪ್ರತಿಕ್ರಿಯಿಸಿದ ಅವರು, ಟಿಕೆಟ್ ಘೋಷಣೆ ಸಂದರ್ಭದಲ್ಲಿ ಅಸಮಾಧಾನ ವ್ಯಕ್ತಪಡಿಸುವುದು ಸಹಜ. ಅಸಮಾಧಾನಿತ ನಾಯಕರ ಜೊತೆ ಪಕ್ಷದ ವರಿಷ್ಠರು ಮಾತುಕತೆ ನಡೆಸಲಿ ದ್ದಾರೆ. ಒಂದೆರಡು ದಿನಗಳಲ್ಲಿ ಎಲ್ಲವೂ ಸರಿಯಾಗಲಿದೆ. ಆದರೆ ನಮ್ಮಲ್ಲಿ ಅಳೆದು ತೂಗಿ ನೋಡಿ ಟಿಕೆಟ್ ಹಂಚಿಕೆ ಮಾಡಿದ್ದು, ಈ ಬಾರಿ 140ಕ್ಕೂ ಹೆಚ್ಚಿನ ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು ಸಾಧಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

**4 ಜಿಲ್ಲೆಯಲ್ಲಿ ಪ್ರಚಾರ:** ನಾಲ್ಕು ಜಿಲ್ಲೆ ಗಳಲ್ಲಿ ಪ್ರಚಾರ ಮಾಡುವಂತೆ ಪಕ್ಷ ಸೂಚನೆ ನೀಡಿದೆ. ಅದರಂತೆ ಏ.24 ರಿಂದ ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ಹಾಸನ ಜಿಲ್ಲೆಗಳ ಪ್ರವಾಸ ಕೈಗೊಂಡು ಪ್ರಚಾರ ನಡೆಸಲಿದ್ದೇನೆ. ಯಶವಂತಪುರ ಕ್ಷೇತ್ರ ವರ್ಷದ 365 ದಿನವೂ ಅಭಿವೃದ್ಧಿ ಪರವಾಗಿದ್ದೇನೆ. ಸುಮಾರು 10 ವರ್ಷಗಳ ಕಾಲ ಕ್ಷೇತ್ರದ ಜನಸೇವೆ ಮಾಡಿಕೊಂಡು ಬಂದಿದ್ದೇನೆ. ಈ ಬಾರಿಯೂ ಕ್ಷೇತ್ರದ ಮತದಾರರು ಆಶೀರ್ವಾದ ಮಾಡಲಿದ್ದಾರೆ ಎಂದರು. ಇದೇ ವೇಳೆ ಟಿ.ನರಸೀಪುರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ರೇವಣ್ಣ ಕೂಡ ಸುತ್ತೂರು ಶ್ರೀಗಳ ಆಶೀರ್ವಾದ ಪಡೆದರು.

## ಸರ್ಕಾರದಿಂದ ನಂದಿನಿ ಕತ್ತು ಹಿಸುಕುವ ಹುನ್ನಾರ

ಮೈಸೂರು, ಏ.13– ಕರ್ನಾಟಕದ ಮಾರುಕಟ್ಟೆಗೆ ಅಮುಲ್ ಪ್ರವೇಶಕ್ಕೆ ಅವಕಾಶ ನೀಡಿರುವುದರಿಂದ ಪಶುಪಾಲನೆಯಲ್ಲಿ ತೊಡಗಿರುವ ರಾಜ್ಯದ ರೈತರು ಬೀದಿಗೆ ಬೀಳುವ ಸ್ಥಿತಿ ಬರಲಿದೆ. ಇದು ನಂದಿನಿ ಕತ್ತು ಹಿಸುಕುವ ಹುನ್ನಾರವಾಗಿದೆ ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಆರೋಪಿಸಿದ್ದಾರೆ.



ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಕೆಎಂಎಫ್ ಮುಗಿಸಲು ಅಮುಲ್ ಕಸರತ್ತು ಮುಂದುವರಿಸಿದೆ. ಹಿಂದೆಯೂ ಈ ರೀತಿಯ ಪ್ರಯತ್ನ ನಡೆದಿತ್ತು. ಆಗ ಕೆಎಂಎಫ್ ಸೇರಿದಂತೆ ರಾಜ್ಯದ ಜನತೆ ವಿರೋಧಿಸಿದ್ದರು. ಈಗ ಈ ಪ್ರಯತ್ನ ದೊಡ್ಡ ಮಟ್ಟದಲ್ಲಿ ನಡೆಯುತ್ತಿದೆ. ತನ್ಮೂಲಕ ಕೆಎಂಎಫ್ ಮುಗಿಸಲು ಕಸರತ್ತು ನಡೆಸಲಾಗುತ್ತಿದೆ. ಒಂದು ದೇಶ, ಒಂದೇ ಅಮುಲ್, ಒಂದೇ ಹಾಲು, ಒಂದೇ ಗುಜರಾತ್ ಎನ್ನುವುದು ಕೇಂದ್ರ ಸರಕಾರದ ಅಧಿಕೃತ ನೀತಿಯಂತಾಗಿದೆ ಎಂದು ಆರೋಪಿಸಿದ್ದಾರೆ.

ಮಾರುಕಟ್ಟೆ ಪ್ರವೇಶಿಸಲು ಮುಂದಾಗಿರುವ ಗುಜರಾತಿನ ಅಮುಲ್ ನಡೆ ವಿರುದ್ಧ ರಾಜ್ಯಾದ್ಯಂತ ಭಾರೀ ವಿರೋಧ ವ್ಯಕ್ತವಾಗಿದೆ. ಅರ್ಧ ಶತಮಾನಗಳಷ್ಟು ಕಾಲ ರಾಜ್ಯದ ಮನ ಗೆದ್ದಿರುವ ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳಿ ನಿಯಮಿತ ಸಂಸ್ಥೆಯನ್ನು ಗುಜರಾತ್‌ನ ಅಮುಲ್‌ನೊಂದಿಗೆ ವಿಲೀನಗೊಳಿಸುವ ಮೊದಲ ಪ್ರಯತ್ನವಾಗಿ ಅಮುಲ್ ಉತ್ಪನ್ನವನ್ನು ರಾಜ್ಯಕ್ಕೆ ಪರಿಚಯಿಸಲಾಗುತ್ತಿದೆ. ಹಾಗಾಗಿ ಈ ಕೆಟ್ಟ ನಡೆಯನ್ನು ರಾಜ್ಯದ ಜನತೆ ಒಕ್ಕೊರಲಿನಿಂದ ವಿರೋಧಿಸಬೇಕಿದೆ ಎಂದು ತಿಳಿಸಿದ್ದಾರೆ.

## ಜೆಡಿಎಸ್‌ಗೆ ಮರಳಿದ ಮಾಜಿ ಶಾಸಕ ವೈಎಸ್‌ವಿ ದತ್ತ

ಕಡೂರು, ಏ.13– ಇತ್ತೀಚೆಗೆ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಿದ್ದ ಕಡೂರು ಕ್ಷೇತ್ರದ ಮಾಜಿ ಶಾಸಕ ವೈಎಸ್‌ವಿ ದತ್ತ ಮತ್ತೆ ಜೆಡಿಎಸ್‌ಗೆ ಮರಳಿದ್ದಾರೆ. ಕಾಂಗ್ರೆಸ್‌ನಿಂದ ಟಿಕೆಟ್ ಸಿಗದೆ ಅಸಮಾಧಾನಗೊಂಡು




ಪಕ್ಷೇತರ ಅಭ್ಯರ್ಥಿಯಾಗಿ ಚುನಾವಣೆಗೆ ಸ್ಪರ್ಧಿಸುವುದಾಗಿ ಹೇಳಿಕೆ ನೀಡಿದ್ದ ದತ್ತಾ ಅವರು ಇಂದು ಮಾಜಿ ಸಚಿವ ಎಚ್.ಡಿ. ರೇವಣ್ಣ ಮತ್ತು ಸಂಸದ ಪ್ರಜ್ವಲ್ ರೇವಣ್ಣ ಅವರ ಸಮ್ಮುಖದಲ್ಲಿ ಜೆಡಿಎಸ್‌ಗೆ ವಾಪಸ್ಸಾದರು.

ಈ ಸಂದರ್ಭದಲ್ಲಿ ಮಾತನಾಡಿದ ಸಂಸದ ಪ್ರಜ್ವಲ್ ರೇವಣ್ಣ, ಕಡೂರಿನ ಜೆಡಿಎಸ್ ಅಭ್ಯರ್ಥಿಯಾಗಿ ವೈಎಸ್.ವಿ. ದತ್ತಾ ಸ್ಪರ್ಧಿಸಲಿದ್ದಾರೆ. ನಮ್ಮ ಕುಟುಂಬ, ಪಕ್ಷ ದತ್ತ ಅವರ ಜೊತೆ ಇದ್ದು, ನಾಮಪತ್ರ ಸಲ್ಲಿಸುವಾಗ ಖುದ್ದು ಹಾಜರಿರುವುದಾಗಿ ತಿಳಿಸಿದರು. ವೈಎಸ್‌ವಿ ದತ್ತಾ ಮಾತನಾಡಿ, ದೇವೇಗೌಡರು ಮತ್ತು ನನ್ನ ನಡುವಿನ ಸಂಬಂಧ ರಾಜಕೀಯವನ್ನು ಮೀರಿದ್ದು ಎಂದು ಭಾವುಕರಾದರು. ಜೆಡಿಎಸ್ ಪಕ್ಷ ಕಟ್ಟುವಲ್ಲಿ ದತ್ತ ಅವರ ಪಾತ್ರ ಮಹತ್ವದ್ದಾಗಿದೆ. ನಡು ರಾತ್ರಿಯಲ್ಲಿಯೂ ದತ್ತ ಅವರನ್ನು ಕರೆದು ದೇವೇಗೌಡರು ಚರ್ಚೆ ಮಾಡುತ್ತಿದ್ದರು ಎಂದು ಹೆಚ್.ಡಿ.ರೇವಣ್ಣ ಹೇಳಿದರು.

# ಮೈಸೂರಲ್ಲಿ ವ್ಯಾಪಕ ಚುನಾವಣಾ ಭದ್ರತೆ

### ಹೆಚ್.ಡಿ. ಕೋಟೆ ರಸ್ತೆಯ ಪೊಲೀಸ್ ಚೆಕ್‌ಪೋಸ್ಟ್‌ಗಳ ಕಾರ್ಯವೈಖರಿ ಪರಿಶೀಲಿಸಿದ ಜಿಲ್ಲಾ ಚುನಾವಣಾಧಿಕಾರಿ ಡಾ. ಕೆ.ವಿ.ರಾಜೇಂದ್ರ



ಮೈಸೂರು, ಏ.13(ಆರ್‌ಕೆ)– ವಿಧಾನಸಭಾ ಚುನಾವಣಾ ಹಿನ್ನೆಲೆಯಲ್ಲಿ ಮೈಸೂರು ನಗರ ಸೇರಿದಂತೆ ಜಿಲ್ಲೆಯಾದ್ಯಂತ ಇನ್ನಿಲ್ಲದ ವ್ಯಾಪಕ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

ಮೇ 10 ರಂದು ನಡೆಯಲಿರುವ ಚುನಾವಣೆಗೆ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಇಂದಿನಿಂದ ಆರಂಭವಾಗಿದ್ದು, ಶಾಂತಿಯುತ, ಮುಕ್ತ, ನ್ಯಾಯ ಸಮ್ಮತ ಮತದಾನದ ಉದ್ದೇಶದಿಂದ ಚುನಾವಣಾ ಅಕ್ರಮಗಳನ್ನು ತಡೆಯಲು ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ಮಾಡಿರುವ 55 ಚೆಕ್‌ಪೋಸ್ಟ್‌ಗಳಲ್ಲಿ ಅರೆ ಮಿಲಿಟರಿ ಪಡೆ ಸಿಬ್ಬಂದಿಗಳನ್ನು ನಿಯೋಜಿಸಿ ವಾಹನಗಳನ್ನು ತೀವ್ರ ತಪಾಸಣೆ ಮಾಡಲಾಗುತ್ತಿದೆ.

ಮೈಸೂರು ಜಿಲ್ಲಾ ಪಂಚಾಯ್ತಿ, ಮೈಸೂರು ಮಹಾನಗರ ಪಾಲಿಕೆ, ಕಂದಾಯ ಇಲಾಖೆ, ಮುಡಾ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಪೊಲೀಸ್ ಚೆಕ್‌ಪೋಸ್ಟ್‌ಗಳಲ್ಲಿನ ಫ್ಲೈಯಿಂಗ್ ಸ್ಕ್ವಾಡ್, ಸ್ಟ್ಯಾಟಿಕ್ ಸರ್ವೇಲೆನ್ಸ್ ಟೀಂಗಳಲ್ಲಿ ಕರ್ತವ್ಯಕ್ಕೆ ನಿಯೋಜನೆ ಮಾಡಲಾಗಿದೆ. ಮೈಸೂರು ನಗರದ ಸಿವಿಲ್ ಪೊಲೀಸರ ಜೊತೆಗೆ ಹೊರಗಿನಿಂದ ಬಂದಿರುವ ಪ್ಯಾರಾ ಮಿಲಿಟರಿ ಪಡೆಯ 240 ಶಸ್ತ್ರ ಸಜ್ಜಿತ ಸಿಬ್ಬಂದಿ, ಸಿಎಆರ್, ಕೆಎಸ್‌ಆರ್‌ಪಿ ಕಮಾಂಡೋ ಪಡೆ ಸಿಬ್ಬಂದಿಗಳನ್ನು ಚೆಕ್‌ಪೋಸ್ಟ್‌ಗಳಿಗೆ ವಾಹನ ತಪಾಸಣೆ ಮಾಡಲು ನಿಯೋಜಿಸಲಾಗಿದೆ.

2ನೇ ಹಂತದಲ್ಲಿ 4 ತುಕಡಿಯ 320 ಮಂದಿ ಅರೆ ಮಿಲಿಟರಿ ಪಡೆ ಸಿಬ್ಬಂದಿ ಇನ್ನೆರಡು ದಿನದಲ್ಲಿ ಮೈಸೂರಿಗೆ ಆಗಮಿಸಲಿದ್ದು, ಅವರನ್ನು ಸದ್ಯಕ್ಕೆ ವಾಹನ ತಪಾಸಣೆ ಮಾಡಲು ಚೆಕ್‌ಪೋಸ್ಟ್‌ಗಳಿಗೆ ನಿಯೋಜಿಸಲಾಗಿದೆ ಮೂರನೇ ಹಂತದ ಭದ್ರತಾ ಸಿಬ್ಬಂದಿ ಏಪ್ರಿಲ್ 20ರ ನಂತರ ಮೈಸೂರು ತಲುಪಲಿದ್ದು, ಈ ಬಾರಿ ಮತಗಟ್ಟೆಗಳಲ್ಲಿ ವ್ಯಾಪಕ ಬಂದೋಬಸ್ತ್ ಮಾಡಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಕಟ್ಟೆಚ್ಚರ ವಹಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಬಿ. ರಮೇಶ್ ತಿಳಿಸಿದ್ದಾರೆ.

ಅದೇ ರೀತಿ ಎಸ್ಪಿ ಸೀಮಾ ಲಾಟ್ಕರ್ ನೇತೃತ್ವದಲ್ಲಿ ಮೈಸೂರು ಜಿಲ್ಲೆ ವ್ಯಾಪ್ತಿಯ 40 ಪೊಲೀಸ್ ಚೆಕ್‌ಪೋಸ್ಟ್‌ಗಳಿಗೆ 400 ಮಂದಿ ಅರೆ ಮಿಲಿಟರಿ ಪಡೆ ಸಿಬ್ಬಂದಿಗಳನ್ನು ನಿಯೋಜಿಸಿ ವಾಹನಗಳ ತಪಾಸಣಾ ಕಾರ್ಯವನ್ನು ದಿನದ 24 ಗಂಟೆಯೂ ಮಾಡಲಾಗುತ್ತಿದ್ದು, ಹಣ, ಮದ್ಯ, ಚಿನ್ನಾಭರಣ, ಗೃಹೋಪಯೋಗಿ ವಸ್ತುಗಳ ಸಾಗಣೆ ನಿಯಂತ್ರಿಸಲಾಗುತ್ತಿದೆ.

ಈಗಾಗಲೇ ಎಲ್ಲಾ ತಾಲೂಕುಗಳ ಹೋಬಳಿ ಕೇಂದ್ರ, ಸೂಕ್ಷ್ಮ, ಅತೀ ಸೂಕ್ಷ್ಮ ಮತಗಟ್ಟೆಗಳಿರುವೆಡೆ ಪಥ ಸಂಚಲನದ ಮೂಲಕ ನಿರ್ಭೀತಿಯಿಂದ ಮತಗಟ್ಟೆಗಳಿಗೆ ಬಂದು ತಮ್ಮ ಹಕ್ಕು ಚಲಾಯಿಸುವಂತೆ ಸಾರ್ವಜನಿಕರಲ್ಲಿ ಜಿಲ್ಲಾ ಪೊಲೀಸರು ವಿಶ್ವಾಸ ಮೂಡಿಸುತ್ತಿದ್ದಾರಲ್ಲದೆ, ಅಹಿತಕರ ಘಟನೆಗಳಿಗೆ ಆಸ್ಪದ ನೀಡದಂತೆ ಎಚ್ಚರ ವಹಿಸುತ್ತಿದ್ದಾರೆ.

ಬುಧವಾರ ಸಂಜೆ ಎಸ್ಪಿ ಸೀಮಾ ಲಾಟ್ಕರ್, ಅಡಿಷನಲ್ ಎಸ್ಪಿ ಬಿ.ಎನ್. ನಂದಿನಿ, ಡಿವೈಎಸ್ಪಿಗಳಾದ ಶಿವಕುಮಾರ್, ಜಯರಾಂ ಅವರು ಇಲವಾಲ, ಸುತ್ತಮುತ್ತಲ ಗ್ರಾಮಗಳಲ್ಲಿ ಪಥಸಂಚಲನ ವೇಳೆ ಗ್ರಾಮಸ್ಥರನ್ನು ಭೇಟಿ ಮಾಡಿ ತಮ್ಮೊಂದಿಗೆ ನಾವಿದ್ದೇವೆ. ನೀವು ಯಾವುದೇ ಭಯವಿಲ್ಲದೆ, ನಿರ್ಭೀತಿಯಿಂದ ಮತ ಚಲಾಯಿಸಿ ಎಂದು ಧೈರ್ಯ ತುಂಬಿದರು.

ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಉಪವಿಭಾಗದ ಎಸಿಪಿಗಳಾದ ಗಜೇಂದ್ರ ಪ್ರಸಾದ್, ಎಸ್‌ಐ ಗಂಗಾಧರಸ್ವಾಮಿ, ಶಾಂತಮಲ್ಲಪ್ಪ, ಸಿ.ಕೆ.ಅಶ್ವತ್ಥನಾರಾಯಣರೊಂದಿಗೆ ಇಂದು ಮೈಸೂರಿನ ಸೂಕ್ಷ್ಮ, ಅತಿಸೂಕ್ಷ್ಮ ಹಾಗೂ ಕ್ಲಸ್ಟರ್ ಮತಗಟ್ಟೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬುಧವಾರದವರೆಗೆ ಎಲ್ಲಾ ಉಪವಿಭಾಗದ ಪೊಲೀಸ್ ಠಾಣಾ ವ್ಯಾಪ್ತಿಯ ಪ್ರಮುಖ ರಸ್ತೆಗಳಲ್ಲಿ ಪೊಲೀಸರು ಪಥಸಂಚಲನ ನಡೆಸಿ ಸಾರ್ವಜನಿಕರಲ್ಲಿ ವಿಶ್ವಾಸ ಮೂಡಿಸಿದರು.

## ಹೆಚ್.ಡಿ.ಕೋಟೆ ಚುನಾವಣಾಧಿಕಾರಿ ಕಚೇರಿ ಪರಿಶೀಲಿಸಿದ ಜಿಲ್ಲಾಧಿಕಾರಿ



ಮೈಸೂರು, ಏ.13(ಆರ್‌ಕೆ)–ಮೈಸೂರು ಜಿಲ್ಲಾ ಚುನಾವಣಾಧಿಕಾರಿಯಾದ ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಅವರು ಇಂದು ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರದ ಚುನಾವಣಾಧಿಕಾರಿ ಕಚೇರಿಗೆ ಭೇಟಿ ನೀಡಿ, ನಾಮಪತ್ರ ಸಲ್ಲಿಕೆಗೆ ಕೈಗೊಂಡಿರುವ ಪೂರ್ವ ಸಿದ್ಧತೆ ಪರಿಶೀಲಿಸಿದರು.

ಚುನಾವಣಾಧಿಕಾರಿ ಕುಮುದಾ ಶರತ್‌ರೊಂದಿಗೆ ಚರ್ಚಿಸಿದ ಅವರು, ನಾಮಪತ್ರ ಸ್ವೀಕರಿಸುವಾಗ ಅನುಸರಿಸಬೇಕಾದ ಕ್ರಮ, ಉಮೇದುವಾರಿಕೆ ಸಲ್ಲಿಸಲು ಬರುವವರಿಗೆ ನೀಡಬೇಕಾದ ಸೌಲಭ್ಯ, ಚುನಾವಣಾ ನೀತಿ ಸಂಹಿತೆ ಉಲ್ಲಂಘನೆಯಾಗದಂತೆ ಎಚ್ಚರ ವಹಿಸುವುದು, ಯಾವುದೇ ಗೊಂದಲ ಉಂಟಾದಾಗ ಕೈಗೊಳ್ಳಬೇಕಾದ ಪರಿಹಾರೋಪಾಯಗಳ ಕುರಿತಂತೆ ತಿಳುವಳಿಕೆ ನೀಡಿದರು.

ಅದೇ ವೇಳೆ ಚುನಾವಣಾ ಶಾಖೆಗೆ ತೆರಳಿ ಎಪಿಕ್ ಕಾರ್ಡ್‌ಗಳ ವಿತರಣೆ, ಹೊಸಬರನ್ನು ಮತದಾರರ ಪಟ್ಟಿಗೆ ಸೇರ್ಪಡಿಸುವ ಪ್ರಕ್ರಿಯೆಯನ್ನು ವೀಕ್ಷಿಸಿದ ಅವರು, ಪೋಸ್ಟಲ್ ಬ್ಯಾಲೆಟ್‌ಗಳನ್ನು ತಲುಪಿಸಲು ಮಾಡಬೇಕಾದ ಸಿದ್ಧತೆ ಬಗ್ಗೆಯೂ ಸೂಚನೆಗಳನ್ನು ನೀಡಿದರು.

ಹೆಚ್.ಡಿ.ಕೋಟೆ ಬಳಿಯ ಕಂಚಮಳ್ಳಿ ಪೊಲೀಸ್ ಚೆಕ್‌ಪೋಸ್ಟ್, ಜಯಪುರ ಬಳಿಯ ಹಾರೋಹಳ್ಳಿ ಚೆಕ್‌ಪೋಸ್ಟ್‌ನಲ್ಲಿ ವಾಹನ ತಪಾಸಣಾ ಕಾರ್ಯವನ್ನು ಪರಿಶೀಲಿಸಿದ ಡಾ. ರಾಜೇಂದ್ರ ಅವರು, ಫ್ಲೈಯಿಂಗ್ ಸ್ಕ್ವಾಡ್, ಸ್ಥಿರ ಕಣ್ಗಾವಲು ತಂಡದ ಅಧಿಕಾರಿಗಳು, ಅರೆ ಮಿಲಿಟರಿ ಪಡೆ ಸಿಬ್ಬಂದಿಗಳು ನಿಯೋಜಿತ ಅವಧಿಯಲ್ಲಿ ಕಡ್ಡಾಯವಾಗಿ ಕರ್ತವ್ಯಕ್ಕೆ ಹಾಜರಾಗಿ ಆ ಮಾರ್ಗ ಸಂಚರಿಸುವ ವಾಹನಗಳನ್ನು ಪರಿಶೀಲಿಸಿ, ಅಕ್ರಮವಾಗಿ ಹಣ, ಮದ್ಯ, ಆಭರಣ ಅಥವಾ ಯಾವುದೇ ವಸ್ತುಗಳನ್ನು ಸಾಗಣೆ ಮಾಡುತ್ತಿರುವುದು ಕಂಡುಬಂದಲ್ಲಿ ನಿಯಮಾನುಸಾರ ಕ್ರಮ ವಹಿಸುವಂತೆ ಸೂಚಿಸಿದರು.



# ಹಂಟರ್
## ಜೊತೆಯಾದ ಶರತ್‌ಕುಮಾರ್-ಸುಮನ್

ಮಾಸ್, ಆಕ್ಷನ್ ಥ್ರಿಲ್ಲರ್ ಕಥಾಹಂದರ ಹೊಂದಿದ ಹಂಟರ್ ಚಿತ್ರದ ಚಿತ್ರೀಕರಣ ನೆಲಮಂಗಲ ಬಳಿಯ ಮೋಹನ್ ಬಿ.ಕೆರೆ ಸ್ಟುಡಿಯೋದಲ್ಲಿ ನಡೆಯುತ್ತಿದೆ. ಪೊಲೀಸ್ ಠಾಣೆಯ ಸೆಟ್‌ನಲ್ಲಿ ಶರತ್‌ಕುಮಾರ್ ಹಾಗೂ ಸುಮನ್ ಅಭಿನಯದ ದೃಶ್ಯವನ್ನು ನಿರ್ದೇಶಕ ವಿನಯಕೃಷ್ಣ ಸೆರೆ ಹಿಡಿಯುತ್ತಿದ್ದರು, ನಿರಂಜನ್, ಸುಧೀಂದ್ರ, ಸೌಮ್ಯ ಮೆನನ್ ಅಭಿನಯದ ಈ ಚಿತ್ರವನ್ನು ತ್ರಿವಿಕ್ರಮ ಸಾಫಲ್ಯ ನಿರ್ಮಿಸುತ್ತಿದ್ದಾರೆ. ಮಾಧ್ಯಮದವರೊಂದಿಗೆ ಮಾತನಾಡಿದ ಅವರು ನಮ್ಮ ಸಂಸ್ಥೆಯ 4ನೇ ಹಾಗೂ ಮೊದಲ ಪ್ಯಾನ್ ಇಂಡಿಯಾ ಚಿತ್ರವಿದು. ಈಗಾಗಲೇ ಬಳ್ಳಾರಿಯ ಮೈನಿಂಗ್ ಫ್ಯಾಕ್ಟರಿಯಲ್ಲಿ ಭರ್ಜರಿ ಆಕ್ಷನ್ ಸೀನ್ ಮಾಡಿದ್ದೇವೆ. ಚಂದನ್ ಶೆಟ್ಟಿ ಮ್ಯೂಸಿಕ್ ಮಾಡಿದ್ದಾರೆ, ಕಬೀರ್ ಬೇಡಿ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ ಎಂದರು.

ನಿರ್ದೇಶಕ ವಿನಯ್‌ಕೃಷ್ಣ ಮಾತನಾಡಿ, ನನ್ನ ಎರಡನೇ ಚಿತ್ರ. ಬಿಗ್ ಸ್ಟಾರ್ ಕಾಸ್ಟ್ ಜೊತೆಗೆ ಪ್ರೇಕ್ಷಕರನ್ನು ಕುರ್ಚಿಯ ತುದಿಯಲ್ಲಿ ಕೂರಿಸುವಂಥ ಕಥೆಯಿದೆ. ಈಗಾಗಲೇ ಶೇ.70ರಷ್ಟು ಶೂಟಿಂಗ್ ಮುಗಿದಿದ್ದು, 26 ದಿನಗಳ ಚಿತ್ರೀಕರಣ ಬಾಕಿಯಿದೆ. ನವೆಂಬರ್ ವೇಳೆಗೆ ರಿಲೀಸ್ ಮಾಡುವ ಯೋಜನೆಯಿದೆ ಎಂದರು, ನಾಯಕ ನಿರಂಜನ್ ಮಾತನಾಡಿ, ಕಂಪ್ಲೀಟ್ ಕಮರ್ಷಿಯಲ್ ಆಕ್ಷನ್ ಥ್ರಿಲ್ಲರ್ ಚಿತ್ರವಿದು. ಶಿವ ಎನ್ನುವ ಯಾರಿಗೂ ಕೇರ್ ಮಾಡದ, ಮಾಸ್ ರೌಡಿ ಥರದ ಪಾತ್ರ, ಹಂಟರ್ ಅಂದ್ರೇನು ಅನ್ನೋದು ಸಿನಿಮಾದಲ್ಲೇ ಗೊತ್ತಾಗುತ್ತದೆ. ಚಿತ್ರದಲ್ಲಿ ಎಲ್ಲರ ಪಾತ್ರಕ್ಕೂ 2 ಶೇಡ್ಸ್ ಇದೆ ಎಂದರು. ನಂತರ ಸುಮನ್ ಮಾತನಾಡಿ, ಮೊದಲ ಬಾರಿಗೆ ಹೆಡ್ ಕಾನ್ಸ್‌ಟೇಬಲ್ ಪಾತ್ರ ಮಾಡಿದ್ದೇನೆ. ಕಥೆಯಲ್ಲಿ ಆಕ್ಷನ್, ಟ್ವಿಸ್ಟ್‌ಗಳ ಜೊತೆಗೆ ಫ್ಯಾಮಿಲಿ ಸೆಂಟಿಮೆಂಟ್ ಕೂಡ ಇದೆ. ಶರತ್ ಮಗನಾಗಿ ಕಾಣಿಸಿಕೊಂಡಿರುವ ನಿರಂಜನ್, ಹೀರೋ ಕೂಡ ಟಫ್ ಆಗಿರಬಹುದು ಎಂದು ತೋರಿಸಿಕೊಟ್ಟಿದ್ದಾರೆ ಎಂದರು. ಶರತ್‌ಕುಮಾರ್ ಮಾತನಾಡುತ್ತಾ, ಈ ಚಿತ್ರದ ಕಥೆಯೇ ವಿಭಿನ್ನವಾಗಿದೆ. ಇಲ್ಲಿ ನಾನು ನಾಯಕನ ತಂದೆಯಾಗಿ ನಟಿಸಿದ್ದೇನೆ. ನಿರಂಜನ್ ಪ್ರತಿಭಾವಂತ ಹುಡುಗ ಆರಂಭದಲ್ಲಿ ಕ್ಯಾಮೆರಾ ಎದುರಿಸುವಾಗ ನಾನು ಕೂಡ 7 ಟೇಕ್ಸ್ ತಗೋಡಿದ್ದೆ, ನನ್ನ ಜೊತೆ ನಟಿಸಿದ್ದ ವಿಜಯಶಾಂತಿ ಸಿಟ್ಟಾಗಿದ್ರು ಎಂದು ಆ ದಿನಗಳನ್ನು ನೆನಪಿಸಿಕೊಂಡರು. ಜೈಆನಂದ್ ಅವರ ಛಾಯಾಗ್ರಹಣ, ಕೆಜಿಎಫ್ ಖ್ಯಾತಿಯ ಶ್ರೀಕಾಂತ್ ಅವರ ಸಂಕಲನ ಚಿತ್ರಕ್ಕಿದೆ.



## 'ಎಲ್ರ ಕಾಲೆಳೆಯುತ್ತೆ ಕಾಲ' ಪ್ರೊಮೋಷನ್ ಹಾಡು

ಘಟನೆಯೊಂದು ವ್ಯಕ್ತಿಯ ಜೀವನದಲ್ಲಿ ಯಾವ ರೀತಿ ಪ್ರಮುಖ ಪಾತ್ರ ವಹಿಸುತ್ತದೆ, ಅಲ್ಲದೆ ಕಾಲ ಯಾರನ್ನೂ ಸಹ ಬಿಡುವುದಿಲ್ಲ, ಎಲ್ಲರ ಕಾಲನ್ನೂ ಎಳೆಯುತ್ತದೆ ಎನ್ನುವ ಕಂಟೆಂಟ್ ಇಟ್ಟುಕೊಂಡು ತಯಾರಾಗಿರುವ ಚಿತ್ರ ಎಲ್ರ ಕಾಲೆಳೆಯುತ್ತೆ ಕಾಲ. ಇತ್ತೀಚೆಗೆ ಈ ಚಿತ್ರಕ್ಕಾಗಿ ಚಂದನ್ ಶೆಟ್ಟಿ, ಮಂಗ್ಲೀ ಹಾಡಿರುವ ಟುನ್ ಟುನ್... ಎಂಬ ಪ್ರೊಮೋಷನ್ ಹಾಡನ್ನು ಬಿಡುಗಡೆ ಮಾಡಲಾಯಿತು, ಈ ಗೀತೆಯಲ್ಲಿ ನಾಯಕ ಚಂದನ್ ಶೆಟ್ಟಿ ಜೊತೆ ರಾಗಿಣಿ ದ್ವಿವೇದಿ ಹೆಜ್ಜೆ ಹಾಕಿದ್ದಾರೆ. ಅಂದಹಾಗೆ ರೆಟ್ರೋ ಶೈಲಿಯ ಕಥೆ ಹೊಂದಿರುವ ಈ ಚಿತ್ರಕ್ಕೆ ಸುಜಯ್‌ಶಾಸ್ತ್ರಿ ಆಕ್ಷನ್‌ಕಟ್ ಹೇಳಿದ್ದು, ಉಷಾ ಗೋವಿಂದರಾಜು ಅವರು ನಿರ್ಮಿಸಿದ್ದಾರೆ. ಅರ್ಚನಾ ಕೊಟ್ಟಿಗೆ ಚಿತ್ರದ ನಾಯಕಿ.

ಈ ಸಂದರ್ಭದಲ್ಲಿ ಮಾತನಾಡಿದ ಚಿತ್ರದ ಸುಜಯ್‌ಶಾಸ್ತ್ರಿ, ಇದು ನನ್ನ ಎರಡನೇ ಚಿತ್ರ. 80-90ರ ದಶಕದ ಕಥೆಯೊಂದನ್ನು ಮಾಡಬೇಕೆಂದು ನನಗೆ ಮೊದಲಿಂದಲೂ ಆಸೆಯಿತ್ತು. ಅದಕ್ಕೀಗ ಕಾಲ ಕೂಡಿಬಂದಿದೆ. ಇದು ಪ್ರಮೋಷನಲ್ ಸಾಂಗ್. ಆದಷ್ಟು ಬೇಗನೇ ಚಿತ್ರವನ್ನು ಬಿಡುಗಡೆ ಮಾಡುತ್ತೇವೆ ಎಂದರು. ನಿರ್ಮಾಪಕ ಗೋವಿಂದರಾಜು ಮಾತನಾಡಿ, ಇದು ನಮ್ಮ ಗೋಕುಲ ಎಂಟರ್‌ಪ್ರೈಸಸ್ ಬ್ಯಾನರ್‌ನ ಮೂರನೇ ಚಿತ್ರ. ಪ್ರೇಕ್ಷಕರನ್ನು 80-90ನೇ ಸೆಂಚುರಿಗೆ ಕರೆದುಕೊಂಡು ಹೋಗುತ್ತದೆ. ಸಿನಿಮಾ ತುಂಬಾ ಚೆನ್ನಾಗಿ ಮೂಡಿಬಂದಿದ್ದು, ನಿರ್ದೇಶಕರು ಹೇಳಿದ್ದಕಿಂತ ಅದ್ಭುತವಾಗಿ ಚಿತ್ರವನ್ನು ಕಟ್ಟಿಕೊಟ್ಟಿದ್ದಾರೆ. ಸಂಪೂರ್ಣ ಮನರಂಜನಾತ್ಮಕ ಚಿತ್ರ.

ಸುಜಯ್ ಬಂದು ಈ ಕಥೆ ಹೇಳಿದಾಗ ಕಂಟೆಂಟ್ ಇಷ್ಟವಾಯ್ತು. ನಂತರ ಹೀರೋ ಯಾರೆಂದು ಕೇಳಿದಾಗ ಚಂದನ್ ಎಂದರು. ನಾನು ಮರುಮಾತನಾಡದೆ ನಿರ್ಮಾಣಕ್ಕೆ ಮುಂದಾದೆ ಎಂದರು. ಇದೇ ಸಂದರ್ಭದಲ್ಲಿ ಹಾಡಿನಲ್ಲಿ ನಟಿಸಿರುವ ರಾಗಿಣಿ ಮಾತನಾಡಿ ಹಾಡಿನ ಬಗ್ಗೆ ಅನುಭವ ಹಂಚಿಕೊಂಡರು. ವೇದಿಕೆಯಲ್ಲಿ ನಾಯಕ ಚಂದನ್ ಶೆಟ್ಟಿ, ನಾಯಕಿ ಅರ್ಚನಾ ಕೊಟ್ಟಿಗೆ, ಛಾಯಾಗ್ರಾಹಕ ವಿಶ್ವಜೀತ್‌ರಾವ್ ಇವರೆಲ್ಲ ಚಿತ್ರದ ಕುರಿತಂತೆ ಮಾತನಾಡಿದರು. ಚಿತ್ರಕ್ಕೆ ಚಿತ್ರಕಥೆ ಬರೆದಿರುವ ರಾಜ್‌ಗುರು ಹೊಸಕೋಟೆ 80-90ರ ದಶಕದಲ್ಲಿ ನಡೆಯುವ ಕಥೆಯಿದು ಎಂದರು. ಪ್ರವೀಣ್, ಪ್ರದೀಪ್ ಚಿತ್ರಕ್ಕೆ ಸಂಗೀತ ಸಂಯೋಜಿಸಿದ್ದಾರೆ. ತಾರಾಗಣದಲ್ಲಿ ತಾರಾ ಅನುರಾಧಾ, ಮಂಡ್ಯ ರಮೇಶ್, ಮಂಜು ಪಾವಗಡ, ದತ್ತಣ್ಣ ಮುಂತಾದವರಿದ್ದಾರೆ.



## 'ಚಾಂದಿನಿ ಬಾರ್' ಟ್ರೈಲರ್

ಮೈಸೂರಿನ ರಾಘವೇಂದ್ರ ಮತ್ತು ಗೆಳೆಯರೆಲ್ಲ ಸೇರಿ ಚಾಂದಿನಿ ಬಾರ್ ಎಂಬ ಚಿತ್ರವನ್ನು ಮಾಡಿದ್ದಾರೆ. ಚಿತ್ರದ ಹೆಸರು ಕೇಳಿದಾಕ್ಷಣ ಇದೇನು ಬಾರ್‌ಗಳ ಬಗ್ಗೆ ಮಾಡಿರುವ ಕಥೆಯಿರಬಹುದು ಎಂದು ಅನಿಸಬಹುದು. ಆದರೆ ಇಲ್ಲಿ ನಿರ್ದೇಶಕರು ಹೇಳಹೊರಟಿರುವ ಕಥೆಯೇ ಬೇರೆ. ಇದೇ ತಿಂಗಳ 21ರಂದು ಬಿಡುಗಡೆಯಾಗುತ್ತಿರುವ ಈ ಚಿತ್ರದ ಟ್ರೈಲರ್ ಎ2 ಮ್ಯೂಸಿಕ್‌ನಲ್ಲಿ ರಿಲೀಸಾಗಿದೆ.

ನಿರ್ದೇಶಕ ರಾಘವೇಂದ್ರ ಮಾತನಾಡುತ್ತಾ, ನಮ್ಮ ಚಿತ್ರವನ್ನು ದೇಶದ ರೈತರು ಹಾಗೂ ವೀರ ಯೋಧರಿಗೆ ಅರ್ಪಣೆ ಮಾಡು ತ್ತಿದ್ದೇವೆ. ಚಿತ್ರದಲ್ಲಿ ಅವರ ಬಗ್ಗೆ ಹೇಳಿದ್ದೇವೆ. ಬಾರ್‌ನಲ್ಲಿ ಕೆಲಸ ಮಾಡುತ್ತ ತಮ್ಮ ಬದುಕು ಕಟ್ಟಿಕೊಂಡವರ ಹಿಂದಿನ ಕಥೆಯನ್ನು ಈ ಚಿತ್ರದಲ್ಲಿ ಹೇಳಿದ್ದೇವೆ. ಬರಗೂರು ರಾಮಚಂದ್ರಪ್ಪ, ಮಂಜು ಸ್ವರಾಜ್ ಅವರ ಬಳಿ ನಿರ್ದೇಶನದ ಪಾಠ ಕಲಿತು ಮೊದಲ ಬಾರಿಗೆ ಈ ಸಿನಿಮಾಗೆ ಆಕ್ಷನ್ ಕಟ್ ಹೇಳಿದ್ದೇನೆ. ಚಾಂದಿನಿಬಾರ್ ಚಿತ್ರವನ್ನು ಏಪ್ರಿಲ್ 21ರಂದು ಬಿಡುಗಡೆ ಮಾಡಲು ಸಿದ್ಧತೆಗಳು ನಡೆದಿವೆ ಎಂದರು. ಚಿತ್ರದ ಟೀಸರ್ ಹಾಗೂ 3 ಹಾಡುಗಳು ಬಿಡುಗಡೆಯಾಗಿ ವೈರಲ್ ಆಗಿವೆ. ನಿರ್ದೇಶಕ ರಾಘವೇಂದ್ರ ಅವರೇ ನಾಯಕನಾಗಿ ನಟಿಸಿದ್ದು, ಸುಕೃತಿ ಪ್ರಭಾಕರ್ ನಾಯಕಿಯ ಪಾತ್ರ ನಿರ್ವಹಿಸಿದ್ದಾರೆ. ಕಥೆ ಮಾಡಿಕೊಂಡ ಮೇಲೆ ಹೊಸಬರನ್ನು ನಂಬಿ ಹಣ ಹೂಡಲು ಯಾರೂ ಮುಂದೆ ಬರಲಿಲ್ಲ, ಕೊನೆಗೆ ನಾವೆಲ್ಲ ಸ್ನೇಹಿತರೂ ಸೇರಿ ಈ ಚಿತ್ರವನ್ನು ನಿರ್ಮಿಸಿದ್ದೇವೆ. ಚಾಂದಿನಿ ಬಾರ್‌ನಲ್ಲಿ ಒಂದಷ್ಟು ವ್ಯಕ್ತಿಗಳ ಜೀವನದ ಕಥೆಯನ್ನು ಹೇಳಿದ್ದೇವೆ. ಬಾರ್‌ನಲ್ಲಿ ಕೆಲಸ ಮಾಡುವ ಸಪ್ಲೈಯರ್ ಆಗಿ ನಾನು ಈ ಚಿತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಬಾರ್‌ನಲ್ಲಿ ಕೆಲಸ ಮಾಡೋ ಹುಡುಗನಲ್ಲಿ ಪ್ರೀತಿ ಹೇಗೆ ಹುಟ್ಟುತ್ತೆ, ಹೇಗೆ ಬ್ರೇಕಪ್ ಆಗುತ್ತೆ, ನಂತರ ಆತನ ಜೀವನ ಹೇಗೆ ಸಾಗುತ್ತೆ ಎಂಬುದನ್ನು ಒಂದಷ್ಟು ತಿರುವುಗಳ ಮೂಲಕ ಹೇಳಲು ಪ್ರಯತ್ನಿಸಿದ್ದೇವೆ. ಈ ಕಥೆಯಲ್ಲಿ ವೇಶ್ಯೆಯೊಬ್ಬಳ ಪಾತ್ರವೂ ಬರುತ್ತದೆ. ಮೈಸೂರು ಸುತ್ತಮುತ್ತ 43 ದಿನ ಶೂಟಿಂಗ್ ಮಾಡಿದ್ದೇವೆ, ಚಿತ್ರದಲ್ಲಿ ಒಟ್ಟು 5 ಹಾಡುಗಳಿದ್ದು, ಅದರಲ್ಲಿ 2 ಡ್ಯುಯೆಟ್ ಹಾಡು, ಒಂದು ಟೈಟಲ್ ಸಾಂಗ್, ಎಣ್ಣೆ ಸಾಂಗ್ ಹಾಗೂ ಪ್ಯಾಥೋ ಸಾಂಗ್ ಕೂಡ ಇದೆ. ವಿಶಾಖ ನಾಗಲಾಪುರ ಹಾಗೂ ಕಾರ್ತಿಕ್ ನಾಗಲಾಪುರ ಅವರು ಸಂಗೀತ ಸಂಯೋಜನೆ ಮಾಡಿದ್ದಾರೆ ಎಂದು ನಿರ್ದೇಶಕರು ಹೇಳಿದರು.

## ಈ ವಾರ ತೆರೆಗೆ ಉಂಡೆನಾಮ


ಹಾಸ್ಯನಟ ಕೋಮಲ್ ನಾಯಕರಾಗಿ ನಟಿಸಿರುವ ಉಂಡೆನಾಮ ಈ ವಾರ ತೆರೆ ಕಾಣುತ್ತಿದೆ. ಮೊನ್ನೆ ಚಿತ್ರದ ಟ್ರೇಲರ್‌ನ್ನು ನವರಸನಾಯಕ ಜಗ್ಗೇಶ್ ಅವರು ಬಿಡುಗಡೆ ಮಾಡಿದರು. ಈ ಚಿತ್ರದಲ್ಲಿ ಕೋಮಲ್ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕಾಣಿಸಿಕೊಂಡಿದ್ದು, ಕೋವಿಡ್ ಸಂದರ್ಭದಲ್ಲಿ ನಡೆಯುವ ಘಟನೆಗಳು, ಅದರಿಂದ ಯಾರ್‍ಯಾರು ಏನೇನೆಲ್ಲ ತೊಂದರೆಗಳನ್ನು ಅನುಭವಿಸಿದರು ಎಂಬುದನ್ನು ನಿರ್ದೇಶಕ ರಾಜಶೇಖರ್ ಅವರು ಹೇಳಿದ್ದಾರೆ. ನಟ ಜಗ್ಗೇಶ್ ಮಾತನಾಡುತ್ತಾ, ನನ್ನ ತಮ್ಮ ಕೋಮಲ್ ಬಹಳ ವರ್ಷಗಳ ನಂತರ ನಟಿಸಿದ್ದಾರೆ. ಆತನ ಪಾತ್ರಗಳನ್ನು ನೋಡಿದಾಗ, ಎಷ್ಟೋ ಸಲ ನಾನೂ ಇವನಹಾಗೆ ಕಾಮಿಡಿ ಕಲಿಯಬೇಕು ಅಂದುಕೊಂಡಿದ್ದೆ. ಆತ ಉತ್ತಮ ಕಲಾವಿದ. ನಿರ್ದೇಶಕರು ಲಾಕ್‌ಡೌನ್ ಸನ್ನಿವೇಶವನ್ನಿಟ್ಟುಕೊಂಡು ಹಾಸ್ಯಮಯ ಚಿತ್ರ ರೂಪಿಸಿದ್ದಾರೆ ಎಂದು ಶುಭ ಹಾರೈಸಿದರು.

ನಾಯಕ ಕೋಮಲ್ ಮಾತನಾಡುತ್ತಾ, ದೇರ್ಶಕ ರಾಜಶೇಖರ್ ಅವರು ಹೇಳಿದ ಕಥೆ ನನಗೆ ತುಂಬಾ ಇಷ್ಟವಾಯಿತು. ನನ್ನ ಜೊತೆ ನಟಿಸಿರುವ ತಬಲ ನಾಣಿ, ಹರೀಶ್‌ರಾಜ್ ಸೇರಿದಂತೆ ಎಲ್ಲಾ ಕಲಾವಿದರ ಅಭಿನಯ ತುಂಬಾ ಚೆನ್ನಾಗಿದೆ ಎಂದು ಹೇಳಿದರು. ರಾಜಶೇಖರ್ ಮಾತನಾಡಿ ಮೊದಲ ಲಾಕ್‌ಡೌನ್ ಸಂದರ್ಭದಲ್ಲಿ ನಾನು ಈ ಕಥೆ ಬರೆದೆ. ಆನಂತರ ನಿರ್ಮಾಪಕ ನಂದಕಿಶೋರ್ ಅವರ ಬಳಿ ಕಥೆ ಹೇಳಿದಾಗ ಅವರು ಈ ಚಿತ್ರದಲ್ಲಿ ಕೋಮಲ್ ನಾಯಕನಾಗಿ ಅಭಿನಯಿಸಬೇಕು ಎಂದರು. ನಾನು ಕೋಮಲ್ ಅವರಿಗಾಗಿಯೇ ಈ ಕಥೆ ಮಾಡಿದೆ. ಆದರೆ ಅವರು ನಟಿಸಲು ಒಪ್ಪುತ್ತಾರೊ, ಇಲ್ಲವೊ ಎಂಬ ಆತಂಕವಿತ್ತು. ಅವರಿಗೆ ಹೋಗಿ ಕಥೆ ಹೇಳಿದಾಗ, ಕಂಟೆಂಟ್ ತುಂಬಾ ಚೆನ್ನಾಗಿದೆ. ನಾನಲ್ಲ, ಯಾರೇ ಮಾಡಿದರೂ ಚಿತ್ರ ಯಶಸ್ವಿಯಾಗುತ್ತದೆ ಎಂದರು. ಅದು ಅವರ ದೊಡ್ಡ ಗುಣ. ಚಿತ್ರದಲ್ಲಿ ಅವರೊಬ್ಬ ಐಟಿ ಉದ್ಯೋಗಿಯಾಗಿ ಕಾಣಿಸಿಕೊಂಡಿದ್ದಾರೆ. ಚಿತ್ರಕ್ಕೆ ಸಹಕಾರ ನೀಡಿದ ನಿರ್ಮಾಪಕರಿಗೆ, ತಂತ್ರಜ್ಞರಿಗೆ ಹಾಗೂ ಕಲಾವಿದರಿಗೆ ಧನ್ಯವಾದ ಎಂದರು,

ಚಿತ್ರದ ನಿರ್ಮಾಪಕ ಟಿ.ಆರ್.ಚಂದ್ರಶೇಖರ್ ಹಾಗೂ ಸಿ.ನಂದಕಿಶೋರ್ ಮಾತನಾಡುತ್ತಾ, ನಮ್ಮ ಟ್ರೈಲರ್ ಬಿಡುಗಡೆ ಮಾಡಿಕೊಟ್ಟ ಜಗ್ಗೇಶ್ ಅವರಿಗೆ ಧನ್ಯವಾದ. ಇಡೀ ತಂಡದ ಶ್ರಮದಿಂದ ಉಂಡ 'ನಾಮ ಚಿತ್ರ ಚೆನ್ನಾಗಿ ಮೂಡಿಬಂದಿದ್ದು ಇದೇ ಶುಕ್ರವಾರ ಬಿಡುಗಡೆಯಾಗಲಿದೆ ಎಂದರು. ಕಲಾವಿದರಾದ ಹರೀಶ್‌ರಾಜ್, ತಬಲಾನಾಣಿ, ಅಪೂರ್ವ ಹಾಗೂ ಸಂಗೀತ ನಿರ್ದೇಶಕ ಶ್ರೀಧರ್ ವಿ.ಸಂಭ್ರಮ್ ಸಿನಿಮಾ ಕುರಿತಂತೆ ಮಾತನಾಡಿದರು.




## ಸಿನಿಪದಬಂಧ-469
ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ____

ವಿಳಾಸ ____

ದೂರವಾಣಿ ಸಂಖ್ಯೆ ____

### ಎಡದಿಂದ ಬಲಕ್ಕೆ
1. ತನ್ನವಳ ಪ್ರೀತಿಗಾಗಿ ಬೆಲೆಬಾಳುವ ಮಣಿಗೆ ಹೋರಾಡಿದ ರಾಜ್ ಚಿತ್ರಕ್ಕೆ ಶಂಕರ್ ನಾಗ್ ನಿರ್ದೇಶಕ 7
6. ಅನಂತ್ ನಾಗ್ ಪ್ರೀತಿಯಲ್ಲಿ ಮುಗಿಯದ ಮಾತು 4
7. ಹುಟ್ಟಿದ ಮನೆಯಲ್ಲಿ ಎಳೆದ ರಥ 6
8. ಕನ್ನಡದ ಲವ್ ಸ್ಟೋರಿ 4
9. ಕಿರಂಗೂರಿನ ಗಯ್ಯಾಳಿಗಳು ಚಿತ್ರದ ಕತೆಗಾರ ಇಲ್ಲಿ ಹೆಸರಿನ ಕೊನೆ ತಿರುಗಿದ್ದಾನೆ 3
11. ಗೀತಾ ಅಭಿನಯದ ಸರ್ಪ ಸ್ತ್ರೀ 3
13. ಹಠವಾದಿಯಂತಿರುವ ಚಿತ್ರ 4
15. ಇಂದ್ರಜಿತ್‌ನ ಹೆಂಡತಿ ರಾವಣನ ಸೊಸೆಯು ಹೌದು 6
16. ಸುನಾದ್ ರಾಜ್ ಅಭಿನಯದ ಮೋಡಗಳ ಸರ 4
17. ಅಂಬರೀಶ್ – ಗೀತಾ ಅಭಿನಯಕ್ಕೆ ಈರಂಕಿ ಶರ್ಮಾ ನಿರ್ದೇಶಕ 7



ವಿಜೇತರು: ಪಾವನಿ ಎಂ.ಆರ್, 62, 2ನೇ ಕ್ರಾಸ್, ಎಫ್-ಬ್ಲಾಕ್, ಜೆ.ಪಿ.ನಗರ

### ಸಿನಿ ಪದಬಂಧ 468ರ ಸರಿ ಉತ್ತರ

| | | | | | | | | | | |
|---|---|---|---|---|---|---|---|---|---|---|
| ಅ | ಮೂ | ಲ್ಯ | | | | ಅ | ಭಿ | ಮ | ನ್ಯು | |
| ಬ | | | ಕ | ರಾ | ಟೆ | | | ಹಾ | | ಇ |
| ಚೂ | | ಕೂ | | ಜ | | ಮೂ | | ಸ | ಸ್ಪೆ | ನ್ಸ್ |
| ರಿ | ಯ | ಲ್ | | ಕು | | ರೂ | | ತಿ | | ಪೆ |
| ನ | | | | ಮಾ | ನ | ವ | | | | ಕ್ಟ |
| ಪೋ | # | # | # | ರ್ | | ರೆ | ಬೆ | ಲ್ | ಸ್ಟಾ | ರ್ |
| ಸ್ಟ | | | | ಭಾ | ರ್ಗ | ವ | | | | ಕ್ರಾಂ |
| ಆ | | ಎ | | ರ | | ಪ್ರ | | ಸ | ವ | ತಿ |
| ಫೀ | ನಿ | ಕ್ಸ್ | | ತಿ | | ಗ | | ತ್ಯಂ | | ಕು |
| ಸ್ | | ಪ್ರೆ | | | ಅ | ಳು | ಕು | | | ಮಾ |
| | ಲೂ | ಸ್ | ಮಾ | ದ | | | | ಅ | ಮ | ರ್ |

### ಮೇಲಿನಿಂದ ಕೆಳಕ್ಕೆ
2. "ಕಂಗಳು ವಂದನೆ ಹೇಳಿದೆ ಹೃದಯವು ತುಂಬಿ ಹಾಡಿದೆ...,"ಗೀತೆಯ ಚಿತ್ರ 6
3. ನಟ ರಾಜೇಶ್ ಬಿರುದು 5
4. ಸಂಜನಾ ಹರಿಸಿದ ದೊಡ್ಡ ಹೊಳೆ 4
5. ವಿಷ್ಣುವರ್ಧನ್ – ಜಯಂತಿಗೆ ಸಿಕ್ಕ ಭಗವಂತನ ಅನುಗ್ರಹ 7
8. ಪ್ರೀತಿಸುವವರ ಪಂಥಾಹ್ವಾನ 7
10. ಎರಡು ರೇಖೆಗಳು ಚಿತ್ರದ ಹಾಡೊಂದರ ಆರಂಭ 6
12. ಅಂಬರೀಶ್ – ಸುಧಾರಾಣಿ ಅಭಿನಯದ ಚಿತ್ರ ಇಲ್ಲಿ ತಲೆಕೆಳಗು 5
14. ತಗ್ಗಿದ ದನಿಯಲ್ಲಿ ಕಿವಿಯಲ್ಲಿ ಹೇಳಿದ ನುಡಿ 4

'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

## ಇಂದಿನಿಂದ ಓಟಿಟಿಯಲ್ಲಿ ಕಬ್ಜ

ನಿರ್ದೇಶಕ ಆರ್.ಚಂದ್ರು ಅವರ ಕನಸಿನ ಚಿತ್ರ ಕಬ್ಜ ದೇಶಾದ್ಯಂತ ಯಶಸ್ವಿಯಾಗಿ ಪ್ರದರ್ಶನ ಕಾಣುತ್ತಿರುವಾಗಲೇ ಸಾಮಾಜಿಕ ಜಾಲತಾಣಕ್ಕೆ ಎಂಟ್ರಿ ಕೊಟ್ಟಿದೆ. ಉಪೇಂದ್ರ, ಕಿಚ್ಚ ಸುದೀಪ್, ಸೆಂಚುರಿ ಸ್ಟಾರ್ ಶಿವಣ್ಣರಂಥ ಮಲ್ಟಿ ಸ್ಟಾರರ್ ಅಭಿನಯಿಸಿದ, ರೆಟ್ರೋ ಸ್ಟೈಲ್‌ನ ಅಂಡರ್ ವರ್ಲ್ಡ್ ಕತೆ ಹೊಂದಿರುವ 2023ರ ಮೊದಲ ಪ್ಯಾನ್ ಇಂಡಿಯಾ ಚಿತ್ರವಾಗಿ 'ಕಬ್ಜ' ಸಾವಿರಾರು ಸ್ಕ್ರೀನ್‌ಗಳಲ್ಲಿ ತೆರೆಕಂಡು ಪ್ರೇಕ್ಷಕರಿಂದ ಅಪಾರ ಮೆಚ್ಚುಗೆ ಗಳಿಸಿತ್ತು, ಚಿತ್ರದ ನಿರ್ದೇಶಕ ಕಮ್ ನಿರ್ಮಾಪಕರೂ ಆದ ಆರ್.ಚಂದ್ರು ಅವರು ಗೆಲುವಿನ ಸಂತಸ ಹಂಚಿಕೊಂಡು ಕಬ್ಜ ಚಿತ್ರದ ಸೀಕ್ವೆಲನ್ನು ಆದಷ್ಟು ಬೇಗನೇ ಪ್ರಾರಂಭಿಸುವುದಾಗಿ ಹೇಳಿದ್ದರು. ಇದರ ಮಧ್ಯೆ ಈಗ ಸಿನಿಮಾ ಇಂದಿನಿಂದ ಅಮೇಜಾನ್ ಪ್ರೈಮ್ ಓಟಿಟಿಗೆ ಬಂದಿದೆ ಗ್ಯಾಂಗ್‌ಸ್ಟರ್ ವಾರ್ ಕಥಾಹಂದರ ಒಳಗೊಂಡ ಕಬ್ಜ ಚಿತ್ರದಲ್ಲಿ ಉಪ್ಪಿ ಲಾಂಗ್ ಹಿಡಿದು ಮಾಸ್ ಅವತಾರದಲ್ಲಿ ಕಾಣಿಸಿ ಕೊಂಡಿದ್ದಾರೆ. ಕಿಚ್ಚ ಸುದೀಪ್, ಹಾಗೂ ಶಿವರಾಜ್ ಕುಮಾರ್ ಅವರ ಪಾತ್ರಗಳೂ ಸಿನಿಮಾದಲ್ಲಿ ಗಮನ ಸೆಳೆದಿದೆ ಈಗ ಅಮೇಜಾನ್ ಪ್ರೈಮ್ ಸಂಸ್ಥೆಯು ಕಬ್ಜ ಸಿನಿಮಾದ ಓಟಿಟಿ ಹಕ್ಕನ್ನು ದೊಡ್ಡ ಮೊತ್ತಕ್ಕೆ ಖರೀದಿಸಿದ್ದು, ಏ.14ರಿಂದ ಅಮೇಜಾನ್ ಪ್ರೈಮ್ ಓಟಿಟಿಯಲ್ಲಿ ಪ್ರದರ್ಶನವನ್ನು ಆರಂಭಿಸಲಿದೆ. ಉಪೇಂದ್ರ ಸುದೀಪ್, ಶ್ರೀಯಾ ಶರಣ್ ಸೇರಿದಂತೆ ದಕ್ಷಿಣ, ಉತ್ತರ ಭಾರತದ ಸಾಕಷ್ಟು ಕಲಾವಿದರು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ.

ಮೈಸೂರು ಮಿತ್ರ



# ಅಂಬೇಡ್ಕರ್ ಸೋಲಿಸಿದ ಕಾಂಗ್ರೆಸ್ ಬಿಟ್ಟು ಜೆಡಿಎಸ್ ಬೆಂಬಲಿಸಿ

## ಜೆಡಿಎಸ್ ಸೇರ್ಪಡೆ ಕಾರ್ಯಕ್ರಮದಲ್ಲಿ ಶಾಸಕ ಜಿ.ಟಿ.ದೇವೇಗೌಡ ಮನವಿ

ಹುಣಸೂರು, ಏ.13– ದೇಶಕ್ಕೆ ಸಂವಿಧಾನ ನೀಡಿದ ಅಂಬೇಡ್ಕರ್ ಅವರನ್ನೇ ಸೋಲಿಸಿದ ಕಾಂಗ್ರೆಸ್ ಪಕ್ಷದಿಂದ ದಲಿತರ ಉದ್ಧಾರ ಸಾಧ್ಯವಿಲ್ಲ. ಹೀಗಾಗಿ ಈ ಬಾರಿ ಜೆಡಿಎಸ್ ಪಕ್ಷ ಬೆಂಬಲಿಸಿ ಎಂದು ಶಾಸಕ ಜಿ.ಟಿ.ದೇವೇಗೌಡ ಮನವಿ ಮಾಡಿದರು.

ನಗರದ ಖಾಸಗಿ ಕಲ್ಯಾಣ ಮಂಟಪದಲ್ಲಿ ಮುಖಂಡ ಬಿಳಿಕೆರೆ ರಾಜು ಮತ್ತು ಅವರ ಅಭಿಮಾನಿಗಳನ್ನು ಜೆಡಿಎಸ್‌ಗೆ ಬರಮಾಡಿಕೊಂಡು ಮಾತನಾಡಿದ ಅವರು, ಜಾತ್ಯಾತೀತವಾಗಿ ಕೆಲಸ ಮಾಡುತ್ತಿರುವ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರು ರಾಜ್ಯದ ಅಭಿವೃದ್ಧಿಗೆ ಶ್ರಮಿಸಿದರೇ, ನಾನು ತಾಲೂಕಿನ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ನನ್ನ ಅಧಿಕಾರವಧಿಯಲ್ಲಿ ದಲಿತರಿಗೆ ನಿವೇಶನ, ಗುಂಪು ಮನೆ ಯೋಜನೆ, ಅಂಬೇಡ್ಕರ್ ನಿಗಮದಿಂದ ಸಾಲ ಸೌಲಭ್ಯ, ಪರಿಶಿಷ್ಟ ಜಾತಿ, ಜನಾಂಗಕ್ಕೆ ಸಿಗಬೇಕಾದ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಿದ್ದೇನೆ ಎಂದ ಅವರು ಬಡಜನರ ಸೇವೆ ಮಾಡಲು ನಮ್ಮ ಕುಟುಂಬ ಸದಾ ಸಿದ್ಧ ಎಂದರು.



ಅರಸು ಅಭಿಮಾನಿಗಳ ಸಂಘದ ಅಧ್ಯಕ್ಷ, ದಲಿತ ಮುಖಂಡ ಬಿಳಿಕೆರೆ ರಾಜು ಮಾತನಾಡಿ, ನಾವು ನಂಬಿದ ರಾಜಕಾರಣಿಗಳು ನಮ್ಮ ಸಮಾಜ ಅಭಿವೃದ್ಧಿ ಮಾಡಲು ಹಿಂದೇಟು ಹಾಕಿದ್ದರಿಂದ ಜಿ.ಟಿ.ದೇವೇಗೌಡರು ತಮ್ಮ ಅಧಿಕಾರವಧಿಯಲ್ಲಿ ಮಾಡಿದ ಅಭಿವೃದ್ಧಿ ಕಾರ್ಯ ಮೆಚ್ಚಿ ನಾವು ಜೆಡಿಎಸ್ ಸೇರ್ಪಡೆಗೊಂಡಿದ್ದೇವೆ ಎಂದರು.

ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಿ.ಡಿ.ಹರೀಶ್‌ಗೌಡ ಮಾತನಾಡಿ, ನಾವು ಈ ತಾಲೂಕಿಗೆ ಹೊಸಬರು ಎಂದು ಹೇಳುವ ರಾಜಕಾರಣಿಗಳಿಗೆ ಮಾಹಿತಿ ಕೊರತೆ ಇದೆ ಎಂದು ನಾನು ಭಾವಿಸುತ್ತೇನೆ. ಕ್ಷೇತ್ರದಲ್ಲಿ ನನ್ನ ತಂದೆ ಸಚಿವ, ಶಾಸಕರಾಗಿ ಸೇವೆ ಸಲ್ಲಿಸಿದ್ದಾರೆ. ನನ್ನ ತಾಯಿ ಜಿಪಂ ಸದಸ್ಯರಾಗಿ, ಮಹಿಳಾ ಸಹಕಾರ ಬ್ಯಾಂಕ್ ಅಧ್ಯಕ್ಷರಾಗಿ ಹಲವು ಮಹಿಳೆಯರಿಗೆ ಸ್ವ–ಉದ್ಯೋಗದ ಮೂಲಕ ಸ್ವಾವಲಂಬಿ ಬದುಕಿಗೆ ನೆರವಾಗಿದ್ದಾರೆ. ನಾನು ಸಹ 20 ವರ್ಷಗಳಿಂದ ತಾಲೂಕಿನಲ್ಲಿ ಹಲವು ಅಭಿವೃದ್ಧಿ ಕಾರ್ಯ ಮಾಡುತ್ತಾ ಸಹಕಾರ ಕ್ಷೇತ್ರದಲ್ಲಿ ಕೆಲಸ ಮಾಡಿದ್ದೇನೆ. ನಮಗೆ ತಾಲೂಕಿನ ಪ್ರತಿ ಹಳ್ಳಿಯ, ಪ್ರತಿ ಜನಾಂಗದ ಸಮಸ್ಯೆ ತಿಳಿದಿದೆ. ಅದನ್ನು ಚುನಾವಣೆಯಲ್ಲಿ ಗೆದ್ದ ನಂತರ

ನಮಗೆ ತಾಲೂಕಿನ ಪ್ರತಿ ಹಳ್ಳಿಯ ಪ್ರತಿಬಡವಣೆಯ ಪ್ರತಿ ಜನಾಂಗದ ಸಮಸ್ಯೆ ತಿಳಿದಿದೆ. ಅದನ್ನು ಚುನಾವಣೆಯಲ್ಲಿ ಗೆದ್ದ ನಂತರ ಬಗೆಹರಿಸುವ ಜೊತೆಗೆ ತಾಲೂಕಿನ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.

ಸಮಾರಂಭದಲ್ಲಿ ತಾಲೂಕು ಜೆಡಿಎಸ್ ಅಧ್ಯಕ್ಷ ದೇವರಾಜ್ ಒಡೆಯರ್, ವರದರಾಜು, ಶ್ರೀನಿವಾಸ್, ಶಿವಣ್ಣ ಮತ್ತಿತರರಿದ್ದರು.

## ಬಿಜೆಪಿಗೆ ತೋಟದಪ್ಪ ಬಸವರಾಜು ಗುಡ್ ಬೈ

ತಿ.ನರಸೀಪುರ, ಏ.13– ಈ ಬಾರಿಯ ಚುನಾವಣೆಯಲ್ಲಿ ಸ್ಪರ್ಧಿಸಲು ವರುಣಾ ಕ್ಷೇತ್ರದ ಟಿಕೆಟ್ ಸಿಗದ ಹಿನ್ನಲೆಯಲ್ಲಿ ಹಿರಿಯ ಬಿಜೆಪಿ ಮುಖಂಡ ತೋಟದಪ್ಪ ಬಸವರಾಜು ಬಿಜೆಪಿ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದಾರೆ.



ಪಟ್ಟಣದ ವಿವೇಕಾನಂದ ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿಯ ಚುನಾವಣೆಯಲ್ಲಿ ಟಿಕೆಟ್ ಸಿಗದ ಹಿನ್ನೆಲೆಯಲ್ಲಿ ಪಕ್ಷದ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರಿಗೆ ನನ್ನ ರಾಜೀನಾಮೆ ಸಲ್ಲಿಸಿದ್ದೇನೆ. ಮುಂದೆ ಪಕ್ಷಕ್ಕೆ ಹಾಗೂ ಪ್ರಧಾನಿ ಮೋದಿ ಅವರ ಅಭಿಮಾನಿಯಾಗಿ, ಸಕ್ರಿಯ ರಾಜಕಾರಣದಿಂದ ದೂರವಿರುತ್ತೇನೆ ಎಂದರು.

1980ರಿಂದಲೂ ಸಂಘ ಪರಿವಾರದ ಸ್ವಯಂ ಸೇವಕನಾಗಿ ಪಕ್ಷಕ್ಕಾಗಿ ದುಡಿದಿದ್ದೇನೆ. ಕಳೆದ 2018ರ ಚುನಾವಣೆಯಲ್ಲಿ ವರುಣಾದಿಂದ ಸ್ಪರ್ಧಿಸಲು ಬಿಜೆಪಿಯಿಂದ ಅವಕಾಶ ಸಿಕ್ಕಿದ್ದರಿಂದ ವ್ಯಾಪಕ ವಿರೋಧ, ಕೊಲೆ ಬೆದರಿಕೆ ನಡುವೆಯೂ 37819 ಮತಗಳನ್ನು ಜನರು ನೀಡಿದ್ದಕ್ಕೆ ಅವರೆಲ್ಲರಿಗೂ ಚಿರಋಣಿಯಾಗಿದ್ದೇನೆ. ನನಗೆ ಧೈರ್ಯ ತುಂಬಿದ ಅಮಿತ್ ಶಾ ಅವರಿಗೆ ವಿಧೇಯನಾಗಿದ್ದೇನೆ. ಈ ಚುನಾವಣೆಯಲ್ಲೂ ಅಭ್ಯರ್ಥಿಯಾಗಿ ಉಮೇದುವಾರಿಕೆ ಸಲ್ಲಿಸಬೇಕಾಗಿತ್ತಾದರೂ ವಿಧಿ ಬರಹವೆಂಬಂತೆ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡುತ್ತಿದ್ದೇನೆ ಎಂದರು. ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರಿಗೆ ದೇಣಿಗೆ ನೀಡಿ, ಚುನಾವಣೆಯಲ್ಲಿ ಗೆಲ್ಲಿಸಿದ ಹೆಗ್ಗಳಿಕೆ ವರುಣಾ ಕ್ಷೇತ್ರದ ಜನರಿಗಿದೆ. ರಾಜಕೀಯ ಪಕ್ಷವೊಂದರ ಕಾರ್ಯಕರ್ತನಾಗಿ ಇದ್ದಿದ್ದರಿಂದ ರಾಹುಲ್ ಗಾಂಧಿ ಸೇರಿದಂತೆ ಹೆಚ್.ಡಿ.ದೇವೇಗೌಡ, ಸಿದ್ದರಾಮಯ್ಯ, ಹೆಚ್.ಡಿ.ಕುಮಾರಸ್ವಾಮಿ ಹಾಗೂ ಡಿ.ಕೆ.ಶಿವಕುಮಾರ್ ಅವರನ್ನು ಟೀಕಿಸಿದ್ದೇನೆಯೇ ಹೊರತು ವೈಯಕ್ತಿಕವಾಗಲ್ಲ. ಆದ್ದರಿಂದ ಅವರೆಲ್ಲರ ಕ್ಷಮೆ ಕೇಳುತ್ತೇಣೆ ಎಂದರು.

ನರಸೀಪುರ ಕ್ಷೇತ್ರಕ್ಕೆ ಡಾ.ರೇವಣ್ಣನವರನ್ನು ಅಭ್ಯರ್ಥಿ ಮಾಡಿರುವುದು ಒಳ್ಳೆಯ ನಿರ್ಧಾರ. ಜನತೆ ವರುಣಾದಲ್ಲಿ ವಿ.ಸೋಮಣ್ಣ ಹಾಗೂ ನರಸೀಪುರದಲ್ಲಿ ರೇವಣ್ಣ ಅವರನ್ನು ಗೆಲ್ಲಿಸುವಂತೆ ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಹಿರಿಯ ಮುಖಂಡ ಕುಪ್ಯಾ ಮಹದೇವಯ್ಯ ಹಾಗೂ ಮುದ್ದುಕೃಷ್ಣ ಉಪಸ್ಥಿತರಿದ್ದರು.

## ವಿವಿಧೆಡೆ ಶಾಸಕ ಬಿ.ಹರ್ಷವರ್ಧನ್ ಬಿರುಸಿನ ಪ್ರಚಾರ

ಮಲ್ಲುಂಡಿ, ಏ.13– ಶಾಸಕನಾಗಿ ಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸಿದ್ದೇನೆ. ಪಕ್ಷಭೇದ ಮಾಡದೇ ಎಲ್ಲರನ್ನೂ ಸಮಾನವಾಗಿ ಕಂಡಿದ್ದೇನೆ. ಹೀಗಾಗಿ ನನ್ನ ಅಭಿವೃದ್ಧಿ ಕಾರ್ಯ ನೋಡಿ ಈ ಬಾರಿ ಅತ್ಯಧಿಕ ಮತಗಳ ಅಂತರದಿಂದ ಗೆಲ್ಲಿಸುವ ಮೂಲಕ ನಿಮ್ಮ ಸೇವೆ ಮಾಡಲು ಮತ್ತೊಂದು ಅವಕಾಶ ನೀಡುವಂತೆ ಶಾಸಕ ಬಿ.ಹರ್ಷವರ್ಧನ್ ಮನವಿ ಮಾಡಿದರು.



ನಂಜನಗೂಡು ವಿಧಾನಸಭಾ ಕ್ಷೇತ್ರದ ಹಲ್ಲರೆ, ಮಲ್ಲುಂಡಿ, ಹುರ, ಚನ್ನಪಟ್ಟಣ, ಕೆಲ್ಲೂಪುರ, ಮಲ್ಲಹಳ್ಳಿ ಗ್ರಾಮಗಳಲ್ಲಿ ಬಿರುಸಿನ ಪ್ರಚಾರ ನಡೆಸಿ ಮಾತನಾಡಿದ ಅವರು, ಕಳೆದ ಚುನಾವಣೆಯಲ್ಲಿ ಕ್ಷೇತ್ರದ ಜನರು ತೋರಿದ ಪ್ರೀತಿ, ವಿಶ್ವಾಸವನ್ನು ಎಂದಿಗೂ ಮರೆಯಲಾಗದು ಎಂದ ಅವರು, ನನ್ನ ಅವಧಿಯಲ್ಲಿ ಯಾವುದೇ ಕಪ್ಪುಚುಕ್ಕೆ ಇಲ್ಲದಂತೆ ನಡೆದುಕೊಂಡಿದ್ದೇನೆ. ಎಲ್ಲರನ್ನೂ ಗೌರವದಿಂದ ಕಂಡಿದ್ದೇನೆ. ಅದೇ ರೀತಿ ಕ್ಷೇತ್ರದಲ್ಲಿ ಯಾವುದೇ ಕೋಮು ಗಲಭೆ ನಡೆಯದಂತೆ ನೋಡಿಕೊಂಡಿದ್ದೇನೆ. ಇದೀಗ ಚುನಾವಣೆ ಘೋಷಣೆಯಾಗಿದ್ದು, ಬಿಜೆಪಿ ಅಭ್ಯರ್ಥಿಯಾಗಿ ನಿಮ್ಮ ಮುಂದೆ ಮತಯಾಚಿಸುತ್ತಿದ್ದೇನೆ. ನನ್ನ ಅಧಿಕಾರವಧಿಯಲ್ಲಿ ಹೆಚ್ಚಿನ ಅನುದಾನ ತಂದು ಒಬ್ಬ ಶಾಸಕ ಮಾಡಬಹುದಾದ ಅಭಿವೃದ್ಧಿ ಕೆಲಸಗಳಿಗಿಂತಲೂ ಹೆಚ್ಚಿನ ಕಾರ್ಯ ಮಾಡುವ ಮೂಲಕ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಶ್ರಮಿಸಿದ್ದೇನೆ ಎಂದರು.

ರಾಜ್ಯ ಬಿಜೆಪಿ ಸರ್ಕಾರ ಹಲವು ಜನಪರ ಯೋಜನೆಗಳನ್ನು ಜಾರಿಗೆ ತರುವ ಮೂಲಕ ರೈತರು, ಹಿಂದುಳಿದವರ ಪರ ಕೆಲಸ ಮಾಡಿದೆ. ನಾನು ಕ್ಷೇತ್ರದಲ್ಲಿ 128 ಅಂಗನವಾಡಿಗಳನ್ನು ನಿರ್ಮಿಸಿದ್ದೇನೆ. ಹೆಡಿಯಾಲ ವ್ಯಾಪ್ತಿಯಲ್ಲಿ 38 ಕೋಟಿ ವೆಚ್ಚದಲ್ಲಿ ಕುಡಿಯುವ ನೀರಿನ ಯೋಜನೆ ಜಾರಿಗೊಳಿಸಿದ್ದೇನೆ ಎಂದ ಅವರು, ಈ ಹಿಂದಿನ ಕಾಂಗ್ರೆಸ್ ಸರ್ಕಾರದಲ್ಲಿ ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿಯಾಗಿಲ್ಲ. ಇದೀಗ 200 ಯುನಿಟ್ ವಿದ್ಯುತ್, 2 ಸಾವಿರ ರೂ. ನೀಡುತ್ತೇವೆ ಎಂದು ಸುಳ್ಳು ಹೇಳಿ ಜನರ ಮೂಗಿಗೆ ತುಪ್ಪ ಸವರುವ ಕೆಲಸ ಮಾಡುತ್ತಿದ್ದಾರೆ. ಅವರ ಮಾತಿಗೆ ಮರುಳಾಗದೇ ನನ್ನ ಅಭಿವೃದ್ಧಿ ಕಾರ್ಯಗಳಿಗೆ ಕೂಲಿ ರೂಪದಲ್ಲಿ ಮತ ನೀಡುವ ಮೂಲಕ ನನ್ನನ್ನು ಮತ್ತೊಮ್ಮೆ ಆಯ್ಕೆ ಮಾಡುವಂತೆ ಮನವಿ ಮಾಡಿದರು.

ಇದೇ ತಿಂಗಳ 18ರಂದು ನಾಮಪತ್ರ ಸಲ್ಲಿಸುತ್ತಿದ್ದು, ಅಂದು ಕ್ಷೇತ್ರದ ಮತದಾರರು, ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಬೆಂಬಲಿಸುವಂತೆ ಮನವಿ ಮಾಡಿದರು.

ಈ ವೇಳೆ ಹುರ ಗ್ರಾಪಂ ಅಧ್ಯಕ್ಷ ಚಂದ್ರು, ಹಲ್ಲರೇ ಗ್ರಾಪಂ ಅಧ್ಯಕ್ಷ ಮಹದೇವಸ್ವಾಮಿ, ತಾಪಂ ಮಾಜಿ ಸದಸ್ಯ ಎಸ್.ಬಸವರಾಜ್, ಮುಖಂಡರಾದ ಹೆಚ್.ಎಂ.ಕೆಂಡಗಣ್ಣಪ್ಪ, ಎಂ.ಜಿ.ಮಹದೇವಸ್ವಾಮಿ, ಎಂ.ಸಿ. ರಮೇಶ್, ಬಸಪ್ಪ, ಅಬ್ದುಲ್ ರಜಾಕ್, ಎಂ.ವಿ.ಬಸವರಾಜಪ್ಪ, ಪುಟ್ಟಸ್ವಾಮಿ, ಮಹದೇವಯ್ಯ, ಜಿ.ಬಸವರಾಜ್, ಶಕ್ತಿ ಕೇಂದ್ರದ ಅಧ್ಯಕ್ಷ ಮಲ್ಲಿಕಾರ್ಜುನ, ಹಾಡ್ಯ ಗ್ರಾಪಂ ಉಪಾಧ್ಯಕ್ಷ ಹರೀಶ್ ಕುಮಾರ್, ಗ್ರಾಪಂ ಸದಸ್ಯ ಕೃಷ್ಣ, ದೇವ ಪ್ರಸಾದ್, ಗ್ರಾಪಂ ಸದಸ್ಯರಾದ ಜಯಲಕ್ಷ್ಮಿ, ಮಲ್ಲಪ್ಪ ಸೇರಿದಂತೆ ಇತರರಿದ್ದರು.

# ಮತ್ತೆ ಆಯ್ಕೆ ಮಾಡಿ, ಅಭಿವೃದ್ಧಿಗೆ ಅವಕಾಶ ನೀಡಿ

ತಿ.ನರಸೀಪುರ, ಏ.13– ಕ್ಷೇತ್ರದ ಮತದಾರರು ಈ ಬಾರಿ ಆಶೀರ್ವದಿಸಿದರೆ, ಮುಂದಿನ 5 ವರ್ಷ ನಿಮ್ಮ ಜವಾಬ್ದಾರಿ ಹೊತ್ತು ಕೆಲಸ ಮಾಡುತ್ತೇನೆ ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ತಿಳಿಸಿದರು.




ತಾಲೂಕಿನ ಉಕ್ಕಲಗೆರೆಯಲ್ಲಿ ನಡೆದ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡರನ್ನು ಜೆಡಿಎಸ್‌ಗೆ ಬರಮಾಡಿಕೊಂಡು, ಮತಯಾಚಿಸಿ ಮಾತನಾಡಿದ ಅವರು, ಮತ್ತೊಮ್ಮೆ ಜೆಡಿಎಸ್ ಅಭ್ಯರ್ಥಿಯಾಗಿ ನಿಮ್ಮ ಸಹಕಾರ ಕೇಳಲು ಬಂದಿದ್ದೇನೆ. ಮೇ 10ರಂದು ನಡೆಯುವ ಚುನಾವಣೆಯಲ್ಲಿ ಈ ಹಿಂದೆ ತೋರಿದ ಪ್ರೀತಿ, ವಿಶ್ವಾಸ, ನಂಬಿಕೆ ಇಟ್ಟು ಮತ ನೀಡಿ. ಕ್ಷೇತ್ರದ ಅಭಿವೃದ್ಧಿ ಜವಾಬ್ದಾರಿ ನನಗೆ ಬಿಡಿ ಎಂದು ಮನವಿ ಮಾಡಿದರು.

ಚುನಾವಣೆಗೆ ಕೇವಲ 25 ದಿನಗಳಷ್ಟೇ ಬಾಕಿ ಇದೆ. ಮತದಾರರು ನನಗೆ ಸಾಥ್ ನೀಡಿ ಆಶೀರ್ವಾದ ಮಾಡಿ, ಆ ನಂತರ 5 ವರ್ಷ ನಾನು ನಿಮ್ಮಲ್ಲಿ ಒಬ್ಬನಾಗಿ ನಿಮ್ಮ ಜೊತೆ ಇದ್ದು ನಿಮ್ಮ ಮನೆ ಮಗನಂತೆ ಕೆಲಸ ಮಾಡು ತ್ತೇನೆ ಎಂದರು. ಉಕ್ಕಲಗೆರೆ ಗ್ರಾಮಸ್ಥರು ನನ್ನನ್ನು ಜಿಪಂ ಚುನಾವಣೆಯಿಂದಲೂ ಬೆಂಬಲಿಸುತ್ತಾ ಬಂದಿದ್ದೀರಿ. ಜಿಪಂ ಚುನಾವಣೆ ಪ್ರಚಾರಕ್ಕೆ ಬಂದಾಗ ಗ್ರಾಮದ ಮುಖಂಡರಾದ ಅಡುಗೆ ಕುಮಾರ್ ಕ್ಷೇತ್ರದಲ್ಲಿ ಯಾವುದೇ ಕೆಲಸ ಗಳಾಗುತ್ತಿಲ್ಲ. ನೀವು ಮಾಡಿಕೊಟ್ಟರೆ ಮಾತ್ರ ನಿಮ್ಮನ್ನು ಬೆಂಬಲಿಸುತ್ತೇವೆ ಎಂಬ ಷರತ್ತನ್ನು ಹಾಕಿದ್ದರು. ಅವರ ಬೇಡಿಕೆ ಈಡೇರಿಸಿದ್ದೆ. ನಂತರ ಎಂಎಲ್ಎ ಚುನಾವಣೆ ಮತಯಾಚನೆಗೆ ಬಂದಾಗ ಎಲ್ಲರೂ ಆತ್ಮೀಯತೆವಾಗಿ ಬರಮಾಡಿಕೊಂಡು ಅತೀ ಹೆಚ್ಚಿನ ಬಹುಮತದಿಂದ ಗೆಲ್ಲಿಸಿಕೊಟ್ಟಿದ್ದೀರಿ. ಅದನ್ನು ನಾನೆಂದಿಗೂ ಮರೆಯುವುದಿಲ್ಲ. ಈ ಚುನಾವಣೆಯಲ್ಲಿ ನನಗೆ ಆಶೀರ್ವದಿಸುವಂತೆ ಮನವಿ ಮಾಡಿದರು.

**ಟೀಕೆಗೆ ಪಕ್ಷ ಸೇರ್ಪಡೆ ಉತ್ತರ:** ನಾನು ಯಾವುದೇ ಆರೋಪ, ಟೀಕೆಗೆ ಉತ್ತರಿಸುವುದಿಲ್ಲ. ಅವರ ಟೀಕೆಗಳಿಗೆ ಅಭಿವೃದ್ಧಿ ಮೂಲಕ ಉತ್ತರ ನೀಡುತ್ತೇನೆ. ಗ್ರಾಮದ ದೊಡ್ಡ ಮನುಷ್ಯನೋರ್ವ ನನ್ನ ಮೇಲೆ ಹಲವು ಆರೋಪ ಮಾಡಿ, ಟೀಕಿಸಿದ್ದ. ಆತನ ಟೀಕೆಗೆ ಇಂದಿನ ಪಕ್ಷ ಸೇರ್ಪಡೆ ಉತ್ತರವಾಗಲಿದೆ ಎಂದು ಕಾಂಗ್ರೆಸ್ ಮುಖಂಡ ಬಸವಣ್ಣ ಹೆಸರೇಳದೆ ಕೌಂಟರ್ ನೀಡಿದರು.

**ಅದ್ದೂರಿ ಸ್ವಾಗತ:** ಚುನಾವಣಾ ಪ್ರಚಾರ ಕೈಗೊಂಡಿರುವ ಶಾಸಕ ಎಂ.ಅಶ್ವಿನ್ ಕುಮಾರ್ ಉಕ್ಕಲಗೆರೆ ಗ್ರಾಮಕ್ಕೆ ಆಗಮಿಸುತ್ತಿದ್ದಂತೆಯೇ ನಿರೀಕ್ಷೆಗೂ ಮೀರಿದ ಸ್ವಾಗತ ದೊರೆಯಿತು. ಗ್ರಾಮದ ಪ್ರವೇಶ ದ್ವಾರದಿಂದ ತೆರೆದ ವಾಹನದಲ್ಲಿ ಮೆರವಣಿಗೆ ಮಾಡಲಾಯಿತು. ಅಲ್ಲದೇ ಮುಖಂಡ ಅಡುಗೆ ಕುಮಾರ್ ನೇತೃತ್ವದಲ್ಲಿ 425 ಕೆಜಿ ತೂಕದ ಸೇಬಿನ ಹಾರವನ್ನು ಕ್ರೇನ್ ಮೂಲಕ ಹಾಕಿ ಸ್ವಾಗತ ಕೋರಲಾಯಿತು. ಕಾರ್ಯಕ್ರಮ ಮುಗಿದ ಬಳಿಕ ಗ್ರಾಮದ ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಭಕ್ತ ಕನಕದಾಸರ ಭಾವಚಿತ್ರಗಳಿಗೆ ಶಾಸಕರು ಪುಷ್ಪಾರ್ಚನೆ ಮಾಡಿದರು.

> **6** ಕಳೆದ ಚುನಾವಣೆ ಗೆಲುವು ಮತ್ತೆ ಈ ಬಾರಿಯ ಚುನಾವಣೆಯಲ್ಲಿ ಮರುಕಳಿಸಬೇಕು. ಕಳೆದ ಬಾರಿಗಿಂತ ಹೆಚ್ಚಿನ ಮತಗಳ ಅಂತರದಿಂದ ಅಶ್ವಿನ್ ಕುಮಾರ್ ಅವರನ್ನು ಗೆಲ್ಲಿಸುವ ನಿಟ್ಟಿನಲ್ಲಿ ಗ್ರಾಮಸ್ಥರು ಜೆಡಿಎಸ್ ಪಕ್ಷಕ್ಕೆ ಮತ ನೀಡಬೇಕು. ಸದಾ ಕಾಲ ಜನರ ಕೈಗೆ ಸಿಗುವ ಶಾಸಕರನ್ನು ಆಯ್ಕೆ ಮಾಡಿಕೊಳ್ಳುವ ಜವಾಬ್ದಾರಿ ನಿಮ್ಮೆಲ್ಲರ ಮೇಲಿದೆ. ಎಚ್ಚರ ತಪ್ಪಿದರೆ ನೀವು ಯಾವುದೇ ಕೆಲಸಕ್ಕೂ ಬೆಂಗಳೂರಿಗೆ ಅಲೆಯುವ ಪರಿಸ್ಥಿತಿ ಬರಲಿದೆ. ಹಾಗಾಗಿ ನಿಮ್ಮ ಮನೆ ಬಳಿಗೆ ಬಂದು ಕಷ್ಟ ಸುಖಗಳಲ್ಲಿ ಭಾಗಿಯಾಗುವ ಅಶ್ವಿನ್ ಕುಮಾರ್‌ರನ್ನು ಅತ್ಯಧಿಕ ಮತಗಳ ಅಂತರದಿಂದ ಗೆಲ್ಲಿಸಿ.
>
> –ಅಡುಗೆ ಕುಮಾರ್, ಜೆಡಿಎಸ್ ಮುಖಂಡ.

ಈ ವೇಳೆ ಜಿಪಂ ಮಾಜಿ ಅಧ್ಯಕ್ಷ ಸಿದ್ದಾರ್ಥ, ಎಪಿಎಂಸಿ ಮಾಜಿ ಸದಸ್ಯ ಮಲ್ಲಿಕಾರ್ಜುನಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷ ಪ್ರೀತಮ್, ಉಕ್ಕಲಗೆರೆ ಗ್ರಾಪಂ ಸದಸ್ಯ ಶಿವಕುಮಾರ್, ಕೈಯ್ಯಂಬಳ್ಳಿ ಅಶೋಕ್, ಶಂಭುದೇವನಪುರ ರಮೇಶ್, ಮೂಗೂರು ಶಿವಮೂರ್ತಿ, ಕಳ್ಳೀಪುರ ನಾಗೇಂದ್ರ, ಸಾಲೂರು ಸ್ವಾಮಿ, ಕೆಂಪಯ್ಯನಹುಂಡಿ ಚನ್ನೇಗೌಡ, ವಕೀಲ ಪರ ಮೇಶ್, ಸಿದ್ದರಾಜು, ಮುದ್ದೇಗೌಡ, ಬಸವರಾಜು, ಗ್ರಾಪಂ ಸದಸ್ಯ ಪುಟ್ಟಮ್ಮ, ಶಿವಮಲ್ಲು, ಮಲ್ಲೇಶ್, ಜಿಪಂ ಮಾಜಿ ಸದಸ್ಯ ಜೈಪಾಲ್ ಭರಣಿ, ರವಿ, ಎಂ.ಎಲ್. ಹುಂಡಿ ನಾಗೇಂದ್ರ, ಅಡುಗೆ ನಂದೀಶ್, ಕಳ್ಳೀಪುರ ಮಲ್ಲಣ್ಣ, ಗ್ರಾಪಂ ಮಾಜಿ ಸದಸ್ಯ ಮಲ್ಲೇಶ್, ಮಹೇಶ್, ಪ್ರಕಾಶ್, ನಟರಾಜು, ಸೋಮನಾಥಪುರ ಗಣೇಶ್, ಮಹದೇವಣ್ಣ, ಚಿದರವಳ್ಳಿ ನವೀನ್, ಮಹದೇವಸ್ವಾಮಿ ಮತ್ತಿತರರಿದ್ದರು.

### ನೀತಿ ಸಂಹಿತೆ ಉಲ್ಲಂಘನೆ

## ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ವಿರುದ್ಧ ದೂರು ದಾಖಲು

ನಂಜನಗೂಡು, ಏ.13– ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಆರೋಪದ ಹಿನ್ನೆಲೆಯಲ್ಲಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ಧ್ರುವನಾರಾಯಣ್ ವಿರುದ್ಧ ನಂಜನಗೂಡು ಟೌನ್ ಪೊಲೀಸ್ ಠಾಣಾಯಲ್ಲಿ ದೂರು ದಾಖಲಾಗಿದೆ.

ಈ ಸಂಬಂಧ ಫ್ಲೈಯಿಂಗ್ ಸ್ಕ್ವಾಡ್ ಅಧಿಕಾರಿ ಪ್ರಶಾಂತ್ ಎಂಬುವರು ದೂರು ದಾಖಲಿದ್ದು, ಏ.6ರಂದು ದರ್ಶನ್ ಅವರು ಕ್ಷೇತ್ರ ಪ್ರವಾಸದಲ್ಲಿದ್ದ ವೇಳೆ ಕಾಂಗ್ರೆಸ್ ಮುಖಂಡ ಸಂತೋಷ್ ಮುಚ್ಚಿದ ಲಕೋಟೆಯಲ್ಲಿ ಹಣ ನೀಡಿದ್ದರು. ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವಾಗ ಹಣ ನೀಡಿರುವುದು ಮೇಲ್ನೋಟಕ್ಕೆ ಖಚಿತವಾಗಿರುವ ಹಿನ್ನೆಲೆ ಮುಂದಿನ ಕ್ರಮಕ್ಕಾಗಿ ನಂಜನಗೂಡು ಟೌನ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

## ವ್ಯಕ್ತಿ ನಾಪತ್ತೆ

ಹುಣಸೂರು, ಏ.13– ವ್ಯಕ್ತಿಯೊಬ್ಬರು ನಾಪತ್ತೆಯಾಗಿರುವ ಸಂಬಂಧ ಬಿಳಿಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ತಾಲೂಕಿನ ಚಿಕ್ಕ ಬೀಚನಹಳ್ಳಿ ಗ್ರಾಮದ ಪುಟ್ಟಸ್ವಾಮಿಗೌಡ ಮಗ ಶಿವಣ್ಣ(35) ನಾಪತ್ತೆಯಾದವರು. ಮಾ.25ರಂದು ಬೆಳಗ್ಗೆ 10 ಗಂಟೆಗೆ ಬಿಳಿಕೆರೆಗೆ ಹೋಗಿ ಬರುವುದಾಗಿ ಮನೆಯಿಂದ ಹೋದವರು ಇದುವರೆಗೂ ವಾಪಸ್ಸಾಗಿಲ್ಲ ಎಂದು ಶಿವಣ್ಣ ಅವರ ತಂದೆ ಪುಟ್ಟಸ್ವಾಮಿಗೌಡ ದೂರು ನೀಡಿದ್ದಾರೆ. ಇವರ ಬಗ್ಗೆ ಮಾಹಿತಿ ಸಿಕ್ಕಲ್ಲಿ ದೂ.08222-240004, ಮೊ: 9480805057 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

## ನೂರಾರು ಮಂದಿ ಬಿಜೆಪಿಗೆ ಸೇರ್ಪಡೆ: ಕೃಷ್ಣನಾಯಕ

ಹೆಚ್.ಡಿ.ಕೋಟೆ, ಏ.13– ನನ್ನ ಅಭಿವೃದ್ಧಿ ಕಾರ್ಯ ಮೆಚ್ಚಿ ಕ್ಷೇತ್ರದ ಹಲವು ಮುಖಂಡರು ಕಾಂಗ್ರೆಸ್, ಜೆಡಿಎಸ್ ತೊರೆದು ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ ಎಂದು ಹೆಚ್.ಡಿ.ಕೋಟೆ ವಿಧಾನ ಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೆ.ಎಂ.ಕೃಷ್ಣನಾಯಕ ತಿಳಿಸಿದರು.

ಕ್ಷೇತ್ರದ ಬಿಜೆಪಿ ಟಿಕೆಟ್ ದೊರೆತ ಹಿನ್ನೆಲೆಯಲ್ಲಿ ತಾಲೂಕಿನ ಹಿಟ್ನಾ, ಕ್ಯಾತನಹಳ್ಳಿ, ಸಿಂಡೇನಹಳ್ಳಿ, ಹಂಪಾಪುರ, ಬೆಟ್ಟದಬೀಡು, ಕಣಿನಹುಂಡಿ, ಯಬ್ಬಳ್ಳ ಸೇರಿದಂತೆ ಇನ್ನಿತರ ಗ್ರಾಮಗಳಲ್ಲಿ ಬಿಜೆಪಿ ಮುಖಂಡರು, ಕಾರ್ಯಕರ್ತರು ಹಾಗೂ ಅಭಿಮಾನಿಗಳಿಂದ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು.

ಪಕ್ಷದ ಹಿರಿಯರ ಸಲಹೆ ಮೇರೆಗೆ ಮುಖಂಡರು, ಕಾರ್ಯಕರ್ತರು ಪಕ್ಷ ಸಂಘಟಿಸುವ ಮೂಲಕ ಈ ಬಾರಿ ಕ್ಷೇತ್ರದಲ್ಲಿ ಕಮಲ ಅರಳಿಸಲು ಶ್ರಮಿಸಬೇಕು ಎಂದು ತಿಳಿಸಿದರು. ಇದೇ ವೇಳೆ ನೂರಾರು ಮಂದಿ ಕಾಂಗ್ರೆಸ್, ಜೆಡಿಎಸ್ ತೊರೆದು ಬಿಜೆಪಿಗೆ ಸೇರ್ಪಡೆಗೊಂಡರು. ಇದೇ ವೇಳೆ ದಡದಹಳ್ಳಿ ಮಠಕ್ಕೆ ಭೇಟಿ ನೀಡಿದ ಕೃಷ್ಣನಾಯಕ ಅವರು ಚನ್ನಬಸವಸ್ವಾಮಿ ಅವರ ಆಶೀರ್ವಾದ ಪಡೆದರು. ಈ ಸಂದರ್ಭ ತಾಲೂಕು ಬಿಜೆಪಿ ಅಧ್ಯಕ್ಷ ಗುರುಸ್ವಾಮಿ, ಟೌನ್ ಅಧ್ಯಕ್ಷ ನಂದೀಶ್, ಮುಖಂಡರಾದ ಸಿದ್ದನಾಯಕ, ಸಿ.ವಿ. ನಾಗರಾಜು, ಮಹೇಶ್, ಸಿದ್ದರಾಜು ಹಾಗೂ ಇನ್ನಿತರರಿದ್ದರು.

# ವರುಣಾ, ಚಾ.ನಗರದಲ್ಲಿ ಗೆದ್ದು ಇತಿಹಾಸ ಸೃಷ್ಟಿಸುವೆ

### ಸಚಿವ ವಿ.ಸೋಮಣ್ಣ ವಿಶ್ವಾಸ

ನಂಜನಗೂಡು, ಏ.13– ವರುಣಾ ಕ್ಷೇತ್ರ ನನಗೆ ಹೊಸದಲ್ಲ. ಹೀಗಾಗಿ ಈ ಬಾರಿ ಚಾಮರಾಜನಗರ ಮತ್ತು ವರುಣಾ ಎರಡರಲ್ಲೂ ಗೆಲುವು ಸಾಧಿಸುವ ಮೂಲಕ ಇತಿಹಾಸ ಸೃಷ್ಟಿಸುತ್ತೇನೆ ಎಂದು ಸಚಿವ ವಿ.ಸೋಮಣ್ಣ ವಿಶ್ವಾಸ ವ್ಯಕ್ತಪಡಿಸಿದರು.



ತಾಲೂಕಿನ ಮಲ್ಲನಮೂಲೆ ಮಠಕ್ಕೆ ಭೇಟಿ ನೀಡಿ ಶ್ರೀಚೆನ್ನಬಸವ ಸ್ವಾಮೀಜಿ ಆಶೀರ್ವಾದ ಪಡೆದು ನಗರದ ಶ್ರೀಕಂಠೇಶ್ವರ ದೇವಾಲಯಕ್ಕೆ ತೆರಳಿ ದೇವರ ದರ್ಶನ ಪಡೆದು, ವಿಶೇಷ ಪೂಜೆ ಸಲ್ಲಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕ್ಷೇತ್ರ ಮರು ವಿಂಗಡಣೆಯಾಗಿ ವರುಣಾ ಕ್ಷೇತ್ರ ರಚನೆಯದ ಸಂದರ್ಭ ನಾನು ಕಾಂಗ್ರೆಸ್‌ನಲ್ಲಿದ್ದೆ. ವರುಣಾದಿಂದ ಪ್ರಥಮ ಬಾರಿಗೆ ಸಿದ್ದರಾಮಯ್ಯ ಸ್ಪರ್ಧಿಸಿದ್ದ ಚುನಾವಣೆಯಲ್ಲಿ ನಾನು ಕ್ಷೇತ್ರಾದ್ಯಂತ ಸುತ್ತಾಡಿ ಅವರ ಗೆಲುವಿಗೆ ಶ್ರಮಿಸಿದ್ದೆ. ಕ್ಷೇತ್ರದ ಜನತೆಗೆ ನನ್ನ ಪರಿಚಯವಿದೆ. ಅಲ್ಲದೇ ಚಾಮರಾಜನಗರ ಕ್ಷೇತ್ರ ನನ್ನ ಆರಾಧ್ಯ ದೈವ ಮಲೆ ಮಹದೇಶ್ವರ ನೆಲೆಸಿರುವ ಕ್ಷೇತ್ರ. ಎರಡೂ ಕ್ಷೇತ್ರದ ಜನರಿಗೆ ನನ್ನ ಪರಿಚಯವಿರುವ ಕಾರಣ ಪಕ್ಷದ ವರಿಷ್ಠರು ನನ್ನ ಮೇಲೆ ನಂಬಿಕೆ ಇಟ್ಟು ಎರಡೂ ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಅವಕಾಶ ಕಲ್ಪಿಸಿದ್ದಾರೆ. ಎರಡೂ ಕ್ಷೇತ್ರದ ಜನರು ಬೆಂಗಳೂರು ಮಾದರಿ ಸವಲತ್ತು, ಅಭಿವೃದ್ಧಿ ಬೇಕು ಎಂದು ಬಿಜೆಪಿ ಬೆಂಬಲಿಸಲು ಉತ್ಸುಕರಾಗಿದ್ದಾರೆ. ನಾನು ಅಭಿವೃದ್ಧಿ ಮುಂದಿಟ್ಟುಕೊಂಡು ಚುನಾವಣೆ ಎದುರಿಸುತ್ತಿದ್ದೇನೆ. ಫಲ, ಪ್ರತಿಫಲವನ್ನು ಜನರೇ ತೀರ್ಮಾನಿಸುತ್ತಾರೆ ಎಂದ ಅವರು ನಾನು ಹೋದಲೆಲ್ಲಾ ಜನರು ಸಾಗರೋಪಾದಿಯಲ್ಲಿ ಸೇರಿ ಪ್ರೀತಿ ವಿಶ್ವಾಸದಿಂದ ನನ್ನನ್ನು ಸ್ವಾಗತಿಸುತ್ತಿದ್ದಾರೆ. ಜನರ ಉತ್ಸಾಹ ನೋಡಿದರೆ ವರುಣಾ ಮತ್ತು ಚಾಮರಾಜನಗರದಲ್ಲಿ ನನ್ನ ಗೆಲುವು ನಿಶ್ಚಿತ ಎಂದರು.

ಸಂಸದ ವಿ.ಶ್ರೀನಿವಾಸ ಪ್ರಸಾದ್ ನಮ್ಮ ಪಕ್ಷದ ಹಿರಿಯ ನಾಯಕರು ಅವರನ್ನು ಭೇಟಿಯಾಗಲು ಅವರ ಮನೆಗೆ ತೆರಳುತ್ತಿದ್ದೇನೆ. ಅವರ ಮಾರ್ಗದರ್ಶನಲ್ಲಿ ಚುನಾವಣೆ ಎದುರಿಸುತ್ತೇನೆ ಎಂದರು.

ಈ ವೇಳೆ ಸಂಸದ ಪ್ರತಾಪ್‌ಸಿಂಹ, ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ, ಮುಖಂಡರಾದ ಕೆ.ಕೆ.ಜಯದೇವ್, ಸುಬ್ಬಣ್ಣ, ನಗರಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ, ಖಾದಿ ಗ್ರಾಮೋದ್ಯೋಗ ಮಂಡಳಿ ನಿಗಮ ಮಾಜಿ ಅಧ್ಯಕ್ಷ ಎನ್.ಆರ್.ಕೃಷ್ಣಪ್ಪಗೌಡ, ಜಿಪಂ ಮಾಜಿ ಸದಸ್ಯರಾದ ಸದಾನಂದ, ಸಿದ್ದವೀರಪ್ಪ ತಾಪಂ ಮಾಜಿ ಸದಸ್ಯ ಸಿ.ಎಂ.ಮಹದೇವಯ್ಯ, ತಾಲೂಕು ಬಿಜೆಪಿ ಅಧ್ಯಕ್ಷ ಪಿ.ಮಹೇಶ್, ವರುಣಾ ಕ್ಷೇತ್ರದ ಬಿಜೆಪಿ ಅಧ್ಯಕ್ಷ ವಿಜಯ ಕುಮಾರ್, ಮುಖಂಡರಾದ ಮಲ್ಲೇಶ್, ಸಿದ್ದರಾಜು, ರಾಜು, ಮಹೇಶ್, ಮಂಜುನಾಥ್, ಗಿರೀಶ್ ಸೇರಿದಂತೆ ಕಾರ್ಯಕರ್ತರಿದ್ದರು.



# ನನ್ನ ಅವಧಿಯಲ್ಲಿ ಶಿಕ್ಷಣ, ನೀರಾವರಿ, ಆರೋಗ್ಯ ಕ್ಷೇತ್ರಕ್ಕೆ ಒತ್ತು

### ಸಂವಾದದಲ್ಲಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ, ಶಾಸಕ ಹೆಚ್.ಪಿ.ಮಂಜುನಾಥ್

ಹುಣಸೂರು, ಏ.13– ನನ್ನ ಅಧಿಕಾರವಧಿಯಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡಿ ಕ್ಷೇತ್ರದಲ್ಲಿ 8 ಸ್ನಾತಕೋತ್ತರ ಪದವಿ ಕಾಲೇಜು, ಒಂದು ಸಂಶೋಧನಾ ಕೇಂದ್ರ ತೆರೆಯುವ ಮೂಲಕ ಆರೋಗ್ಯ ಮತ್ತು ನೀರಾವರಿ ಯೋಜನೆಗಳಿಗೆ ಆದ್ಯತೆ ನೀಡಿದ್ದೇನೆ ಎಂದು ಹುಣಸೂರು ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ, ಶಾಸಕ ಹೆಚ್.ಪಿ.ಮಂಜುನಾಥ್ ತಿಳಿಸಿದರು.



ನಗರದ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಸಂವಾದದಲ್ಲಿ ಮಾತನಾಡಿದ ಅವರು, ನನ್ನ ಅಧಿಕಾರವಧಿಯಲ್ಲಿ ಸಿದ್ದರಾಮಯ್ಯ ಸರ್ಕಾರವಿದ್ದಾಗ ಸಾಕಷ್ಟು ಅನುದಾನ ತಂದು ತಾಲೂಕಿನ ಅಭಿವೃದ್ಧಿ ಮಾಡಿದ್ದೇನೆ. ಮಾಜಿ ಮುಖ್ಯಮಂತ್ರಿ ದಿ.ಡಿ.ದೇವರಾಜ ಅರಸು ಅವರು ತಮ್ಮ ಅಧಿಕಾರವಧಿಯಲ್ಲಿ 4 ಏತ ನೀರಾವರಿ ಯೋಜನೆಗಳನ್ನು ಜಾರಿಗೊಳಿಸಿದ್ದರು. ಅವರ ಬಳಿಕ ಬಂದ ಯಾವ ಶಾಸಕರು ಏತ ನೀರಾವರಿ ಯೋಜನೆ ಜಾರಿಗೊಳಿಸಿರಲಿಲ್ಲ. ಆದರೆ ನಾನು ಶಾಸಕನಾದ ಬಳಿಕ 7 ಏತ ನೀರಾವರಿ ಯೋಜನೆಗಳನ್ನು ಜಾರಿಗೊಳಿಸಿ 47 ಕೆರೆಗಳಿಗೆ ನೀರು ತುಂಬಿಸುವ ಕೆಲಸ ಮಾಡಿರುವುದು ಸಂತಸ ತಂದಿದೆ. ಜೊತೆಗೆ 271 ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆ ಜಾರಿಗೊಳಿಸಿ ತಾಲೂಕಿನಲ್ಲಿ ನೀರಿನ ಸಮಸ್ಯೆ ಬಗೆಹರಿಸಿದ್ದೇನೆ ಎಂದರು. ದಿ.ಡಿ.ದೇವರಾಜ ಅರಸು ಅವರ ಕಾಲಿನ ಧೂಳಿಗೂ ಸಮನಲ್ಲದ ನಾನು ಜನ ಮೆಚ್ಚುವ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ ತೃಪ್ತಿ ನನಗಿದೆ. ನನ್ನ ಅಧಿಕಾರವಧಿಯಲ್ಲಿ ಆರೋಗ್ಯ, ಶಿಕ್ಷಣ, ಕೃಷಿ ಸೇರಿದಂತೆ ಇನ್ನಿತರ ಕ್ಷೇತ್ರಗಳಿಗೆ ಆದ್ಯತೆ ನೀಡಿದ್ದೇನೆ ಎಂದರು. ತಾಲೂಕು ಕೇಂದ್ರದಲ್ಲಿ ರಾಜ್ಯದಲ್ಲೇ ಹೆಚ್ಚು ಎಂಎ ಕೋರ್ಸ್‌ಗಳನ್ನು ನಮ್ಮ ಹುಣಸೂರು ಸರ್ಕಾರಿ ಕಾಲೇಜಿನಲ್ಲಿ ಪ್ರಾರಂಭಿಸಲಾಗಿದೆ. ಅಲ್ಲದೇ ನಮ್ಮ ತಾಯಿ ಹೆಸರಲ್ಲಿ ಸಂಶೋಧನಾ ಕೇಂದ್ರವನ್ನು ತೆರೆಯಲಾಗಿದೆ ಎಂದರು.

**ಬಿರ್ಸಾ ಮುಂಡಾ ಭವನ:** ರಾಜ್ಯದಲ್ಲೇ ಪ್ರಪ್ರಥಮ ಬಾರಿಗೆ ಆದಿವಾಸಿಗಳಿಗಾಗಿ ಬಿರ್ಸಾ ಮುಂಡಾ ಭವನವನ್ನು ಹುಣಸೂರಲ್ಲಿ ನಿರ್ಮಿಸಲಾಗಿದೆ. ಇದು ನನಗೆ ಸಂತಸ ತಂದಿದೆ ಎಂದರು. ಜಿಟಿಟಿಸಿ(ಗೌರ್ನಮೆಂಟ್ ಟೂಲ್ಸ್ ಆಂಡ್ ಟ್ರೈನಿಂಗ್ ಸೆಂಟರ್) ತೆರೆದು ದುಡಿಯುವ ಕೈಗಳಿಗೆ ಕೆಲಸ ಕೊಟ್ಟಿದ್ದೇನೆ. ಜೊತೆಗೆ ಗಾರ್ಮೆಂಟ್‌ಗೆ ಜಾಗ ಗುರುತಿಸಿದ್ದು, ಹಣ ಬಿಡುಗಡೆಯಾಗದೆ ಕೆಲಸ ಅರ್ಧಕ್ಕೆ ನಿಂತಿದೆ. ಕಾರಣ ಬಿಜೆಪಿ ಸರ್ಕಾರ ಅನುದಾನ ಕೊಡದೆ ನನ್ನನ್ನು ಕಡೆಗಣಿಸಿದೆ ಎಂದು ಆರೋಪಿಸಿದರು.

ಈ ಬಾರಿಯ ಚುನಾವಣೆಯಲ್ಲಿ ತಾಲೂಕಿನ ಜನರ ಆಶೀರ್ವಾದಿಂದ ಗೆದ್ದರೆ, ನಮ್ಮ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ ರೆವಿನ್ಯೂ ಇಲಾಖೆಗಳನ್ನು ಹೋಬಳಿ ಮಟ್ಟಕ್ಕೆ ವರ್ಗಾವಣೆ ಮಾಡಿ ರೈತರ ಹಿತ ಕಾಪಾಡುವುದು ಸೇರಿದಂತೆ ಉಳಿದಿರುವ ಸಾಕಷ್ಟು ಕೆಲಸಗಳನ್ನು ಪೂರ್ಣಗೊಳಿಸಲು ಶ್ರಮ ವಹಿಸುತ್ತೇನೆ ಎಂದರು.

ತಾಲೂಕಿನ ಮತದಾರರ ಮನಸ್ಸಿನಲ್ಲಿರುವ ಭಾವನೆಯೇ ಬೇರೆ. ಎದುರಾಳಿಗಳ ಬಾಯಲ್ಲಿರುವ ವಿಷಯಗಳೇ ಬೇರೆ. ಹೀಗಾಗಿ ನಾನು ಮತದಾರರನ್ನು ನಂಬಿದ್ದೇನೆ. ಈ ಬಾರಿ ನನಗೆ ಹೆಚ್ಚು ಮತ ನೀಡಿ ಗೆಲ್ಲಿಸುತ್ತಾರೆ ಎಂಬ ಭರವಸೆ ಇದೆ. ನನ್ನ 15 ವರ್ಷಗಳ ಅಧಿಕಾರವಧಿಯಲ್ಲಿ ತಾಲೂಕಿನಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡುವ ಮೂಲಕ, ಜನತೆ ಶಾಂತಿ, ನೆಮ್ಮದಿಯಿಂದ ಬದುಕಲು ಶ್ರಮಿಸಿದ್ದೇನೆ. ನಾನು ಮಾಡಿದ ಕೆಲಸಕ್ಕೆ ಒಳ್ಳೆಯ ಹೊಗಳಿಕೆ ಬಂದರೆ ನನ್ನ ವಿರೋಧಿಗಳು ಅದನ್ನು ಬೇರೆ ರೀತಿ ಅರ್ಥೈಸಿ ನಮ್ಮನ್ನು ದೂರುವ ಪರಿಸ್ಥಿತಿ ಎದುರಿಸಿದ್ದೇನೆ ಎಂದರು. ಸಂವಾದದಲ್ಲಿ ಪತ್ರಕರ್ತರ ಸಂಘದ ಅಧ್ಯಕ್ಷ ಕೃಷ್ಣಕುಮಾರ್, ಪ್ರಧಾನ ಕಾರ್ಯದರ್ಶಿ ಮಹದೇವ್ ಉಪಸ್ಥಿತರಿದ್ದರು.

## ನೇಮಕ

ಹುಣಸೂರು, ಏ.13– ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಹಿರಿಯ ಉಪಾಧ್ಯಕ್ಷರಾಗಿ ಹುಣಸೂರಿನ ಎಸ್.ಜಯರಾಮು ಅವರನ್ನು ನೇಮಕ ಮಾಡಿ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಆದೇಶ ಹೊರಡಿಸಿದ್ದಾರೆ.



**14ನೇ ವರ್ಷದ ಸವಿನೆನಪು**



ಶ್ರೀಮತಿ ಕೆ. ಭಾಗ್ಯಲಕ್ಷ್ಮಿ
ಎಂ.ಎ., ಉಪನ್ಯಾಸಕರು ಸ.ಪ.ಪೂ. ಕಾಲೇಜು, ಶ್ರೀರಂಗಪಟ್ಟಣ

ನೀವು ನಮ್ಮನ್ನಗಲಿ ಇಂದಿಗೆ 14 ವರ್ಷ ಕಳೆದರೂ ನಿಮ್ಮ ನೆನಪಿನಲ್ಲಿರುವ,
ದುಃಖಿತಪ್ತರು:
ಪತಿ: ಕೆ.ಹೆಚ್. ಕುಮಾರ್ ಮತ್ತು ಕುಟುಂಬವರ್ಗದವರು



**9ನೇ ವರ್ಷದ ಸವಿನೆನಪು**



ಸಿದ್ದಯ್ಯ.ಎಂ
ನೀವು ನಮ್ಮನ್ನಗಲಿ ಇಂದಿಗೆ 9 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖಿತಪ್ತ: ಕುಟುಂಬವರ್ಗದವರು



**ಮೈಸೂರು ಮಿತ್ರ 43**
**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು



**SREE CAUVERY EDUCATIONAL INSTITUTIONS, MYSORE**
Adichunchanagiri Road, K - Block, Kuvempunagar, Mysore - 570023.
Email: sceioffice@gmail.com Website : sreecauveryinstitution.org

SCEI/MYS/2022-23 **EMPLOYMENT NOTICE** Date: 12.04.2023

Applications are invited for the following post of Teachers who possess prescribed qualifications for the post noted against the posts

| Teachers | Qualification | Number of Posts |
|---|---|---|
| Nursery Teacher | TCH or NST | 01 |
| Science | D.Ed or B.Ed | 01 |
| Kannada Major | M.A in Kannada with B.Ed | 01 |
| Social Science | B.A or M.A with B.Ed | 01 |
| English | M.A in English with B.Ed | 01 |
| Physical Education | M.P.Ed / B.P.Ed NCC certificate preferable | 01 |
| Ayah | Literate | 01 |

Interested Candidate can drop their Resume to the office on or before 25/04/2023
Contact No. 0821-2566942
Sd/- Hon. Secretary

